## ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ

ಕಬ್ಬನ್ ಉದ್ಯಾನವನ, ಬೆಂಗಳೂರು.

# ಕರ್ನಾಟಕ ರಾಜ್ಯ

# 7ನೇ ವೇತನ ಆಯೋಗದ ಪ್ರಶ್ನಾವಳಿಗಳಿಗೆ ಸಲ್ಲಿಸಿದ ಉತ್ತರಗಳು

**ದಿನಾಂಕ: 10-02-2023, ಬೆಂಗಳೂರು**

# ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ

## ಕಬ್ಬನ್ ಉದ್ಯಾನವನ, ಬೆಂಗಳೂರು.

### ರಾಜ್ಯ 7ನೇ ವೇತನ ಆಯೋಗದ ಪ್ರಶ್ನಾವಳಿಗಳಿಗೆ ಸಲ್ಲಿಸಲಾದ ಉತ್ತರಗಳ ಮುಖ್ಯಾಂಶಗಳು

ದಿನಾಂಕ: 10–2–2023 ಸಮಯ:1:00 ಕ್ಕೆ ಸ್ಥಳ: ವೇತನ ಆಯೋಗದ ಕಚೇರಿ ಬೆಂಗಳೂರು

| | |
|---|---|
| 1 | **ಹೊಸ ವೇತನ ಶ್ರೇಣಿಗಳ ರಚನೆಗೆ ಅಳವಡಿಸಿಕೊಂಡಿರುವ ಮಾನದಂಡಗಳು:–**<br>• **ಸಮಾನ ಕೆಲಸಕ್ಕೆ–ಸಮಾನ ವೇತನ, ವಿದ್ಯಾರ್ಹತೆ, ಜವಾಬ್ದಾರಿಯ ಗುಣಮಟ್ಟ, ಕಾರ್ಯಕ್ಷಮತೆ, ಕಾರ್ಯಕ್ಷೇತ್ರದ ವ್ಯಾಪ್ತಿ, ಜೊತೆಗೆ ನೆರೆ ರಾಜ್ಯ ಮತ್ತು ಕೇಂದ್ರ ವೇತನ ಮತ್ತು ಭತ್ಯೆಗಳ ಹೋಲಿಕೆ** |
| 2 | **ಕಚೇರಿ ವೇಳೆಯನ್ನು ಹೆಚ್ಚಿಸಿ, ವಾರದ ಕರ್ತವ್ಯ ದಿನಗಳನ್ನು ಕಡಿಮೆ ಮಾಡುವ ಬಗ್ಗೆ.**<br>**ಸರ್ಕಾರಕ್ಕೆ ಸಾರಿಗೆ, ವಿದ್ಯುತ್, ನೀರು, ಟ್ರಾಫಿಕ್, ಸರ್ಕಾರಿ ವಾಹನಗಳ ಇಂಧನ ಹಾಗೂ ನಿರ್ವಹಣೆ ವೆಚ್ಚದಲ್ಲಿ ಆರ್ಥಿಕ ಮಿತವ್ಯಯ ಸಾಧಿಸುವ ನಿಟ್ಟಿನಲ್ಲಿ: ಕೇಂದ್ರ ಸರ್ಕಾರಿ ನೌಕರರಿಗಿರುವಂತೆ**<br>• ಬೆಳಿಗ್ಗೆ 10.00 ಕ್ಕೆ ಬದಲಾಗಿ ಬೆಳಿಗ್ಗೆ 9.30ರಿಂದ ಹಾಗೂ ಸಂಜೆ 5.30ಕ್ಕೆ ಬದಲಾಗಿ ಸಂಜೆ 6.00 ರವರೆಗೆ ಬದಲಾಯಿಸುವುದು.<br>• ತಿಂಗಳ ಮೊದಲ ಮತ್ತು ಮೂರನೆ ಶನಿವಾರ ಸಾರ್ವತ್ರಿಕ ರಜೆ ನೀಡುವುದು. |
| 3 | **ವೇತನ ಹೆಚ್ಚಳ ಹೊರೆ–ಸರಿದೂಗಿಸುವುದು.**<br>• ಅನಗತ್ಯ ವೆಚ್ಚಗಳಿಗೆ ಕಡಿವಾಣ ಹಾಕುವುದು.<br>• ಆಡಳಿತದಲ್ಲಿ ತಂತ್ರಜ್ಞಾನವನ್ನು ಹೆಚ್ಚಿಸುವುದು.<br>• ನೌಕರರಲ್ಲಿ ದಕ್ಷತೆ ಮತ್ತು ನೈಪುಣ್ಯತೆ ಹಾಗೂ ಕ್ರಿಯಾಶೀಲತೆಯನ್ನು ಹೆಚ್ಚಿಸಲು ಎಟಿಐ ಮಾದರಿ ತರಬೇತಿ ನೀಡುವುದು |
| 4 | **ವೇತನ ಪರಿಷ್ಕರಣೆಗೆ ಕೇಂದ್ರ–ನೆರೆ ರಾಜ್ಯಗಳ ವೇತನ ಶ್ರೇಣಿಗಳನ್ನು ಪರಿಗಣಿಸಬೇಕೆ?**<br>• ಅನುಕೂಲವಾಗುವ ಕೇಂದ್ರ ಮತ್ತು ಕೇರಳ ರಾಜ್ಯ ನೌಕರರ ವೇತನ–ಭತ್ಯೆಗಳನ್ನು ಪರಿಗಣಿಸುವುದು |
| 5 | **ಕೇಂದ್ರಕ್ಕೆ ಸಮಾನ ವೇತನ ನೀಡುವ ಸಾಧ್ಯತೆ ಬಗ್ಗೆ ಸಮಂಜಸವಾದ ಸಮರ್ಥನೆಗಳು:–**<br>• 6ನೇ ವೇತನ ಆಯೋಗದಲ್ಲಿ ಪ್ರಸ್ತುತ ಮೂಲ ವೇತನಕ್ಕೆ ಹಾಲಿ ಇರುವ ಶೇ.31ರಷ್ಟು ತುಟ್ಟಿಭತ್ಯೆಯನ್ನು ವಿಲೀನಗೊಳಿಸಿ ಶೇ. 40% ರಷ್ಟು ಫಿಟ್‌ಮೆಂಟ್ ಸೌಲಭ್ಯವನ್ನು ದಿನಾಂಕ: 01.07.2022ರಿಂದ ಜಾರಿಗೆ ತರುವುದು. |

| | |
|---|---|
| | • 2026ರಲ್ಲಿ ಪರಿಷ್ಕರಣೆಯಾಗಲಿರುವ ಕೇಂದ್ರ ವೇತನ ಮತ್ತು ಭತ್ಯೆಗಳನ್ನು ರಾಜ್ಯ ಸರ್ಕಾರಿ ನೌಕರರಿಗೂ ಈಗಾಗಲೇ 26 ರಾಜ್ಯಗಳಲ್ಲಿರುವಂತೆ ಯಥಾವತ್ತಾಗಿ ಅನ್ವಯಗೊಳಿಸಲು ಆಯೋಗವು ಸರ್ಕಾರಕ್ಕೆ ಶಿಫಾರಸ್ಸು ಮಾಡುವುದು. |
| 6 | **ಹಾಲಿ ಇರುವ ಮುಖ್ಯ ವೇತನ ಶ್ರೇಣಿ ಹಾಗೂ 25 ಪ್ರತ್ಯೇಕ ವೇತನ ಶ್ರೇಣಿಗಳನ್ನು ಮುಂದುವರೆಸಬಹುದೇ?**<br>• ಹಾಲಿ ಇರುವ 25 ಮಾಸ್ಟರ್ ವೇತನ ಶ್ರೇಣಿ ಹಾಗೂ 92 ವೇತನ ಹಂತಗಳನ್ನು ಮುಂದುವರೆಸುವುದು. |
| 7 | **ನೂತನ ವೇತನ ಶ್ರೇಣಿಗಳನ್ನು ಯಾವ ಆಧಾರ ಮೇಲೆ ರೂಪಿಸಬೇಕು?**<br>• ಹೊಸ ವೇತನ ಶ್ರೇಣಿಗಳನ್ನು 2022ನೇ ಸಾಲಿನ ಬೆಲೆ ಸೂಚ್ಯಾಂಕದ 12 ತಿಂಗಳ ಸರಾಸರಿಯ ಆಧಾರದ ಮೇಲೆ ವೇತನ ಶ್ರೇಣಿಗಳ ದರಗಳನ್ನು ನಿಗದಿಪಡಿಸುವುದು. |
| 8 | **ಪ್ರಸ್ತುತ ವೇತನ ಮತ್ತು ಭತ್ಯೆಗಳು ಸೇರಿ ಮಾಹೆಯಾನ ಎಷ್ಟಿರಬೇಕು?**<br>• ಕನಿಷ್ಟ 40% ಫಿಟ್‌ಮೆಂಟ್ ನೊಂದಿಗೆ ಹಾಗೂ ಜೀವನ ನಿರ್ವಹಣೆಯನ್ನಾಧರಿಸಿ....<br>• ಗ್ರೂಪ್ 'ಡಿ' ನೌಕರನ ಕನಿಷ್ಠ ಮೂಲ ವೇತನ ರೂ. 31,000 ಕ್ಕೆ ನಿಗದಿಗೊಳಿಸುವುದು. |
| 9 | **ಮುಖ್ಯ ವೇತನ ಶ್ರೇಣಿಯ ಗರಿಷ್ಠ ಹಾಗೂ ಕನಿಷ್ಠ ವೇತನಗಳ ನಡುವಿನ ಅನುಪಾತ ಪುನರ್ ಪರಿಶೀಲನೆ ಆಗಬೇಕೆ?**<br>• ಪರಿಷ್ಕರಿಸಲಿರುವ ವೇತನ ಶ್ರೇಣಿಗಳಲ್ಲಿನ ಕನಿಷ್ಠ ಹಾಗೂ ಗರಿಷ್ಠ ವೇತನದ ನಡುವಿನ ಈಗಿರುವ ಅನುಪಾತ 1:5,20 ರ ಬದಲಾಗಿ 1:8.86 ಕ್ಕೆ ನಿಗದಿಪಡಿಸಿ ಶಿಫಾರಸ್ಸು ಮಾಡುವುದು. |
| 10 | **ವೇತನ ಶ್ರೇಣಿಗಳ ನಡುವೆ ಇರುವ ಹೋಲಿಕೆ–ಜವಾಬ್ದಾರಿಗಳಿಗೆ ಅನುಗುಣವಾಗಿದೆಯೇ?**<br>• ವೇತನ ಶ್ರೇಣಿಗಳ ನಡುವಿನ ಸಾಪೇಕ್ಷೆಗಳನ್ನು (Relativity) ಸಾಧ್ಯವಾದಷ್ಟು ಮಟ್ಟಿಗೆ ಹಾಗೆಯೇ ಮುಂದುವರಿಸುವುದು ಸಮಂಜಸವಾಗಿರುತ್ತದೆ. |
| 11 | **ಸರ್ಕಾರಿ ನೌಕರರಿಗೆ ಸೇವೆಯಲ್ಲಿ ಎಷ್ಟು ಮುಂಬಡ್ತಿಗಳಿರಬೇಕು.**<br>• ಒಬ್ಬ ಸರ್ಕಾರಿ ನೌಕರನಿಗೆ ಸೇವಾವಧಿಯಲ್ಲಿ ಕನಿಷ್ಠ 3–4 ಮುಂಬಡ್ತಿ ಅವಕಾಶಗಳು ಲಭ್ಯವಾಗುವಂತೆ ಶಿಫಾರಸ್ಸು ಮಾಡುವುದು. |
| 12 | **ಕನಿಷ್ಟ ವಾರ್ಷಿಕ ವೇತನ ಬಡ್ತಿ ದರ.**<br>• ವಾರ್ಷಿಕ ವೇತನ ಬಡ್ತಿಯ ದರವನ್ನು ಕೇರಳ ರಾಜ್ಯದ ಮಾದರಿಯಲ್ಲಿ ಮೂಲ ವೇತನಕ್ಕೆ ಶೇ.3.04% ರಷ್ಟು ನಿಗಧಿ ಪಡಿಸುವುದು. |
| 13 | **ಸ್ಥಗಿತ ವೇತನ ಬಡ್ತಿ ಸಂಖ್ಯೆ ಬಗ್ಗೆ:**<br>• ಸ್ಥಗಿತ ವೇತನ ಬಡ್ತಿಯನ್ನು ಹಾಲಿ ಇರುವ 8 ರಿಂದ 12 ಕ್ಕೆ ಹೆಚ್ಚಿಸುವುದು ಹಾಗೂ ಕಚೇರಿ ಮುಖ್ಯಸ್ಥರು ಮಂಜೂರು ಮಾಡುವುದು. |

| | |
|---|---|
| 14 | **ಸಚಿವಾಲಯ–ಸಚಿವಾಲಯೇತರ ಸಮಾನ ಹುದ್ದೆಗಳ ವೇತನ ಸಮಾನಾಂತರಗೊಳಿಸುವುದು.**<br>• ಸಚಿವಾಲಯ–ಸಚಿವಾಲಯೇತರ ಸಮಾನ ಹುದ್ದೆಗಳ ವೇತನವನ್ನು ಸಮಾನಗೊಳಿಸಲು ಶಿಫಾರಸ್ಸು ಮಾಡುವುದು.<br>• ಸಚಿವಾಲಯ ಸಿಬ್ಬಂದಿಗಳಿಗೆ ಕೇಂದ್ರ ಸಚಿವಾಲಯದ ಮಾದರಿಯಲ್ಲಿ ಹಾಗೂ ವಿಧಾನಸಭೆ/ವಿಧಾನ ಪರಿಷತ್ ಸಚಿವಾಲಯಗಳ ನೌಕರರಿಗೆ ಲೋಕಸಭೆ/ರಾಜ್ಯಸಭೆ ಸಚಿವಾಲಯ ಮಾದರಿಯಲ್ಲಿ ಪ್ರತ್ಯೇಕ ವೇತನ ಶ್ರೇಣಿ ಮತ್ತು ಭತ್ಯೆಗಳನ್ನು ಮಂಜೂರು ಮಾಡಲು ಶಿಫಾರಸ್ಸು ಮಾಡುವುದು. |
| 15 | **ವಿಶೇಷ ಭತ್ಯೆಗಳು:–**<br>• ಅತ್ಯಂತ ವಿಶೇಷ–ಕ್ಲಿಷ್ಟಕರ, ಅನಾರೋಗ್ಯಕರ ವಾತಾವರಣದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರಿಗೆ ಪ್ರಸ್ತುತ ನೀಡುತ್ತಿರುವ ವಿಶೇಷ ಭತ್ಯೆಯನ್ನು ದ್ವಿಗುಣಗೊಳಿಸುವುದು. |
| 16 | **ತುಟ್ಟಿಭತ್ಯೆ:–**<br>• ಪ್ರತಿ 06 ತಿಂಗಳಿಗೆ ನೀಡಲಾಗುವ ತುಟ್ಟಿಭತ್ಯೆಯನ್ನು ಪರಿಷ್ಕೃತ ವೇತನದಲ್ಲಿ ಕೇಂದ್ರ ಸರ್ಕಾರಿ ನೌಕರರಿಗೆ ಸರಿಸಮಾನವಾಗಿ ರಾಜ್ಯ ಸರ್ಕಾರಿ ನೌಕರರಿಗೆ ವಿಳಂಬವಿಲ್ಲದೆ ನೀಡುವುದು. |
| 17 | **ಮನೆ ಬಾಡಿಗೆ ಭತ್ಯೆ:**<br>• **ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯಲ್ಲಿ ಲಭ್ಯವಿರುವ 2021ರ ಜನಸಂಖ್ಯೆಯ ಮಾಹಿತಿಯನ್ನಾಧರಿಸಿ ನಗರ ಹಾಗೂ ಪಟ್ಟಣ ಪ್ರದೇಶಗಳನ್ನು ಪುನರ್‌ವರ್ಗೀಕರಿಸುವುದು ಹಾಗೂ ಬಿ.ಬಿ.ಎಂ.ಪಿ ವ್ಯಾಪ್ತಿಯನ್ನು ಬೆಂಗಳೂರು ನಗರ ಜಿಲ್ಲೆ ಗಡಿ ವ್ಯಾಪ್ತಿಗೆ ವಿಸ್ತರಿಸುವುದು. ಪ್ರಸ್ತುತ ಜೀವನ ನಿರ್ವಹಣೆ ಆಧಾರದ ಮೇಲೆ ಈ ಕೆಳಕಂಡ ದರದಲ್ಲಿ ಮನೆ ಬಾಡಿಗೆ ಭತ್ಯೆ ನೀಡುವುದು.**<br>**1. 'ಎ' ವರ್ಗಕ್ಕೆ –ಶೇ 24% ರಿಂದ ಶೇ.30%,**<br>**2. 'ಬಿ' ವರ್ಗಕ್ಕೆ– ಶೇ 16% ರಿಂದ ಶೇ.20%,**<br>**3. 'ಸಿ' ವರ್ಗಕ್ಕೆ ಶೇ.8% ರಿಂದ ಶೇ 15%**<br>• **ಕೇಂದ್ರ ಮಾದರಿಯಲ್ಲಿ ತುಟ್ಟಿಭತ್ಯೆಯು ಶೇ.25% ಮತ್ತು ಶೇ.50%ರ ಹಂತವನ್ನು ತಲುಪಿದಾಗ ಮನೆ ಬಾಡಿಗೆ ಭತ್ಯೆಗಳನ್ನು ಸ್ವಯಂಚಾಲಿತವಾಗಿ ಶೇ. 3% ರಷ್ಟು ಹೆಚ್ಚಿಸುವುದು.** |
| 18 | **ರಜಾ ಪ್ರಯಾಣ ರಿಯಾಯಿತಿ (LTC)**<br>ನಮ್ಮ ರಾಜ್ಯದಲ್ಲಿ ಸೇವಾವಧಿಯಲ್ಲಿ 2 ಬಾರಿ ಇದ್ದು, ಕೇಂದ್ರ ಸರ್ಕಾರದಲ್ಲಿ **(LTC)** ಸೌಲಭ್ಯವುಪ್ರತಿ 4 ವರ್ಷಕ್ಕೊಮ್ಮೆ ನೀಡುತ್ತಿದ್ದು, ಆದರಂತೆ ನೀಡುವುದು. ಹಾಗೂ ದಿನಭತ್ಯೆಯನ್ನು ಸಹ ನೀಡುವುದು |
| 19 | **ಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆ (KASS)**<br>• ಈ ಯೋಜನೆಯನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಕಾರ್ಯೋನ್ಮುಖವಾಗಿದೆ. |

| | |
|---|---|
| | • ಸರ್ಕಾರಿ ನೌಕರರು ವಂತಿಗೆ ನೀಡುವುದರಿಂದ ಅವಲಂಬಿತರ ಆದಾಯದ ಮಿತಿಯನ್ನು ತೆಗೆದುಹಾಕುವುದು.<br>• ವಿವಾಹಿತ ಮಹಿಳಾ ಸರ್ಕಾರಿ ನೌಕರರ ತಂದೆ–ತಾಯಿಯವರನ್ನು ಈ ಯೋಜನೆಯ ವ್ಯಾಪ್ತಿಗೆ ತರುವುದು.<br>• ಎಲ್ಲಾ ವೈದ್ಯಕೀಯ ಸೇವೆಗಳು ವಿಳಂಬವಿಲ್ಲದೇ ಸರಳವಾಗಿ ಹಾಗೂ ತ್ವರಿತಗತಿಯಲ್ಲಿ ಲಭ್ಯವಾಗಬೇಕು. |
| 20 | **ಮಹಿಳಾ ಉದ್ಯೋಗಿಗಳ ವಿಶೇಷ ಸಮಸ್ಯೆಗಳ ಕುರಿತು:–**<br>**ಈಗಿರುವ ಸೌಲಭ್ಯಗಳ ಜೊತೆಗೆ ಕೆಳಗಿನ ಸೌಲಭ್ಯಗಳನ್ನು ಒದಗಿಸುವುದು.**<br>• ಮಕ್ಕಳಿಗೆ ದಿನಕ್ಕೆ 2 ಬಾರಿ ಸ್ತನ್ಯಪಾನಕ್ಕಾಗಿ ಅವಕಾಶ ನೀಡುವುದು<br>• ನಿಗದಿತ ವೇಳೆಯ ನಂತರ ಕೆಲಸ ಮಾಡಿದ ಸಂದರ್ಭದಲ್ಲಿ ಸುರಕ್ಷಿತವಾಗಿ ಮನೆಗೆ ಬಿಡುವುದು.<br>• ತಮ್ಮ ಕಾರ್ಯವ್ಯಾಪ್ತಿಯಲ್ಲಿ ಶುಚಿತ್ವವಾದ ಪ್ರತ್ಯೇಕ ಶೌಚಾಲಯಗಳನ್ನು ನಿರ್ಮಿಸುವುದು.<br>• ಬಾಡಿಗೆ ತಾಯ್ತನದ ಮಹಿಳಾ ನೌಕರರಿಗೆ ಶಿಶುಪಾಲನಾ,ಹೆರಿಗೆ ರಜೆ ಮಂಜೂರು ಮಾಡುವುದು<br>• ಹಾಲಿ ಇರುವ ಶಿಶುಪಾಲನಾ ರಜೆಯ ಮಂಜೂರಾತಿಯನ್ನು ಕನಿಷ್ಠ 15 ದಿನಗಳ ಬದಲಾಗಿ 7 ದಿನಗಳಿಗೆ ನಿಗಧಿಪಡಿಸುವುದು.<br>• ಪತ್ನಿ ಇಲ್ಲಾದ ಪುರಷ ನೌಕರರಿಗೆ ಮಕ್ಕಳ ಪಾಲನೆ ಹಿತದೃಷ್ಟಿಯಿಂದ ಶಿಶುಪಾಲನ ರಜೆಯನ್ನು ವಿಸ್ತರಿಸುವಂತೆ. |
| 21 | **ಇತರೆ ಭತ್ಯೆಗಳು:–**<br>• ಬೆಟ್ಟಗುಡ್ಡಗಳಿರುವ ಪ್ರದೇಶಗಳಲ್ಲಿ ಕರ್ತವ್ಯ ನಿರ್ವಹಿಸುವ ಎಲ್ಲಾ ನೌಕರರಿಗೆ ಗಿರಿಭತ್ಯೆಯನ್ನು ಮಂಜೂರು ಮಾಡುವುದು.<br>• ಪ್ರಸ್ತುತ ನೀಡುತ್ತಿರುವ ವಾಹನ ಭತ್ಯೆ, ಸಮವಸ್ತ್ರ ಭತ್ಯೆ, ಅನ್ಯಸೇವೆ ಭತ್ಯೆ, ವಿಶೇಷಭತ್ಯೆಗಳನ್ನು ದ್ವಿಗುಣಗೊಳಿಸುವುದು.<br>• ನಿಗದಿತ ಪ್ರಯಾಣ ಭತ್ಯೆ, ಅನ್ಯಸೇವೆ ಭತ್ಯೆ ಹಾಗೂ ಪ್ರಭಾರ ಭತ್ಯೆ ದರವನ್ನು ಹೆಚ್ಚಿಸುವುದು. |
| 22 | **ವರ್ಗಾವಣೆ ಅನುದಾನ–ಸಾಮಾನು ಸಾಗಣೆ ವೆಚ್ಚ:–**<br>• ಕೇಂದ್ರ ಮಾದರಿಯಂತೆ ವರ್ಗಾವಣೆಗೊಂಡ/ವಯೋನಿವೃತ್ತಿ ಹೊಂದುವ ರಾಜ್ಯ ಸರ್ಕಾರಿ ನೌಕರರಿಗೆ ಕೊನೆ ಮಾಹೆಯ ಮೂಲವೇತನದ ಶೇ. 80% ರಷ್ಟು ವರ್ಗಾವಣೆ ಅನುದಾನ ಮತ್ತು ಸಾಮಾನು ಸರಂಜಾಮು ಸಾಗಣೆ ಭತ್ಯೆಯನ್ನು ನೀಡುವಂತೆ ಶಿಫಾರಸ್ಸು ಮಾಡುವುದು. |
| 23 | **ಪ್ರಯಾಣ ಭತ್ಯೆ ಹಾಗೂ ದಿನಭತ್ಯೆ:–** |

| | |
|---|---|
| | • ಇಂಧನ ಬೆಲೆ, ಪ್ರಯಾಣ–ಸಾರಿಗೆ ವೆಚ್ಚ, ವಸತಿ ಹಾಗೂ ಊಟ–ಉಪಹಾರಗಳು ದುಬಾರಿಯಾಗಿರುವುದರಿಂದ ಪ್ರಯಾಣ ಭತ್ಯೆ, ದಿನಭತ್ಯೆ ವಿಮಾನ,ರೈಲು ಮತ್ತು ಬಸ್ಸಿನ ದರಗಳನ್ನು ಹೆಚ್ಚಿಸುವುದು.(ವಿವರಗಳೊಂದಿಗೆ ಪ್ರಸ್ತಾಪಿಸಿದೆ) |
| 24 | **(ಎ)ರಜೆ ಸೌಲಭ್ಯಗಳು ಮತ್ತು ಗಳಿಕೆ ರಜೆ ಅಧ್ಯರ್ಪಣೆ ನಗಧೀಕರಣ ಮತ್ತು ನಿವೃತ್ತಿ–ಗಳಿಕೆ ರಜಾ ನಗದೀಕರಣ**<br>• ರಜೆ ಸೌಲಭ್ಯವನ್ನು ಪಡೆಯುವ ಉದ್ದೇಶಕ್ಕಾಗಿ ಮಾತ್ರ ಗಳಿಕೆ ರಜೆಯ ಮಿತಿಯನ್ನು ತೆಗೆದು ಹಾಕುವುದು.<br>• ನಿವೃತ್ತಿ ನಂತರ 300 ಗಳಿಕೆ ರಜಾ ದಿನಗಳ ನಗದೀಕರಣ ಸೌಲಭ್ಯದ ಗರಿಷ್ಠ ಮಿತಿಯನ್ನು 330ಕ್ಕೆ ಹೆಚ್ಚಿಸುವುದು.<br>**(ಬಿ)ಬೈಸಿಕಲ್, ಮೋಟಾರು ವಾಹನ, ಗೃಹ ನಿರ್ಮಾಣ, ಗೃಹ ರಿಪೇರಿ ಮುಂಗಡ**<br>• ರೂ. 25,000–00 ಗಳ ಬಡ್ಡಿರಹಿತ ಹಬ್ಬದ ಮುಂಗಡವನ್ನು ಯಾವುದೇ ಷರತ್ತುಗಳನ್ನು ವಿಧಿಸದೆ ಎಲ್ಲಾ ನೌಕರರಿಗೂ ಮಂಜೂರು ಮಾಡುವುದು.<br>• ಎಲ್ಲಾ ಮುಂಗಡಗಳ ಮೇಲಿನ ಬಡ್ಡಿಯನ್ನು ಕಡಿಮೆ ಮಾಡುವುದು.<br>• ಮುಂಗಡದ ಮೊತ್ತವನ್ನು ಮಾರುಕಟ್ಟೆಗಳಿಗೆ ಅನುಗುಣವಾಗಿ ಹೆಚ್ಚಿಸುವುದು.<br>• ಕನಿಷ್ಠ ವೇತನದ ಮಿತಿಯನ್ನು(Home take Salary) ಶೇ. 60% ರಿಂದ ಶೇ. 40%ಕ್ಕೆ ನಿಗದಿಗೊಳಿಸುವುದು.<br>**(ಸಿ)ಅಂಧ ಮತ್ತು ಅಂಗವಿಕಲ ನೌಕರರಿಗೆ ಈಗ ನೀಡಲಾಗುತ್ತಿರುವ ಮಾಹೆಯಾನ ಮೂಲ ವೇತನದ ಶೇಕಡ 6 ರಂತೆ ವಾಹನ ಭತ್ಯೆ.**<br>• ಅಂಧ ಮತ್ತು ಅಂಗವಿಕಲ ನೌಕರರ ವಾಹನ ಭತ್ಯೆಯನ್ನು ಮೂಲ ವೇತನದ ಶೇ. 6% ರಿಂದ ಶೇ. 10% ಕ್ಕೆ ಹೆಚ್ಚಳ ಮಾಡಲು ಶಿಫಾರಸ್ಸು ಮಾಡುವುದು. |
| 25 | **ಸಾಮೂಹಿಕ ವಿಮಾ ಯೋಜನೆ:–**<br>• ಒಂದು ಯುನಿಟ್ ದರ ರೂ. 120/–ರಿಂದ 1200/ ಕ್ಕೆ ಹೆಚ್ಚಿಸುವ ಮೂಲಕ ವಿಮಾ ಮೊತ್ತವನ್ನು ಹೆಚ್ಚಿಸುವುದು.<br>• ಉಳಿತಾಯ ನಿಧಿ ಮತ್ತು ವಿಮಾ ನಿಧಿ ಸದ್ಯದ 70:30ರ ಅನುಪಾತವನ್ನು 75:25 ಕ್ಕೆ ಮಾರ್ಪಡಿಸುವುದು.<br>• ಉಳಿತಾಯ ನಿಧಿ ಮೇಲಿನ ಬಡ್ಡಿ ದರವನ್ನು ಶೇ.2% ರಷ್ಟು ಹೆಚ್ಚಿಸುವುದು. |
| 26 | **ಸ್ವಇಚ್ಛಾ ನಿವೃತ್ತಿ:–**<br>• ಸ್ವಇಚ್ಛಾ ನಿವೃತ್ತಿಗೆ 15 ವರ್ಷ ಕನಿಷ್ಠ ಸೇವೆ ಅಥವಾ 50 ವರ್ಷ ವಯಸ್ಸು ಎನ್ನುವ ಬದಲಾಗಿ **12 ವರ್ಷಗಳ ಸೇವಾವಧಿ ಅಥವಾ 45 ವರ್ಷಗಳ ವಯಸ್ಸಾಗಿರಬೇಕೆಂದು ತಿದ್ದುಪಡಿ ಮಾಡುವುದು.** |

| | |
|---|---|
| 27 | **ಪಿಂಚಣಿ ಪ್ರಯೋಜನಗಳು:–**<br>• ನಿವೃತ್ತಿ ಪಿಂಚಣಿಗಾಗಿ ಕನಿಷ್ಠ ಸೇವೆ–30 ರಿಂದ 25 ಕ್ಕೆ ಇಳಿಸುವುದು.<br>• ಕುಟುಂಬ/ವಿಶ್ರಾಂತಿ ಪಿಂಚಣಿ– ಕನಿಷ್ಠ ಕುಟುಂಬ ರೂ.16,500ಕ್ಕೆ ಮತ್ತು ಗರಿಷ್ಠ ರೂ.1,50,000ಕ್ಕೆ ಹೆಚ್ಚಿಸುವುದು.<br>• ಮರಣ–ನಿವೃತ್ತಿಉಪದಾನ–ಗರಿಷ್ಠ ಮಿತಿಯನ್ನು 20 ಲಕ್ಷಗಳಿಂದ 25 ಲಕ್ಷಗಳಿಗೆ ಹೆಚ್ಚಿಸುವುದು.<br>• ಪರಿವರ್ತಿತ ಹಣವನ್ನು 15 ವರ್ಷಗಳ ಕಾಲ ಪ್ರತಿ ತಿಂಗಳ ಪಿಂಚಣಿಯಲ್ಲಿ ಕಟಾಯಿಸುವ ಪದ್ಧತಿಯನ್ನು ಕೈಬಿಟ್ಟು 12 ವರ್ಷಗಳ ಕಾಲ ಮಾತ್ರ ಪಿಂಚಣಿಯಲ್ಲಿ ಕಟಾಯಿಸುವುದು. |
| 28 | **ಪಿಂಚಣಿ ಪಾವತಿ ನಿಯಮ ಸರಳೀಕರಣ:–**<br>• ಎಲೆಕ್ಟ್ರಾನಿಕ್ ಸರ್ವೀಸ್ ರಿಜಿಸ್ಟರ್ ವ್ಯವಸ್ಥೆಯನ್ನು ಶೀಘ್ರ ಜಾರಿಗೊಳಿಸಿ ನಿವೃತ್ತಿ ಹೊಂದುವ ನೌಕರರಿಗೆ ಪಿಂಚಣಿ ಸವಲತ್ತುಗಳನ್ನು ಹೆಚ್.ಆರ್.ಎಂ.ಎಸ್. ತಂತ್ರಾಂಶದ ಮೂಲಕವೇ ಪಡೆಯುವ ಅವಕಾಶ ಕಲ್ಪಿಸುವುದು. |
| 29 | **ನಿವೃತ್ತ ಪಿಂಚಣಿದಾರರಿಗೆ ತುಟ್ಟಿಭತ್ಯೆ:–**<br>ಸೇವಾನಿರತ ನೌಕರರಿಗೆ ನೀಡುವ ವಾರ್ಷಿಕ ವೇತನ ಬಡ್ತಿ ದರದಲ್ಲಿಯೇ ನಿವೃತ್ತ ನೌಕರರಿಗೂ ಸಹ ಸಮನಾಂತರ ತುಟ್ಟಿಭತ್ಯೆಯನ್ನು ನೀಡಲು ಶಿಫಾರಸ್ಸು ಮಾಡುವುದು. |
| 30 | **80 ವರ್ಷ ಮೇಲ್ಪಟ್ಟವರಿಗೆ ಹೆಚ್ಚುವರಿ ನಿವೃತ್ತಿ ವೇತನ:**<br>• 80 ವರ್ಷ ಮೇಲ್ಪಟ್ಟವರಿಗೆ ಪಿಂಚಣಿದಾರರಿಗೆ ವಯೋಮಾನವನ್ನಾಧರಿಸಿ ಹೆಚ್ಚುವರಿ ಪಿಂಚಣಿಯನ್ನು ಮಂಜೂರು ಮಾಡಲು ಸರ್ಕಾರಕ್ಕೆ ಶಿಫಾರಸ್ಸು ಮಾಡುವುದು. |
| 31 | **ಕುಟುಂಬ ಪಿಂಚಣಿ:–**<br>• ಹಾಲಿ ಇರುವ ಶೇ. 30% ಕುಟುಂಬ ಪಿಂಚಣಿಯ ಪ್ರಮಾಣವನ್ನು ಮೂಲ ವೇತನದ ಶೇ. 40% ಕ್ಕೆ ಹೆಚ್ಚಳ ಮಾಡುವುದು. |
| 32 | **ರಾಷ್ಟ್ರೀಯ ಪಿಂಚಣಿ ಯೋಜನೆ:–**<br>• ರಾಷ್ಟ್ರದ ಕೆಲವು ರಾಜ್ಯಗಳು ಈಗಾಗಲೇ ಎನ್.ಪಿ.ಎಸ್. ಯೋಜನೆಯನ್ನು ರದ್ದುಪಡಿಸಿರುವ ಮಾದರಿಯಂತೆ ರಾಜ್ಯದಲ್ಲೂ ಸಹ ಎನ್.ಪಿ.ಎಸ್ ಯೋಜನೆಯನ್ನು ರದ್ದುಗೊಳಿಸಿ ದಿನಾಂಕ:01–4–2006 ರಿಂದ ಅನ್ವಯವಾಗುವಂತೆ ಹಳೆ ಪಿಂಚಣಿ ಯೋಜನೆಯನ್ನು ಜಾರಿಗೊಳಿಸಲು ಸರ್ಕಾರಕ್ಕೆ ಶಿಫಾರಸ್ಸು ಮಾಡುವುದು.<br>• ಸೇವೆಯಲ್ಲಿರುವ ಎನ್.ಪಿ.ಎಸ್. ಯೋಜನೆಗೆ ಒಳಪಡುವ ನೌಕರನಿಂದ ಇದುವರೆವಿಗೂ ಕಟಾವಣೆಗೊಂಡಿರುವ ಯೋಜನೆಯ ಒಟ್ಟು ಮೊತ್ತವನ್ನು ನೌಕರನಿಗೆ ಹಿಂದಿರುಗಿಸುವುದು ಅಥವಾ ಸಾಮಾನ್ಯ ಭವಿಷ್ಯನಿಧಿ ಖಾತೆ (ಜಿ.ಪಿ.ಎಫ್) ತೆರೆದು ವರ್ಗಾಯಿಸುವುದು.<br>• ವಯೋನಿವೃತ್ತಿ/ಮೃತಪಟ್ಟಿರುವ ನೌಕರನ ಸೇವಾವಧಿಯಲ್ಲಿ ಕಟಾವಣೆಗೊಂಡ ಎನ್.ಪಿ.ಎಸ್. ಮೊತ್ತವನ್ನು ಅವಲಂಬಿತ ಕುಟುಂಬ ಸದಸ್ಯರಿಗೆ ಮರುಪಾವತಿಸುವುದು. |

| | |
|---|---|
| | • ಈಗಾಗಲೇ ಎನ್.ಪಿ.ಎಸ್. ಯೋಜನೆಗೆ ಒಳಪಟ್ಟು ವಯೋನಿವೃತ್ತಿ/ಮೃತಪಟ್ಟಿರುವ ನೌಕರರಿಗೆ ಹಳೆ ಪಿಂಚಣಿದಾರರ ಮಾದರಿಯಲ್ಲಿ ನಿವೃತ್ತಿ ವೇತನ ಹಾಗೂ ಸೌಲಭ್ಯಗಳನ್ನು ಜಾರಿಗೊಳಿಸುವುದು. |
| 33 | **ಪ್ರಶ್ನಾವಳಿಯಲ್ಲಿ ಒಳಗೊಂಡಿರದ ವಿಷಯಗಳು:–**<br>• 2,50,363 ಖಾಲಿ ಹುದ್ದೆಗಳ ಭರ್ತಿ ಮಾಡಿ ನೌಕರರನ್ನು ಒತ್ತಡದಿಂದ ಮುಕ್ತಿಗೊಳಿಸಿ ಸಮುದಾಯಕ್ಕೆ ಗುಣಮಟ್ಟದ ನಾಗರೀಕ ಸೇವೆಗಳನ್ನು ನೀಡಲು ಶಿಫಾರಸ್ಸು ಮಾಡುವುದು<br>• ಸರ್ಕಾರಿ ನೌಕರರ ಮಕ್ಕಳು ಸರ್ಕಾರಿ ಶಾಲಾ–ಕಾಲೇಜುಗಳಲ್ಲಿ ವ್ಯಾಸಂಗ ಮಾಡಿದಲ್ಲಿ ಪ್ರೋತ್ಸಾಹ ಧನವನ್ನು ನೀಡುವುದು.<br>• ಶವಸಂಸ್ಕಾರ ಭತ್ಯೆ ರೂ.15000–00 ಗಳನ್ನು ರೂ. 30,000–00 ಗಳಿಗೆ ಹೆಚ್ಚಳ ಮಾಡುವುದು<br>• ಕೇಂದ್ರ ಮಾದರಿಯಲ್ಲಿ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಶೈಕ್ಷಣಿಕ ಭತ್ಯೆ ಯೋಜನೆ ಜಾರಿಗೆ ತರುವುದು |

ಗೌರವಗಳೊಂದಿಗೆ

**(ಸಿ.ಎಸ್.ಷಡಾಕ್ಷರಿ)**
**ರಾಜ್ಯಾಧ್ಯಕ್ಷರು**

**ವಿಶೇಷ ಸೂಚನೆ:–**

- **7 ನೇ ವೇತನ ಆಯೋಗವು ಪ್ರಶ್ನಾವಳಿಗಳಿಗೆ ಮಾತ್ರ ಉತ್ತರವನ್ನು ಕೋರಿದ್ದು, ಅದರನ್ವಯ ಮೇಲಿನಂತೆ ಮಾಹಿತಿಗಳನ್ನು ಒದಗಿಸಲಾಗಿದೆ.**
- **ರಾಜ್ಯ 7 ನೇ ವೇತನ ಆಯೋಗವು ಶೀಘ್ರದಲ್ಲಿ ರಾಜ್ಯ ಸರ್ಕಾರಿ ನೌಕರರ ಸಂಘಕ್ಕೆ ವೃಂದವಾರು ಹಾಗೂ ಇಲಾಖಾವಾರು ಮಾಹಿತಿಗಳನ್ನು ಪ್ರತ್ಯೇಕವಾಗಿ ಸಲ್ಲಿಸಲು ಸಮಯವನ್ನು ನೀಡಲಿದೆ.**
- **ಆ ಸಂಧರ್ಭದಲ್ಲಿ ಬಹಳಷ್ಟು ಇಲಾಖೆಗಳು ಹಾಗೂ ವೃಂದ ಸಂಘಗಳ ಸೇವಾ ವಿಷಯಗಳ ಕುರಿತು ನೀಡಿರುವ ಮಾಹಿತಿಗಳನ್ನು ರಾಜ್ಯ ಸಂಘದಿಂದ ಕ್ರೋಡೀಕರಿಸುವ ಕಾರ್ಯ ಪ್ರಗತಿಯಲ್ಲಿದೆ.**
- **ಎಲ್ಲಾ ಇಲಾಖೆಗಳ–ವೃಂದವಾರು ಕ್ರೋಢೀಕೃತ ಮಾಹಿತಿಯನ್ನು ಪೂರಕ ದಾಖಲೆಗಳೊಂದಿಗೆ ವಾಸ್ತವ ಅಂಶಗಳನ್ನೊಳಗೊಂಡ ಸಮಗ್ರ ಮಾಹಿತಿಯನ್ನು ಆಯೋಗದ ಮುಂದೆ ಮಂಡಿಸಲಾಗುವುದು.**
- **ಈ ಸಂದರ್ಭದಲ್ಲಿ ಎಲ್ಲಾ ವೃಂದ ಸಂಘಗಳನ್ನು ಆಹ್ವಾನಿಸಲಾಗುವುದು.**

ಪ್ರತಿಯನ್ನು ಗೌರವಗಳೊಂದಿಗೆ ಆದ್ಯ ಗಮನಕ್ಕೆ:–

1. ರಾಜ್ಯ ಸಂಘದ ಪ್ರಮುಖ ಪದಾಧಿಕಾರಿಗಳಿಗೆ–ಪದಾಧಿಕಾರಿಗಳಿಗೆ
2. ರಾಜ್ಯದ ಎಲ್ಲಾ ಜಿಲ್ಲಾಧ್ಯಕ್ಷರುಗಳಿಗೆ/ತಾಲ್ಲೂಕು ಅಧ್ಯಕ್ಷರುಗಳಿಗೆ
3. ಬೆಂಗಳೂರು ನಗರದ ರಾಜ್ಯ ಪರಿಷತ್ ಸದಸ್ಯರಿಗೆ
4. ರಾಜ್ಯದ ಎಲ್ಲಾ ಜಿಲ್ಲಾ–ತಾಲ್ಲೂಕು ಕಾರ್ಯದರ್ಶಿ–ಖಜಾಂಚಿಯವರಿಗೆ
5. ರಾಜ್ಯ ಎಲ್ಲಾ ವೃಂದ ಸಂಘಗಳ ಅಧ್ಯಕ್ಷರು–ಪದಾಧಿಕಾರಿಗಳಿಗೆ
6. ರಾಜ್ಯ ಸಂಘದ ಜಿಲ್ಲಾ–ತಾಲ್ಲೂಕಿನ ಎಲ್ಲಾ ಚುನಾಯಿತ ನಿರ್ದೇಶಕರಿಗೆ
7. ರಾಜ್ಯ ಸಮಸ್ತ ಸರ್ಕಾರಿ ಅಧಿಕಾರಿ–ನೌಕರರಿಗೆ.

# ರಾಜ್ಯ 7ನೇ ವೇತನ ಆಯೋಗವು ಬಿಡುಗಡೆಗೊಳಿಸಿರುವ ಪ್ರಶ್ನಾವಳಿಗಳಿಗೆ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ವಿವರವಾದ ಉತ್ತರಗಳು

**1. ಸರ್ಕಾರಿ ನೌಕರರ ವೇತನಶ್ರೇಣಿ/ಹೊಸ ವೇತನ ರಚನೆ ಕುರಿತು ವೇತನ ಆಯೋಗಗಳು ಸಾಮಾನ್ಯವಾಗಿ ಅಳವಡಿಸಿಕೊಂಡಿರುವ ಸಾಮಾನ್ಯ ಮಾನದಂಡಗಳು ಈ ಕೆಳಕಂಡಂತಿವೆ.**

- **ಅಗತ್ಯ ವಿದ್ಯಾರ್ಹತೆ, ಕೌಶಲ್ಯ ಮತ್ತು ತರಬೇತಿ;**
- **ಜವಾಬ್ದಾರಿಯ ಪ್ರಮಾಣ;**
- **ಕಾರ್ಯವ್ಯಾಪ್ತಿಯ ಕ್ಷೇತ್ರ ;**
- **ವೃತ್ತಿಸಂಬಂಧಿ ತೊಂದರೆಗಳು;**
- **ನಿರ್ಣಯ ಕೈಗೊಳ್ಳುವ ಹಂತ;**
- **ಲಭ್ಯವಿರುವ ಬಡ್ತಿಯ ಅವಕಾಶಗಳು;**
- **ವಿವಿಧ ಇಲಾಖೆಗಳಲ್ಲಿರುವ ಸಮಾನ ದರ್ಜೆಯ ಹುದ್ದೆಗಳ ತುಲನಾತ್ಮಕ ಸ್ವರೂಪ;**
- **ಕಾಲಕಾಲಕ್ಕೆ ಸ್ಥಾಪಿಸಲಾದ ವೇತನ ಶ್ರೇಣಿಗಳ ಪರಸ್ಪರ ಅಂತರ/ಹೋಲಿಕೆಗಳು;**

**1) ಪ್ರಚಲಿತ ಪರಿಸ್ಥಿತಿಯ ಮೇಲಿನ ಅಂಶಗಳು ಪ್ರಸ್ತುತ / ಸಮರ್ಪಕವೆಂದು ಭಾವಿಸುತ್ತೀರಾ? ನಿಮ್ಮ ಅನಿಸಿಕೆಯಲ್ಲಿ ಪ್ರಸ್ತುತವೆನಿಸುವ ಇತರ ಯಾವುದೇ ಅಂಶಗಳಿದ್ದಲ್ಲಿ ದಯವಿಟ್ಟು ನಮೂದಿಸಿ.**

ರಾಜ್ಯದ ಈ ಹಿಂದಿನ ವೇತನ ಆಯೋಗಗಳು ವೇತನ ಪರಿಷ್ಕರಣೆ ಸಂದರ್ಭದಲ್ಲಿ ವಿವಿಧ ತತ್ವಗಳನ್ನು ಅಳವಡಿಸಿಕೊಂಡಿವೆ. ಅದು ನೌಕರರ ಮೂಲ ಸಮಸ್ಯೆಗಳು, ನೌಕರರ ದೈನಂದಿನ ವೆಚ್ಚಗಳು, ಕುಟುಂಬದ ಜೀವನ ನಿರ್ವಹಣಾ ವೆಚ್ಚಗಳ ಆಧಾರದ ಮೇಲೆ ತೀರ್ಮಾನಗಳನ್ನು ತೆಗೆದುಕೊಂಡಿವೆ. ಕೇಂದ್ರ ಸರ್ಕಾರದ ವೇತನ ಆಯೋಗಗಳು ಸಹ ವಿವಿಧ ವಿಧಾನಗಳನ್ನು ಅಳವಡಿಸಕೊಂಡು ವೇತನ ಭತ್ಯೆಗಳನ್ನು ಪರಿಷ್ಕರಿಸಿವೆ.

ರಾಜ್ಯದ ಐದನೇ ವೇತನ ಆಯೋಗವು **"ಮಾರ್ಪಡಿಸಿದ ಸ್ಥಿರ ಸಾಪೇಕ್ಷ ವರಮಾನ ಸೂತ್ರ"** ಅಳವಡಿಸಿಕೊಂಡು ಕನಿಷ್ಠ ವೇತನ ಶಿಫಾರಸ್ಸು ಮಾಡಿದೆ. ಕೇಂದ್ರ ಸರ್ಕಾರದ 7ನೇ ವೇತನ ಆಯೋಗವು **"15ನೇ ಅಂತರರಾಷ್ಟ್ರೀಯ ಕಾರ್ಮಿಕ ಸಮಾವೇಶದಲ್ಲಿ"** ಮಾಡಿದ ಕನಿಷ್ಠ ವೇತನದ ಶಿಫಾರಸ್ಸನ್ನು ಕೇಂದ್ರ ಸರ್ಕಾರ ಅನುಷ್ಠಾನಗೊಳಿಸಿದೆ.

ಈ ಹಿನ್ನೆಲೆಯಲ್ಲಿ ನೂತನ ವೇತನ ರಚನೆಯ ಸ್ವರೂಪವನ್ನು ನಿರ್ಧರಿಸುವಾಗ ಈ ಮೇಲ್ಕಂಡ ಅಂಶಗಳನ್ನು ಪರಿಗಣಿಸುವುದು.

ನೂತನ ವೇತನ ಶ್ರೇಣಿಗಳ ರಚನೆ ಮಾಡುವಾಗ ಈ ಹಿಂದಿನ ಕೇಂದ್ರ ಮತ್ತು ರಾಜ್ಯದ ವೇತನ ಆಯೋಗಗಳು/ ವೇತನ ಸಮಿತಿಗಳು ಪರಿಗಣಿಸಿರುವ ಪ್ರಮುಖ ಅಂಶಗಳನ್ನು ಅವಶ್ಯಕವಾಗಿ ಪರಿಗಣನೆಗೆ ತೆಗೆದುಕೊಳ್ಳಬೇಕು. ಅವುಗಳಾವುವೆಂದರೆ:–

- **ನೇಮಕಾತಿ ವಿದ್ಯಾರ್ಹತೆ; (ತರಬೇತಿ ಮತ್ತು ಅನುಭವ)**
- **ಜವಾಬ್ದಾರಿಯ ಗುಣಮಟ್ಟ;**
- **ಕಾರ್ಯಕೌಶಲ್ಯ (ಕಾರ್ಯಕ್ಷಮತೆ);**
- **ಕಾರ್ಯಕ್ಷೇತ್ರದ ವ್ಯಾಪ್ತಿ;**
- **ವೃತ್ತಿ–ಸಂಬಂಧಿ ತೊಂದರೆಗಳು;**
- **ನಿರ್ಣಯ ತೆಗೆದುಕೊಳ್ಳುವ ಹಂತ;**
- **ತರಬೇತಿ;**
- **ವೃತ್ತಿ ಭದ್ರತೆ;**
- **ಬಡ್ತಿ ಅವಕಾಶ;**
- **ಸಮಾನ ಕೆಲಸಕ್ಕೆ ಸಮಾನ ವೇತನ; ಮತ್ತು**
- **ಶಾಸನಬದ್ಧ ಮತ್ತು ಸಂವಿಧಾನಾತ್ಮಕ ನಿಬಂಧನೆಗಳು.**

➢ ಸಂವಿಧಾನದ 38(2) ಕಾಯಿದೆಯಂತೆ **"ಸಮಾನ ಕೆಲಸಕ್ಕೆ ಸಮಾನ ವೇತನ"** ದಂತೆ ವೇತನಗಳಲ್ಲಿನ ಅಸಮಾನತೆಯನ್ನು ತೊಡೆದು ಹಾಕಿ ಸಮಾನ ವೇತನ ನೀಡಲು ಪ್ರಥಮ ಆದ್ಯತೆಯ ಪ್ರಯತ್ನವನ್ನಾಗಿ ಆಯೋಗವು ಪರಿಗಣಿಸಬೇಕು.

➢ ಕೇಂದ್ರ ಮತ್ತು ರಾಜ್ಯ ಸರ್ಕಾರಿ ಸೇವೆಗಳ ವಿವಿಧ ವೇತನ ಶ್ರೇಣಿಗಳ ನಡುವೆ ಅಸ್ತಿತ್ವದಲ್ಲಿರುವ ವ್ಯಾಪಕ ಅಂತರಗಳನ್ನು ಹೋಗಲಾಡಿಸುವುದು.

➢ ಅಖಿಲ ಭಾರತ ಗ್ರಾಹಕರ ಬೆಲೆ ಸೂಚ್ಯಂಕಗಳನ್ನು ತಯಾರಿಸುವಾಗ ಆಯ್ದ ವಸ್ತುಗಳನ್ನು ಮಾತ್ರ ಪರಿಗಣಿಸಲಾಗಿದೆ. ಜೀವನ ನಿರ್ವಹಣಾ ವೆಚ್ಚದ ಕೆಲವು ಅವಶ್ಯಕವಾದ ಪದಾರ್ಥ/ವಸ್ತುಗಳನ್ನು ಕೈಬಿಡಲಾಗಿದ್ದು, ಇವುಗಳನ್ನೂ ಸಹ ಪ್ರಸ್ತುತ ಗಣನೆಗೆ ತೆಗೆದುಕೊಳ್ಳುವುದು.

➢ ವೇತನ/ ಭತ್ಯೆಗಳಿಗೆ ಸಂಬಂಧಿಸಿದಂತೆ ಕೇಂದ್ರ ಮತ್ತು ರಾಜ್ಯಗಳ ನಡುವಿನ ಹುದ್ದೆಗಳಲ್ಲಿನ ವೇತನ ತಾರತಮ್ಯವನ್ನು ಹೋಗಲಾಡಿಸುವುದು

➢ ಹಲವು ವೃಂದಗಳಲ್ಲಿ ವಿದ್ಯಾರ್ಹತೆ–ತರಬೇತಿಗೆ ಅನುಗುಣವಾಗಿ ವೇತನ ಶ್ರೇಣಿಗಳು ನಿಗದಿಯಾಗಿರುವುದಿಲ್ಲ ಈ ವ್ಯತ್ಯಾಸಗಳನ್ನು ನಿವಾರಿಸುವುದು.

➢ ಸ್ಥಗಿತ ವೇತನ ಬಡ್ತಿ ಹಾಗೂ ಬಡ್ತಿ ಅವಕಾಶಗಳನ್ನು ನಿಯಮಿತವಾಗಿ ಕಲ್ಪಿಸುವುದು.

➢ ನೌಕರರು ಸಲ್ಲಿಸಿದ ಸೇವಾವಧಿಗೆ ವೆಯಿಟೇಜ್ ನೀಡಿ ಪರಿಷ್ಕೃತ ಶ್ರೇಣಿಗಳಲ್ಲಿ ವೇತನವನ್ನು ನಿಗದಿಗೊಳಿಸುವುದು ಹಾಗೂ ಬಂಚಿಂಗ್ ವ್ಯವಸ್ಥೆ ಜಾರಿಯಾದಲ್ಲಿ ಹೆಚ್ಚಿನ ವೇತನ ಬಡ್ತಿಗಳನ್ನು ನೀಡುವುದು.

- ಬಾಡಿಗೆ ದರಗಳನ್ನು ಆಯಾ ಪ್ರದೇಶದ ಬೆಲೆ ಏರಿಕೆ ಸೂಚ್ಯಾಂಕದ ಆಧಾರದ ಮೇರೆಗೆ ಪರಿಗಣಿಸುವುದು (ಆಸ್ತಿ ಮೌಲ್ಯ).
- ನೌಕರರ ಮಕ್ಕಳ ಶೈಕ್ಷಣಿಕ ವೆಚ್ಚಗಳು ಹಾಗೂ ಶೈಕ್ಷಣಿಕ ಸಾಲದ ಮೇಲಿನ ಬಡ್ಡಿ – ಇವುಗಳನ್ನು ಗಣನೆಗೆ ತೆಗೆದುಕೊಳ್ಳುವುದು.
- ಯಾವುದೇ ಒಂದು ಅಭಿವೃದ್ಧಿಶೀಲ ದೇಶದಲ್ಲಿ ಅಲ್ಲಿನ ಜೀವನ ನಿರ್ವಹಣಾ ವೆಚ್ಚ ಹಾಗೂ ಆರ್ಥಿಕ ಅಭಿವೃದ್ಧಿಗಳೆರಡೂ ನೇರವಾದ ಸಂಬಂಧವನ್ನು ಹೊಂದಿವೆ. ಜೀವನ ನಿರ್ವಹಣಾ ವೆಚ್ಚವು:– ವಸತಿ, ಆಹಾರ, ದಿನನಿತ್ಯ ಉಪಯೋಗದ ಪದಾರ್ಥಗಳು, ಪ್ರಯಾಣ ಮತ್ತು ಸಾರಿಗೆ, ಸಂಪರ್ಕ, ಮಕ್ಕಳ ಶೈಕ್ಷಣಿಕ ಶುಲ್ಕ–ಸಮವಸ್ತ್ರ–ಪುಸ್ತಕಗಳು, ಪೆಟ್ರೋಲ್/ ಡೀಸೆಲ್/ ಅಡುಗೆ ಇಂಧನ ಬೆಲೆಗಳು ಮತ್ತು ಇತರ ವಸ್ತುಗಳ ವೆಚ್ಚದ ಒಂದು ಸರಿಸುಮಾರಾದ ಅಂದಾಜನ್ನು ಒಳಗೊಂಡಿರುತ್ತವೆ.
- ಅರ್ಥಶಾಸ್ತ್ರಜ್ಞರ ಅಭಿಪ್ರಾಯದಂತೆ "ಜೀವನ ನಿರ್ವಹಣೆ ವೆಚ್ಚವು ಏರಿಕೆಯಾದಂತೆ ವೇತನ ದರಗಳು ಕಡಿಮೆಯಾಗುತ್ತಿವೆ". ಮಾಹಿತಿ ತಂತ್ರಜ್ಞಾನ (ಸಾಫ್ಟವೇರ್) ಉದ್ಯಮದಲ್ಲಿನ ವೇತನ ಶ್ರೇಣಿ ರಚನೆಯು ರಾಜ್ಯದ ಅರ್ಥವ್ಯವಸ್ಥೆಯ ಇತರ ರಂಗಗಳಲ್ಲಿನ ವೇತನ ಶ್ರೇಣಿಗಳಿಗಿಂತ ಹೆಚ್ಚಾಗಿರುತ್ತದೆ.

**ಆದುದರಿಂದ ಈ ಅಂಶಗಳನ್ನು ಪರಿಗಣಿಸಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ವೇತನ ಭತ್ಯೆಗಳನ್ನು ಹೆಚ್ಚಿಸಲು ಶಿಫಾರಸ್ಸು ಮಾಡುವುದು. ವೇತನ ರಚನೆಯನ್ನು ನಿರೂಪಿಸುವಾಗ ಈ ಮೇಲೆ ಹೇಳಿದ ಅಂಶಗಳನ್ನು ಆದ್ಯತೆ ಮೇರೆಗೆ ಪರಿಗಣಿಸುವ ಅಗತ್ಯವಿದೆ.**

- **ಅಗತ್ಯ ವಿದ್ಯಾರ್ಹತೆ, ಕೌಶಲ್ಯ ಮತ್ತು ತರಬೇತಿ;**

ರಾಜ್ಯ ಸರ್ಕಾರವು ಎಲ್ಲಾ ವೃಂದಗಳಿಗೆ ವೃಂದ ನೇಮಕಾತಿ ನಿಯಮಗಳಲ್ಲಿ ಅಳವಡಿಸಿಕೊಂಡಿರುವ ವಿದ್ಯಾರ್ಹತೆ ಸರಿಯಿದೆ.

ಸಾರ್ವಜನಿಕರಿಗೆ ಗುಣಮಟ್ಟದ ಸೇವೆಯನ್ನು ನೀಡುವ ನಿಟ್ಟಿನಲ್ಲಿ ರಾಜ್ಯ ಸರ್ಕಾರಿ ನೌಕರರಿಗೆ ಕಾಲಕಾಲಕ್ಕೆ ಕೌಶಲ್ಯ ತರಬೇತಿಯನ್ನು ನೀಡುವ ಮೂಲಕ ಆಡಳಿತ ಯಂತ್ರದ ಸುಗಮ ನಿರ್ವಹಣೆ, ನೌಕರರ ಕಾರ್ಯದಕ್ಷತೆಯನ್ನು ಹೆಚ್ಚಿಸುವುದು ಸರ್ಕಾರದ ಜವಾಬ್ದಾರಿ. ಈ ಹಿನ್ನಲೆಯಲ್ಲಿ;

ಪ್ರಸ್ತುತ ರಾಜ್ಯದ ಜಿಲ್ಲಾ ಕೇಂದ್ರಗಳಲ್ಲಿರುವ ಸರ್ಕಾರಿ ಆಡಳಿತ ತರಬೇತಿ ಕೇಂದ್ರಗಳನ್ನು ಮೈಸೂರಿನ ಆಡಳಿತ ತರಬೇತಿ ಕೇಂದ್ರದ ಮಾದರಿಯಲ್ಲಿ ಅಭಿವೃದ್ಧಿಪಡಿಸುವುದು ಅತ್ಯವಶ್ಯಕವಾಗಿದೆ. ತನ್ಮೂಲಕ ಗುಣಮಟ್ಟದ ವಸತಿಸಹಿತ ತರಬೇತಿಗಳನ್ನು ಸರ್ಕಾರಿ ನೌಕರರು/ ಅಧಿಕಾರಿಗಳಿಗೆ ನೀಡಿದಲ್ಲಿ ಇನ್ನಷ್ಟು ಗುಣಾತ್ಮಕ ಹಾಗೂ ಪರಿಣಾಮಕಾರಿ ಸೇವೆಗಳು ಶ್ರೀಸಾಮಾನ್ಯರಿಗೆ ದೊರೆಯಲಿವೆ.

**ಈ ಯೋಜನೆಯನ್ನು ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾ ತರಬೇತಿ ಕೇಂದ್ರಗಳನ್ನು ಎ.ಟಿ.ಐ. ಮಾದರಿಯಲ್ಲಿ ಮೇಲ್ದರ್ಜೆಗೇರಿಸಿ ಹಾಗೂ ಅಗತ್ಯ ಮೂಲಭೂತ ಸೌಲಭ್ಯಗಳು, ವಿಶೇಷ ಕೌಶಲ್ಯ ತರಬೇತಿಯುಳ್ಳ ಸಂಪನ್ಮೂಲ ವ್ಯಕ್ತಿಗಳನ್ನು ನಿಯೋಜಿಸಲು ಶಿಫಾರಸ್ಸು ಮಾಡುವುದು.**

- **ಜವಾಬ್ದಾರಿಯ ಪ್ರಮಾಣ;**

ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ / ನೌಕರರಿಗೆ ನಿರ್ದಿಷ್ಟ ಜವಾಬ್ದಾರಿಗಳನ್ನು ಸರ್ಕಾರವಾಗಲಿ / ಇಲಾಖೆಗಳಾಗಲಿ ನಿಗದಿಪಡಿಸಿರುವುದಿಲ್ಲ. ಇದರಿಂದ ಅನೇಕ ನೌಕರರ ಕರ್ತವ್ಯ ನಿರ್ವಹಣೆಯಲ್ಲಿ ಗೊಂದಲಗಳು ಉಂಟಾಗಿರುತ್ತವೆ. ಇದರಿಂದ ಆಡಳಿತದ ಮೇಲು ಸಹ ಪರಿಣಾಮ ಬೀರುತ್ತದೆ.

**ಆದುದರಿಂದ ರಾಜ್ಯದ ವಿವಿಧ ಇಲಾಖೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಎಲ್ಲಾ ಸರ್ಕಾರಿ ಅಧಿಕಾರಿ / ನೌಕರರಿಗೆ ನಿಗದಿತ–ನಿರ್ದಿಷ್ಠ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ನಿರ್ವಹಿಸಲು ಶಿಫಾರಸ್ಸು ಮಾಡುವುದು.**

- **ಕಾರ್ಯವ್ಯಾಪ್ತಿಯ ಕ್ಷೇತ್ರ :**

ಕೆಲವು ಇಲಾಖೆಗಳಲ್ಲಿ ಅಲ್ಲಿನ ಅಧಿಕಾರಿ / ನೌಕರರ ಕಾರ್ಯವ್ಯಾಪ್ತಿ ಮೀರಿ ಸರ್ಕಾರವು ಹೆಚ್ಚಿನ ಜವಾಬ್ದಾರಿಗಳನ್ನು ನೀಡುತ್ತಿದೆ. ಇದರಿಂದ ಆಯಾ ಮಾತ್ರ ಇಲಾಖೆಯ ನೌಕರರು ಹೆಚ್ಚಿನ ಒತ್ತಡದಲ್ಲಿ ಕಾರ್ಯನಿರ್ವಹಿಸುವ ಸಂದರ್ಭ ಒದಗಿ ಬಂದಿದೆ. ಉದಾ: ಆರ್.ಡಿ.ಪಿ.ಆರ್. ಮತ್ತು ಕಂದಾಯ ಇಲಾಖೆಯ ಕಾರ್ಯಕಾರಿ ಸಿಬ್ಬಂದಿಗಳು

**ಆದುದರಿಂದ ಆಯಾ ಇಲಾಖೆಗಳ ಅಧಿಕಾರಿ/ ನೌಕರರ ಕಾರ್ಯವ್ಯಾಪ್ತಿಯ ಕ್ಷೇತ್ರವನ್ನು ನಿಗದಿಪಡಿಸಿ ಶಿಫಾರಸ್ಸು ಮಾಡುವುದು.**

- **ವೃತ್ತಿಸಂಬಂಧಿ ತೊಂದರೆಗಳು:**

ಅನೇಕ ಇಲಾಖೆಗಳಲ್ಲಿ ವೃತ್ತಿಸಂಬಂಧಿಗಳು ಇರುತ್ತವೆ ಅವುಗಳನ್ನು ಅಧ್ಯಯನ ಮಾಡಿ ಸರ್ಕಾರಕ್ಕೆ ಸೂಕ್ತ ಶಿಫಾರಸ್ಸು ಮಾಡುವುದು.

- **ನಿರ್ಣಯ ಕೈಗೊಳ್ಳುವ ಹಂತ:**

ಸರ್ಕಾರ ಹಾಗೂ ಇಲಾಖೆಗಳಲ್ಲಿ ನಿರ್ದಿಷ್ಟ ಜವಾಬ್ದಾರಿ ಹಾಗೂ ಅಗತ್ಯ ತರಬೇತಿಗಳು ಇಲ್ಲದ ಕಾರಣ ಸಂಬಂಧಪಟ್ಟ ಅಧಿಕಾರಿಗಳು ಸೂಕ್ತ ಸಂದರ್ಭದಲ್ಲಿ ನಿರ್ದಿಷ್ಟಪಡಿಸಿದ ಜವಾಬ್ದಾರಿಯನ್ನು ತನ್ನ ಹಂತದಲ್ಲಿ ಇತ್ಯರ್ಥಗೊಳಿಸದೆ ಮೇಲಾಧಿಕಾರಿಗಳ ಅಭಿಪ್ರಾಯ–ಅನುಮೋದನೆಗೆ ಕಳುಹಿಸುವುದನ್ನು ಗಮನಿಸಲಾಗಿದೆ.

**ಆದುದರಿಂದ ನಿರ್ದಿಷ್ಟ ಜವಾಬ್ದಾರಿಯನ್ನು ನಿಗದಿಪಡಿಸಿ ಅಗತ್ಯ ತರಬೇತಿಗಳನ್ನು ಪಡೆದು ಯಾವ ಹಂತ ಯಾರು ನಿರ್ಣಯ ಕೈಗೊಳ್ಳಬೇಕು ಎಂಬ ಬಗ್ಗೆ ಶಿಫಾರಸ್ಸು ಮಾಡುವುದು.**

- **ಲಭ್ಯವಿರುವ ಬಡ್ತಿಯ ಅವಕಾಶಗಳು:**

ಕೆಲವು ಇಲಾಖೆಗಳಲ್ಲಿ ಸಾಕಷ್ಟು ಮುಂಬಡ್ತಿಯ ಅವಕಾಶಗಳು ಇರುತ್ತವೆ. ಆದರೆ ಕೆಲವು ಇಲಾಖೆಗಳಲ್ಲಿ 30 ವರ್ಷಗಳ ಸೇವೆ ಸಲ್ಲಿಸಿದರು ಸಹ ಯಾವುದೇ ಮುಂಬಡ್ತಿಗಳು ದೊರಕುತ್ತಿಲ್ಲ. ಕಾರಣ ವೃಂದ ನೇಮಕಾತಿ ನಿಯಮಗಳು ಕಾಲಾನುಕಾಲಕ್ಕೆ ಪರಿಷ್ಕರಣೆಯಾಗದೆ ಇರುವುದು, ಕೆಲವು ವೃಂದಗಳಲ್ಲಿ ಕೆಳ ಹಂತ ಹಾಗೂ ಮೇಲಿನ ಹಂತದ ಹುದ್ದೆಗಳ ಸಂಖ್ಯಾಬಲದ ಆಧಾರವನ್ನು ಗಮನದಲ್ಲಿಟ್ಟುಕೊಳ್ಳದೆ ನೇಮಕಾತಿ ಮಾಡಿರುವುದು, ಅನೇಕ ಹುದ್ದೆಗಳನ್ನು ಮೇಲ್ದರ್ಜೆಗೆರಿಸದೆ ಇರುವುದು, ಹಾಗೂ ಅವೈಜ್ಞಾನಿಕ ಬಡ್ತಿ ನಿಯಮಗಳ ಕಾರಣ ಅನೇಕ ನೌಕರರು ಸೇವಾವಧಿಯಲ್ಲಿ ಒಂದು ಮುಂಬಡ್ತಿ ಇಲ್ಲದೇ ನಿವೃತ್ತಿಯಾಗುತ್ತಿದ್ದಾರೆ.

**ಆದುದರಿಂದ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಕಾಲಾನುಕಾಲಕ್ಕೆ ತಿದ್ದುಪಡಿ ಮಾಡಿ, ಕೆಲವು ಹುದ್ದೆಗಳನ್ನು ಮೇಲ್ದರ್ಜೆಗೆರಿಸಿ, ಒಬ್ಬ ನೌಕರರ ತನ್ನ ಸೇವಾವಧಿಯಲ್ಲಿ ಕನಿಷ್ಠ 3–4 ಬಡ್ತಿ ಅವಕಾಶಗಳನ್ನು ಕಲ್ಪಿಸಲು ಶಿಫಾರಸ್ಸು ಮಾಡುವುದು.**

- **ವಿವಿಧ ಇಲಾಖೆಗಳಲ್ಲಿರುವ ಸಮಾನ ದರ್ಜೆಯ ಹುದ್ದೆಗಳ ತುಲನಾತ್ಮಕ ಸ್ವರೂಪ:**

ಕೆಲವು ಇಲಾಖೆಗಳಲ್ಲಿ ಸಮಾನ ದರ್ಜೆಯ ಹುದ್ದೆಗಳು ಹಾಗೂ ವಿದ್ಯಾರ್ಹತೆ ಇದ್ದರು ಸಹ ವೇತನ, ವೇತನ ಶ್ರೇಣಿ ಮತ್ತು ಭತ್ಯೆಗಳಲ್ಲಿ ವ್ಯತ್ಯಾಸವನ್ನು ಗಮನಿಸಲಾಗಿದೆ. ಉದಾ: ಪೋಲಿಸ್ ಇಲಾಖೆ ಆರಕ್ಷಕ ಸಿಬ್ಬಂದಿಗಳು ಹಾಗೂ ಅರಣ್ಯ ಇಲಾಖೆಯ ಅರಣ್ಯ ರಕ್ಷಕರು ಮತ್ತು ಅಬಕಾರಿ ಇಲಾಖೆ ರಕ್ಷಕರು.

**ವಿವಿಧ ಇಲಾಖೆಗಳಲ್ಲಿ ಸಮನಾಂತರ ವಿದ್ಯಾರ್ಹತೆ ಹಾಗೂ ಸಮಾನ ದರ್ಜೆ ಇರುವುದರಿಂದ ವೇತನ ತಾರತಮ್ಯಗಳನ್ನು ಸರಿಪಡಿಸುವುದು.**

**ಕಾಲಕಾಲಕ್ಕೆ ಸ್ಥಾಪಿಸಿರುವ ವೇತನ ಶ್ರೇಣಿಗಳ ಪರಸ್ಪರ ಅಂತರ/ ಹೋಲಿಕೆಗಳು;**

**ಕಾಲಕಾಲಕ್ಕೆ ರಚನೆಯಾದ ವೇತನ ಸಮಿತಿ – ಆಯೋಗ**

| ಕ್ರ. ಸಂ. | ಆಯೋಗ/ಸಮಿತಿ | ಅಧ್ಯಕ್ಷರು | ರಚನೆ ವರ್ಷ |
|---|---|---|---|
| 1 | ಅಧಿಕಾರಿ ಸಮಿತಿ | – | ಡಿಸೆಂಬರ್ 1956 |
| 2 | ಅಧಿಕಾರಿ ಸಮಿತಿ | – | ಜೂನ್ 1960 |
| 3 | 1ನೇ ವೇತನ ಆಯೋಗ | ನ್ಯಾಯಮೂರ್ತಿ<br>ಟಿ.ಕೆ.ತುಕೋಳ್ | ನವೆಂಬರ್ 1966 |
| 4 | 2ನೇ ವೇತನ ಆಯೋಗ | ನ್ಯಾಯಮೂರ್ತಿ<br>ಎ.ನಾರಾಯಣಮೂರ್ತಿ ಪೈ | ಆಗಸ್ಟ್ 1974 |
| 5 | ಸಚಿವಸಂಪುಟ<br>ಉಪಸಮಿತಿ | ವೀರಪ್ಪ ಮೊಯ್ಲಿ<br>ಹಣಕಾಸು ಸಚಿವರು | ಮಾರ್ಚ್ 1981 |
| 6 | 3ನೇ ವೇತನ ಆಯೋಗ | ನ್ಯಾಯಮೂರ್ತಿ<br>ಬಿ ವೆಂಕಟಸ್ವಾಮಿ | ಜನವರಿ 1986 |
| 7 | 4ನೇ ವೇತನ ಆಯೋಗ | ನ್ಯಾಯುಮೂರ್ತಿ<br>ಕೆ.ಜಗನ್ನಾಥಶೆಟ್ಟಿ | ಫೆಬ್ರವರಿ 1992 |
| 8 | ಅಧಿಕಾರಿ ಸಮಿತಿ | ಗೋಪಾಲರೆಡ್ಡಿ<br>ಸರ್ಕಾರದ ಕಾರ್ಯದರ್ಶಿ<br>ಹಣಕಾಸು ಇಲಾಖೆ | ಫೆಬ್ರವರಿ 1998 |
| 9 | 5ನೇ ವೇತನ ಆಯೋಗ | ಸಿ. ಗೋಪಾಲರೆಡ್ಡಿ<br>ಭಾ.ಆ.ಸೇ. (ನಿ)<br>(ಅಕಾಲಿಕ ನಿಧನ)<br>ಎಂ.ಬಿ. ಪ್ರಕಾಶ್<br>ಭಾ.ಆ.ಸೇ (ನಿ) | ಜುಲೈ 2005<br>ಆಗಸ್ಟ್ 2006 |
| 10 | ಅಧಿಕಾರಿ ಸಮಿತಿ | ಸಬೀರ್ ಹರಿಸಿಂಗ್<br>ಹೆಚ್ಚುವರಿ ಮುಖ್ಯ ಕಾರ್ಯದರ್ಶಿ &<br>ಅಭಿವೃದ್ಧಿ<br>ಆಯುಕ್ತರು | ಜೂನ್–2011 |
| 11 | 6ನೇ ವೇತನ ಆಯೋಗ | ಎಂ.ಆರ್.ಶ್ರೀನಿವಾಸಮೂರ್ತಿ<br>ಭಾ.ಆ.ಸೇ. (ನಿ) | ಜೂನ್–2017 |

- ವೇತನ ಆಯೋಗ–ಸಮಿತಿಗಳ ಅವಧಿಗಳು ಪೂರ್ಣಗೊಂಡ ನಂತರ ಮತ್ತೊಂದು ವೇತನ ಆಯೋಗ ಅಥವಾ ಸಮಿತಿಗಳ ರಚನೆಯಾಗಿದ್ದರೇ, 13 ವೇತನ ಆಯೋಗ –ಸಮಿತಿಗಳಿಂದ ವೇತನ ಪರಿಷ್ಕರಣೆ ಆಗಬೇಕಾಗಿತ್ತು. ನಿಗದಿತ ಅವಧಿಗೆ ರಚನೆಯಾಗದ ಕಾರಣ 2 ವೇತನ

ಆಯೋಗ–ಸಮಿತಿಗಳಿಂದ ವಂಚಿತರಾಗಿ ಕೇವಲ ರಾಜ್ಯದಲ್ಲಿ 11 ವೇತನ ಆಯೋಗ–ಸಮಿತಿಗಳ ಸೌಲಭ್ಯಗಳನ್ನು ಪಡೆಯಲಾಗಿದೆ.

- ಈ ಸಂಬಂಧ ಹಿಂದಿನ ರಾಜ್ಯ ವೇತನ ಆಯೋಗ–ಸಮಿತಿಗಳಲ್ಲಿ ವೇತನ ತಾರತಮ್ಯಗಳನ್ನು ಸರಿಪಡಿಸಲು ಸಮರ್ಥವಾದವನ್ನು ಮಂಡಿಸಿದ್ದರು ಸಹ ಇದುವರೆವಿಗೂ ಅನುಷ್ಠಾನಕ್ಕೆ ಬಂದಿರುವುದಿಲ್ಲ.
- ಕನಿಷ್ಠ ವೇತನ ಅಥವಾ ಸಂಬಳವನ್ನು ಸರ್ಕಾರವು ಕೇವಲ ಆರ್ಥಿಕ ಸಂಪನ್ಮೂಲಗಳ ಲಭ್ಯತೆಗೆ ತಾಳೆಮಾಡದೆ, ನೌಕರನ ಸಾಮಾಜಿಕ ನಿಲುವು, ವಾಸ್ತವಿಕ ನ್ಯಾಯ ಹಾಗೂ ಕಾರ್ಯದಕ್ಷತೆಗಳನ್ನು ನೋಡಬೇಕಾಗಿರುತ್ತದೆ. ಸರ್ಕಾರವು ತನ್ನ ನೌಕರರಿಗೆ ಕನಿಷ್ಠವೇತನವನ್ನು ನೀಡುವಾಗ ಅವರು ರಾಜ್ಯಕ್ಕೆ ನೀಡಿದ ಸೇವೆಗೆ ತಕ್ಕಂತೆ ಇರಬೇಕಾಗಿದೆ. ನ್ಯಾಯಸಮ್ಮತವಾದ ವೇತನಗಳನ್ನು ಕಂಡುಹಿಡಿಯುವುದು ವೇತನ ಸಮಿತಿ/ ಆಯೋಗಗಳ ತತ್ವವಾಗಿದೆ. ಉದ್ಯೋಗದಾತನಾದ ಸರ್ಕಾರವು ಖಾಸಗಿ ಕೈಗಾರಿಕಾ ಸಂಸ್ಥೆಗಳಂತೆ ಲಾಭ–ನಷ್ಟಗಳನ್ನು ನೋಡಿ ವೇತನ ನಿರ್ಣಯ ಮಾಡಲು ಸಾಧ್ಯವಾಗುವುದಿಲ್ಲ. ಕಾರಣ, ಸರ್ಕಾರದಲ್ಲಿ ಲಾಭ/ನಷ್ಟಗಳ ಬಾಬ್ತು ಇರದೇ ಸೇವಾ ಮನೋಭಾವದಿಂದ ಸಾರ್ವಜನಿಕರಿಗೆ ಸೇವೆ ನೀಡಬೇಕಾಗಿರುತ್ತದೆ.

ಕರ್ನಾಟಕ ರಾಜ್ಯದ ಎರಡನೇ ವೇತನ ಆಯೋಗದ ನೇತೃತ್ವವಹಿಸಿದ ನ್ಯಾಯಮೂರ್ತಿ: ಎ.ನಾರಾಯಣಮೂರ್ತಿ ಪೈ ರವರು **"ನಾಗರಿಕ ಸೇವಾ ಕಾರ್ಯಕ್ಷಮತೆಯು ಉತ್ತಮ ಆಡಳಿತದ ಮೂಲಭೂತವಾದ ಅಂಶವಾಗಿದ್ದು, ಇದು ಕೇವಲ ಸಮಂಜಸವಾದ ನೇಮಕಾತಿ, ತರಬೇತಿ ಮತ್ತು ಸಂಘಟನೆಗಳಲ್ಲದೇ, ತರ್ಕಬದ್ಧವಾದ ವೇತನ ಭತ್ಯೆಗಳನ್ನು ನೀಡಿ ಸೇವಾ ಆಕರ್ಷಣೆ ಮತ್ತು ನೌಕರರನ್ನು ಉದ್ಯೋಗದಲ್ಲಿ ಉಳಿಸಿಕೊಳ್ಳುವ ಸಾಮರ್ಥ್ಯ ಹೊಂದಿರಬೇಕು"** ಎಂಬ ಅಭಿಪ್ರಾಯದೊಂದಿಗೆ ಅಖಿಲ ಭಾರತ ಬೆಲೆ ಸೂಚ್ಯಂಕವನ್ನಾಧರಿಸಿ ವೇತನ ಶ್ರೇಣಿಗಳನ್ನು ನಿಗದಿಗೊಳಿಸಿತ್ತು. ಆಯೋಗವು, ಮುಂದುವರೆದು ಪರಿಷ್ಕೃತ ಶ್ರೇಣಿಗಳಲ್ಲಿ ವೇತನವನ್ನು ಪಾಯಿಂಟ್–ಟು–ಪಾಯಿಂಟ್ ಆಧಾರದ ಮೇಲೆ ನಿಗಧಿಗೊಳಿಸತಕ್ಕದ್ದು ಎಂದು ಶಿಫಾರಸ್ಸು ಮಾಡಿದ್ದರು ಸಹ ದುರಾದೃಷ್ಟವಶಾತ್, ಈ ಎರಡೂ ಶಿಫಾರಸುಗಳನ್ನು ಸರ್ಕಾರವು ತಿರಸ್ಕರಿಸಿತು. ಅದರ ಪರಿಣಾಮವಾಗಿ ನೌಕರರಿಗೆ ಹೆಚ್ಚಿನ ಪ್ರಮಾಣದ ಆರ್ಥಿಕ ನಷ್ಟ ಉಂಟಾಯಿತು.

1981ರಲ್ಲಿ ಶ್ರೀ ಎಂ. ವೀರಪ್ಪ ಮೊಯ್ಲಿರವರ ಅಧ್ಯಕ್ಷತೆಯಲ್ಲಿ ರಚಿತವಾದ ಸಚಿವ ಸಂಪುಟ ಉಪಸಮಿತಿಯು ರಾಜ್ಯ ಸರ್ಕಾರಿ ನೌಕರರಿಗೆ ನ್ಯಾಯಸಮ್ಮತ ವೇತನ ಶ್ರೇಣಿ/ ಭತ್ಯೆಗಳನ್ನು ಕಲ್ಪಿಸುವಲ್ಲಿ ಸಫಲವಾಗಿದ್ದು, ಅಂದು 'ಡಿ' ಮತ್ತು 'ಸಿ' ದರ್ಜೆಯ ಕೆಲವು ಹಂತದ ಹುದ್ದೆಗಳ ವೇತನ ಶ್ರೇಣಿ ಕೇಂದ್ರ ಸರ್ಕಾರಿ ನೌಕರರ ವೇತನ ಶ್ರೇಣಿಗಳಿಗಿಂತ ಹೆಚ್ಚಾಗಿದ್ದರಿಂದ ಇದು ಸಹಜವಾಗಿಯೆ ರಾಜ್ಯ ಸರ್ಕಾರಿ ನೌಕರರಲ್ಲಿ ತೃಪ್ತಿಯನ್ನು ತಂದಿತ್ತಲ್ಲದೆ ಸಚಿವ ಸಂಪುಟ ಉಪ ಸಮಿತಿಯು ನೌಕರರಿಗೆ ಸ್ವಾಭಾವಿಕ ನ್ಯಾಯ ಕಲ್ಪಿಸಿತ್ತು.

## ಕೋಷ್ಟಕ–01: ಕೇಂದ್ರ ಹಾಗೂ ರಾಜ್ಯ ಸರ್ಕಾರಿ ನೌಕರರ ವೇತನದಲ್ಲಿ ಉಂಟಾಗಿರುವ ವ್ಯತ್ಯಾಸ

| Sl. | GOI Scales (2023) (effective date 1-1-2023) | | | Karnataka Scales (effective date 1-1-2023) | | | GOI Vs Karnataka | | |
|---|---|---|---|---|---|---|---|---|---|
| | Basic | DA (1-1-2023) 38% | Basic + DA | Basic | DA (1-1-2023) 31% | Basic+DA | Difference (Basic+DA) | % Diff. (Basic+DA) | % Diff. (Basic Only) |
| 1 | 2 | 3 | 4 | 5 | 6 | 7 | 8 | 9 | 10 |
| 1 | 18,000 | 6,840 | 24,840 | 17,000 | 5,270 | 22,270 | 2,570 | 11.54 | 5.88 |
| 2 | 19,900 | 7,562 | 27,462 | 18,600 | 5,766 | 24,366 | 3,096 | 12.71 | 6.99 |
| 3 | 21,700 | 8,246 | 29,946 | 19,950 | 6,185 | 26,135 | 3,812 | 14.58 | 8.77 |
| 4 | 25,500 | 9,690 | 35,190 | 21,400 | 6,634 | 28,034 | 7,156 | 25.53 | 19.16 |
| 5 | 29,200 | 11,096 | 40,296 | 23,500 | 7,285 | 30,785 | 9,511 | 30.89 | 24.26 |
| 6 | 35,400 | 13,452 | 48,852 | 25,800 | 7,998 | 33,798 | 15,054 | 44.54 | 37.21 |
| 7 | 44,900 | 17,062 | 61,962 | 27,650 | 8,572 | 36,222 | 25,741 | 71.06 | 62.39 |
| 8 | 47,600 | 18,088 | 65,688 | 30,350 | 9,409 | 39,759 | 25,930 | 65.22 | 56.84 |
| 9 | 53,100 | 20,178 | 73,278 | 33,450 | 10,370 | 43,820 | 29,459 | 67.23 | 58.74 |
| 10 | 56,100 | 21,318 | 77,418 | 36,000 | 11,160 | 47,160 | 30,258 | 64.16 | 55.83 |
| 11 | 67,700 | 25,726 | 93,426 | 37,900 | 11,749 | 49,649 | 43,777 | 88.17 | 78.63 |
| 12 | 78,800 | 29,944 | 108,744 | 40,900 | 12,679 | 53,579 | 55,165 | 102.96 | 92.67 |
| 13 | 123,100 | 46,778 | 169,878 | 43,100 | 13,361 | 56,461 | 113,417 | 200.88 | 185.61 |
| 14 | 131,100 | 49,818 | 180,918 | 45,300 | 14,043 | 59,343 | 121,575 | 204.87 | 189.40 |
| 15 | 144,200 | 54,796 | 198,996 | 48,900 | 15,159 | 64,059 | 134,937 | 210.64 | 194.89 |
| 16 | 182,200 | 69,236 | 251,436 | 52,650 | 16,322 | 68,972 | 182,465 | 264.55 | 246.06 |
| 17 | 205,400 | 78,052 | 283,452 | 56,800 | 17,608 | 74,408 | 209,044 | 280.94 | 261.62 |
| 18 | 225,000 | 85,500 | 310,500 | 61,150 | 18,957 | 80,107 | 230,394 | 287.61 | 267.95 |
| 19 | 250,000 | 95,000 | 345,000 | 67,550 | 20,941 | 88,491 | 256,510 | 289.87 | 270.10 |
| 20 | | | | 70,850 | 21,964 | 92,814 | | | |
| 21 | | | | 74,400 | 23,064 | 97,464 | | | |
| 22 | | | | 82,000 | 25,420 | 107,420 | | | |
| 23 | | | | 90,500 | 28,055 | 118,555 | | | |
| 24 | | | | 97,100 | 30,101 | 127,201 | | | |
| 25 | | | | 104,600 | 32,426 | 137,026 | | | |

- ಕೇಂದ್ರ ಸರ್ಕಾರವು ಕನಿಷ್ಠ ವೇತನವನ್ನು ರೂ. 18,000–00ಗಳಿಗೆ ಹಾಗೂ ಗರಿಷ್ಠ ವೇತನವನ್ನು ರೂ. 2,50,000–00ಗಳಿಗೆ ನಿಗದಿಪಡಿಸಿದೆ.
- ಈಗಾಗಲೇ ಕೇಂದ್ರ ಸರ್ಕಾರದ 7ನೇ ವೇತನ ಆಯೋಗದ ಶಿಫಾರಸ್ಸುಗಳನ್ನು ರಾಷ್ಟ್ರಾದ್ಯಂತ ಸುಮಾರು 26 ರಾಜ್ಯ ಸರ್ಕಾರಗಳು ತನ್ನ ನೌಕರರಿಗೆ ಅನುಷ್ಠಾನಗೊಳಿಸಿದೆ.
- ಕೇಂದ್ರ ಹಾಗೂ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ವೇತನ ಹಾಗೂ ಭತ್ಯೆಗಳಲ್ಲಿ ಕನಿಷ್ಠ ಮೂಲವೇತನದ ಶೇ.5.88% ರಷ್ಟು ಹಾಗೂ ಗರಿಷ್ಠ ಮೂಲವೇತನದ ಶೇ. 270.10% ರಷ್ಟು ವ್ಯತ್ಯಾಸ ಉಂಟಾಗಿರುತ್ತದೆ.
- ಈ ಮೇಲಿನ ಕೋಷ್ಟಕವು ಪ್ರತಿ ಮೂಲ ವೇತನ ಹಂತದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಿ ನೌಕರರಲ್ಲಿ ಇರುವ ವ್ಯತ್ಯಾಸವನ್ನು ತೋರಿಸುತ್ತದೆ.

***

## ಕೋಷ್ಟಕ–02 : ಕೇರಳ ರಾಜ್ಯ ಹಾಗೂ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ನಡುವಿನ ಮೂಲವೇತನ & ತುಟ್ಟಿಭತ್ಯೆಗಳ ವ್ಯತ್ಯಾಸದ ವಿವರ

| Sl. | Kerala Scales (2023) (effective date 1-1-2023) | | | Karnataka Scales (effective date 1-1-2023) | | | Kerala Vs Karnataka | | |
|---|---|---|---|---|---|---|---|---|---|
| | Basic | DA (1-1-2023) 34% | Basic + DA | Basic | DA (1-1-2023) 31% | Basic+DA | Difference (Basic+DA) | % Diff. (Basic+DA) | % Diff. (Basic Only) |
| 1 | 2 | 3 | 4 | 5 | 6 | 7 | 8 | 9 | 10 |
| 1 | 23,000 | 7,820 | 30,820 | 17,000 | 5,270 | 22,270 | 8,550 | 38.39 | 35.29 |
| 2 | 23,700 | 8,058 | 31,758 | 18,600 | 5,766 | 24,366 | 7,392 | 30.34 | 27.42 |
| 3 | 24,400 | 8,296 | 32,696 | 19,950 | 6,185 | 26,135 | 6,562 | 25.11 | 22.31 |
| 4 | 25,100 | 8,534 | 33,634 | 21,400 | 6,634 | 28,034 | 5,600 | 19.98 | 17.29 |
| 5 | 26,500 | 9,010 | 35,510 | 23,500 | 7,285 | 30,785 | 4,725 | 15.35 | 12.77 |
| 6 | 27,900 | 9,486 | 37,386 | 25,800 | 7,998 | 33,798 | 3,588 | 10.62 | 8.14 |
| 7 | 31,100 | 10,574 | 41,674 | 27,650 | 8,572 | 36,222 | 5,453 | 15.05 | 12.48 |
| 8 | 35,600 | 12,104 | 47,704 | 30,350 | 9,409 | 39,759 | 7,946 | 19.98 | 17.30 |
| 9 | 37,400 | 12,716 | 50,116 | 33,450 | 10,370 | 43,820 | 6,297 | 14.37 | 11.81 |
| 10 | 39,300 | 13,362 | 52,662 | 36,000 | 11,160 | 47,160 | 5,502 | 11.67 | 9.17 |
| 11 | 41,300 | 14,042 | 55,342 | 37,900 | 11,749 | 49,649 | 5,693 | 11.47 | 8.97 |
| 12 | 43,400 | 14,756 | 58,156 | 40,900 | 12,679 | 53,579 | 4,577 | 8.54 | 6.11 |
| 13 | 45,600 | 15,504 | 61,104 | 43,100 | 13,361 | 56,461 | 4,643 | 8.22 | 5.80 |
| 14 | 50,200 | 17,068 | 67,268 | 45,300 | 14,043 | 59,343 | 7,925 | 13.35 | 10.82 |
| 15 | 51,400 | 17,476 | 68,876 | 48,900 | 15,159 | 64,059 | 4,817 | 7.52 | 5.11 |
| 16 | 55,200 | 18,768 | 73,968 | 52,650 | 16,322 | 68,972 | 4,997 | 7.24 | 4.84 |
| 17 | 56,500 | 19,210 | 75,710 | 56,800 | 17,608 | 74,408 | 1,302 | 1.75 | -0.53 |
| 18 | 59,300 | 20,162 | 79,462 | 61,150 | 18,957 | 80,107 | -645 | -0.80 | -3.03 |
| 19 | 63,700 | 21,658 | 85,358 | 67,550 | 20,941 | 88,491 | -3,133 | -3.54 | -5.70 |
| 20 | 77,200 | 26,248 | 103,448 | 70,850 | 21,964 | 92,814 | 10,635 | 11.46 | 8.96 |
| 21 | 85,000 | 28,900 | 113,900 | 74,400 | 23,064 | 97,464 | 16,436 | 16.86 | 14.25 |
| 22 | 95,600 | 32,504 | 128,104 | 82,000 | 25,420 | 107,420 | 20,684 | 19.26 | 16.59 |
| 23 | 107,800 | 36,652 | 144,452 | 90,500 | 28,055 | 118,555 | 25,897 | 21.84 | 19.12 |
| 24 | 112,800 | 38,352 | 151,152 | 97,100 | 30,101 | 127,201 | 23,951 | 18.83 | 16.17 |
| 25 | 118,100 | 40,154 | 158,254 | 104,600 | 32,426 | 137,026 | 21,228 | 15.49 | 12.91 |
| 26 | 123,700 | 42,058 | 165,758 | | | | 165,758 | | |
| 27 | 129,300 | 43,962 | 173,262 | | | | 173,262 | | |

- ಕೇರಳ ರಾಜ್ಯ ಸರ್ಕಾರಿ ನೌಕರರಿಗೆ ಹೋಲಿಸಿದಲ್ಲಿ ರಾಜ್ಯ ಸರ್ಕಾರಿ ನೌಕರರ ಮೂಲ ವೇತನವು ಕಡಿಮೆ ಇರುತ್ತದೆ.
- ಕೇರಳ ರಾಜ್ಯದಲ್ಲಿ ವಾರ್ಷಿಕ ಬಡ್ತಿದರವು ಶೇ. 3.04% ಇದ್ದು ರಾಜ್ಯದಲ್ಲಿ ಈ ದರವು ಶೇ. 2.35% ಯಾಗಿದ್ದು ಈ ದರವು ಕಡಿಮೆ ಇರುತ್ತದೆ.
- ಕೇರಳ ರಾಜ್ಯದಲ್ಲಿ ತುಟ್ಟಿಭತ್ಯೆದರವು ಶೇ. 34% ರಷ್ಟಿದ್ದು, ರಾಜ್ಯ ಸರ್ಕಾರದಲ್ಲಿ ಈ ದರವು ಶೇ. 31% ಯಾಗಿದ್ದು ಈ ದರವು ಕಡಿಮೆ ಇರುತ್ತದೆ.

**ಕೇಂದ್ರ 7ನೇ ವೇತನ ಆಯೋಗದ ವರದಿಯಲ್ಲಿ ಗಮನಿಸಿರುವ ಪ್ರಮುಖ ಅಂಶಗಳು**

- ವೇತನವು ಆಕರ್ಷಿತವಾಗಿ ಹಾಗೂ ಹೆಚ್ಚು ಪ್ರತಿಭೆಯುಳ್ಳ ನೌಕರರನ್ನು ಉಳಿಸಿಕೊಳ್ಳುವಿಕೆ;
- ವೇತನವು ಹೆಚ್ಚು ಶ್ರಮವಹಿಸಿ ಕೆಲಸ ಮಾಡುವಂತೆ ಪ್ರೇರೇಪಿಸುವುದು;
- ವೇತನ ನೀತಿಯು ಇತರ ಮಾನವ ಸಂಪನ್ಮೂಲ ನಿರ್ವಹಣೆ ಮತ್ತು ಸುಧಾರಣೆಗಳನ್ನು ಪ್ರೇರೇಪಿಸುವುದು;
- ವೇತನವು ದೀರ್ಘಕಾಲದವರೆಗೆ ಆರ್ಥಿಕವಾಗಿ ತಡೆದುಕೊಳ್ಳುವ ಮಟ್ಟದಲ್ಲಿರುವಂತೆ ಖಾತ್ರಿ ಪಡಿಸಿಕೊಳ್ಳುವುದು.
- ಹಿಂದಿನ ವ್ಯವಸ್ಥೆಯಲ್ಲಿದ್ದ ಪೇ ಬ್ಯಾಂಡ್ ಮತ್ತು ಗ್ರೇಡ್ ಪೇ ಗಳನ್ನು ಬದಲಾವಣೆಗೊಳಿಸಿ ವೇತನದಲ್ಲಿದ್ದ ಪೇ ಬ್ಯಾಂಡ್‌ಗಳನ್ನು ಗ್ರೇಡ್ ಪೇನೊಂದಿಗೆ ವಿಲೀನಗೊಳಿಸಿ ಹೊಸ ವೇತನಕೋಶಗಳನ್ನು ಪರಿಚಯಿಸಿದೆ.
- ಯಾವುದೇ ಹೊಸದಾದ ಕೋಶಗಳನ್ನು ಪರಿಚಯಿಸದೆ ಹಾಗೂ ಯಾವುದೇ ಹಂತಗಳನ್ನು ತೆಗೆದು ಹಾಕದೇ ಹೊಸ ವೇತನ ಶ್ರೇಣಿಗಳನ್ನು ವೇತನ ಮೆಟ್ರಿಕ್ಸ್ ರೂಪದಲ್ಲಿ ಪರಿಚಯಿಸಿದೆ.
- 15ನೇ ಅಂತರಾಷ್ಟ್ರೀಯ ಆಯೋಗದ ತತ್ವಗಳನ್ನು ಆಧರಿಸಿ ಮೆಟ್ರಿಕ್ಸ್‌ನ ಪ್ರಾರಂಭಿಕ ಕನಿಷ್ಠ ವೇತನವನ್ನು ನಿರ್ಧರಿಸಲಾಗಿದೆ.

**<u>ಪರಿಷ್ಕೃತ ವೇತನ ಸಂದರ್ಭದಲ್ಲಿ ಪರಿಗಣಿಸಬೇಕಾದ ಅಂಶಗಳು</u>**

- ರಾಜ್ಯದಲ್ಲಿ ಒಟ್ಟು ಮಂಜೂರಾದ ಹುದ್ದೆಗಳಲ್ಲಿ ಶೇ. 32%ರಷ್ಟು ಹುದ್ದೆಗಳು ಖಾಲಿಯಿದ್ದು, ನೌಕರರು ಒತ್ತಡದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.
- ಸರ್ಕಾರಗಳು ಅನೇಕ ಹೊಸ ಯೋಜನೆಗಳು ಹಾಗೂ ಹೊಸ ತಾಲ್ಲೂಕು – ಜಿಲ್ಲೆಗಳನ್ನು ಘೋಷಣೆ ಮಾಡಿ ನೌಕರರ ಜವಾಬ್ದಾರಿಯನ್ನು ಹೆಚ್ಚಿಸಿದೆ.
- ರಾಜ್ಯದಲ್ಲಿ 4 ಕೋಟಿ ಜನಸಂಖ್ಯೆ ಇದ್ದಾಗ 7.63 ಲಕ್ಷ ಹುದ್ದೆಗಳಿದ್ದು, ಹಾಲಿ 6.50 ಕೋಟಿ ಜನ ಸಂಖ್ಯೆಗೆ 5.20 ಲಕ್ಷ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.
- ಜನಸಂಖ್ಯೆ ಹಾಗೂ ಸರ್ಕಾರದ ಹೊಸ ಯೋಜನೆಗಳಿಗೆ ಅನುಗುಣವಾಗಿ ಖಾಲಿ ಹುದ್ದೆಗಳು ಭರ್ತಿಯಾಗದೆ ಇರುವುದರಿಂದ ಸರ್ಕಾರಕ್ಕೆ ಆರ್ಥಿಕ ಉಳಿತಾಯವಾಗಿರುತ್ತದೆ.
- ಇಷ್ಟೆಲ್ಲದರ ನಡುವೆ ರಾಜ್ಯ ಸರ್ಕಾರದ ರಾಜಸ್ವ ಸಂಗ್ರಹ ಸಂಪನ್ಮೂಲ ಕ್ರೂಡಿಕರಣದಲ್ಲಿ ವರ್ಷದಿಂದ ವರ್ಷಕ್ಕೆ ಹೆಚ್ಚಳವಾಗುತ್ತಿದೆ.
- ರಾಜ್ಯವು ರಾಷ್ಟ್ರದಲ್ಲಿ ಜಿ.ಎಸ್.ಟಿ. ಸಂಗ್ರಹಣೆಯಲ್ಲಿ 2ನೇ ಸ್ಥಾನ, ಅಭಿವೃದ್ಧಿ ಸೂಚ್ಯಾಂಕದಲ್ಲಿ 1ನೇ ಸ್ಥಾನದಲ್ಲಿದೆ.
- ದೇಶದ ಸಮಗ್ರ ಅಭಿವೃದ್ಧಿಯಲ್ಲಿ ಕರ್ನಾಟಕ ರಾಜ್ಯವು 5ನೇ ಸ್ಥಾನದಲ್ಲಿದೆ.

ರಾಜಸ್ವ ಸಂಗ್ರಹಣೆಯಲ್ಲಿ ಮಹತ್ತರ ಪಾತ್ರ ನಿರ್ವಹಿಸುತ್ತಿರುವ ರಾಜ್ಯ ಸರ್ಕಾರಿ ನೌಕರರಿಗೆ ಉತ್ತಮ ವೇತನ ಹಾಗೂ ಭತ್ಯೆಗಳನ್ನು ಹೆಚ್ಚಿಸುವಲ್ಲಿ ರಾಜ್ಯ ಸರ್ಕಾರಕ್ಕೆ ಹೆಚ್ಚಿನ ಹೊರೆಯಾಗಲಾರದು ಹಾಗೂ ಇದು ನೌಕರರನ್ನು ಉತ್ತೇಜಿಸುವ ಕ್ರಮವಾಗಿರುತ್ತದೆ. ಆದುದರಿಂದ;

**ರಾಜ್ಯ ಸರ್ಕಾರಿ ನೌಕರರು ಹಾಲಿ ಪಡೆಯುತ್ತಿರುವ ಸಂಪೂರ್ಣ ತುಟ್ಟಿಭತ್ಯೆಯನ್ನು ಮೂಲ ವೇತನದಲ್ಲಿ ವಿಲೀನಗೊಳಿಸಿದ ನಂತರದ ಮೊತ್ತಕ್ಕೆ ಶೇ. 40% ರಷ್ಟು ಫಿಟ್‌ಮೆಂಟ್ ಸೌಲಭ್ಯವನ್ನು 5 ವರ್ಷ ಪೂರ್ಣಗೊಂಡ ದಿನಾಂಕ:01–07–2022ರಿಂದ ಜಾರಿಗೊಳಿಸಲು ಸರ್ಕಾರಕ್ಕೆ ಶಿಫಾರಸ್ಸು ಮಾಡುವುದು.**

**ಕೇಂದ್ರ ಮಾದರಿಯ ವೇತನದ ಬಗ್ಗೆ:**

ಕರ್ನಾಟಕದ ರಾಜ್ಯ ಸರ್ಕಾರಿ ನೌಕರರು ಹಲವಾರು ವರ್ಷಗಳಿಂದ ಕೇಂದ್ರ ಮಾದರಿ ವೇತನವನ್ನು ನೀಡುವಂತೆ ಆಗ್ರಹಿಸಿ ಹೋರಾಟಗಳನ್ನು ಮಾಡಲಾಗಿತ್ತು. ಆದರೆ ಇದುವರೆವಿಗೂ ಯಾವ ಸರ್ಕಾರಗಳು ಈ ಬಗ್ಗೆ ಗಮನಹರಿಸಲಿಲ್ಲ.

ಆದಾಗ್ಯೂ ಕರ್ನಾಟಕ ರಾಜ್ಯ ಸರ್ಕಾರವು 7ನೇ ವೇತನದ ಆಯೋಗದ ಆದೇಶದಲ್ಲಿ ರಾಜ್ಯ ಸರ್ಕಾರಿ ನೌಕರರಿಗೆ ಕೇಂದ್ರ ಮಾದರಿಯ ವೇತನವನ್ನು ಪರಿಶೀಲಿಸಲು ಸೂಚಿಸಿರುತ್ತದೆ. ಅದರಂತೆ ಕರ್ನಾಟಕ ರಾಜ್ಯ ಸರ್ಕಾರಿ ನೌಕರರು ಈಗಾಗಲೇ 2 ವೇತನ ಆಯೋಗ–ಸಮಿತಿಗಳ ಸೌಲಭ್ಯಗಳಿಂದ ವಂಚಿತರಾಗಿರುವುದರಿಂದ ಹಾಗೂ ಮಾರ್ಚ್–2023 ಕ್ಕೆ 5 ವರ್ಷಗಳ ಅವಧಿಯನ್ನು 6ನೇ ವೇತನ ಆಯೋಗ ಪೂರ್ಣಗೊಳ್ಳುವುದರಿಂದ, ಅಲ್ಲದೇ ಈಗಾಗಲೇ ಕೇಂದ್ರ ಸರ್ಕಾರಿ ನೌಕರರು 7ನೇ ವೇತನ ಆಯೋಗದ ಸೌಲಭ್ಯವನ್ನು ಪಡೆದು ಈಗಾಗಲೇ 7 ವರ್ಷಗಳು ಕಳೆದಿರುವುದರಿಂದ ರಾಜ್ಯ ಸರ್ಕಾರಿ ನೌಕರರಿಗೆ ಆರ್ಥಿಕ ನಷ್ಟ ಉಂಟಾಗುತ್ತದೆ. ಆದುದರಿಂದ ಪ್ರಸ್ತುತ 7ನೇ ರಾಜ್ಯ ವೇತನ ಆಯೋಗದ ಸೌಲಭ್ಯವನ್ನು ಪಡೆದ ನಂತರ;

**ಕೇಂದ್ರ ಸರ್ಕಾರವು 2026ರಲ್ಲಿ ಪರಿಷ್ಕರಿಸಲಿರುವ ವೇತನ ಶ್ರೇಣಿ ಹಾಗೂ ಭತ್ಯೆಗಳನ್ನು ರಾಜ್ಯ ಸರ್ಕಾರಿ ನೌಕರರಿಗೂ ಅನ್ವಯಗೊಳಿಸಲು ಆಯೋಗವು ಸರ್ಕಾರಕ್ಕೆ ಶಿಫಾರಸ್ಸು ಮಾಡುವುದು.**

**ಕೋಷ್ಟಕ–03: ಕೇಂದ್ರ ಹಾಗೂ ರಾಜ್ಯ ಸರ್ಕಾರಿ ನೌಕರರ ವಾರ್ಷಿಕ ವೇತನ ಬಡ್ತಿ ದರಗಳಲ್ಲಿ ಉಂಟಾಗಿರುವ ವ್ಯತ್ಯಾಸ:**

| ಕೇಂದ್ರ ಹಾಗೂ ಇತರೆ ರಾಜ್ಯಗಳ ವಾರ್ಷಿಕ ವೇತನ ಬಡ್ತಿ ದರಗಳ ವ್ಯತ್ಯಾಸದ ವಿವರ * ಕನಿಷ್ಠ ಮೂಲವೇತನದ | | |
|---|---|---|
| **ಕೇಂದ್ರ ಸರ್ಕಾರ** | **ಕೇರಳ ಸರ್ಕಾರ** | **ಕರ್ನಾಟಕ ಸರ್ಕಾರ** |
| **ಶೇ. 3%** | **ಶೇ. 3.04%** | **ಶೇ. 2.35%** |

- ಕೇಂದ್ರ ಸರ್ಕಾರವು 6ನೇ ವೇತನ ಆಯೋಗದ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಿದ ಸಂದರ್ಭದಲ್ಲಿ ಪೇ ಬ್ಯಾಂಡ್ ವ್ಯವಸ್ಥೆ ಜೊತೆಗೆ ವಾರ್ಷಿಕ ವೇತನ ಬಡ್ತಿ ದರಗಳನ್ನು ನಿರ್ಧಿಷ್ಟ ಪ್ರಮಾಣಕ್ಕೆ ಬದಲಾಗಿ ಮೂಲ ವೇತನದ ಶೇ. 3% ರಷ್ಟು ವೇತನ ಬಡ್ತಿ ದರವನ್ನು ದಿನಾಂಕ: 01–01–2006ರಿಂದ ಜಾರಿ ಮಾಡಿ ಇಂದಿನವರೆಗೂ ಮುಂದುವರಿಸಿರುತ್ತದೆ.


- ಕೇಂದ್ರ ಸರ್ಕಾರಿ ನೌಕರರಿಗೆ ವಾರ್ಷಿಕ ಬಡ್ತಿ ದರವನ್ನು ಶೇ. 3% ಹಾಗೂ ಕೇರಳ ರಾಜ್ಯ ಸರ್ಕಾರವು ಶೇ. 3.04% ರಷ್ಟು ವಾರ್ಷಿಕ ವೇತನ ಬಡ್ತಿ ದರವನ್ನು ನೀಡುತ್ತಿವೆ. ಕರ್ನಾಟಕ ಸರ್ಕಾರವು ಶೇ. 2.35% ನೀಡುತ್ತಿದ್ದು, ಇದರಿಂದ ರಾಜ್ಯ ಸರ್ಕಾರ ತನ್ನ ನೌಕರರಿಗೆ ನೀಡುತ್ತಿರುವ ವಾರ್ಷಿಕ ವೇತನ ಬಡ್ತಿ ಒಂದರಲ್ಲೇ ಹಲವು ವರ್ಷಗಳಿಂದ ರಾಜ್ಯ ಸರ್ಕಾರಿ ನೌಕರರು ಆರ್ಥಿಕ ನಷ್ಟಕ್ಕೆ ಗುರಿಯಾಗಿರುತ್ತಾರೆ.

**ವಾರ್ಷಿಕ ವೇತನ ಬಡ್ತಿ ದರವನ್ನು ಕೇರಳ ರಾಜ್ಯ ಸರ್ಕಾರದ ಮಾದರಿಯಲ್ಲಿ ಕನಿಷ್ಠ ಮೂಲವೇತನಕ್ಕೆ ಶೇ. 3.04% ರಷ್ಟು ವೇತನ ಬಡ್ತಿ ದರವನ್ನು ಮಂಜೂರು ಮಾಡುವಂತೆ ಶಿಫಾರಸ್ಸು ಮಾಡುವುದು.**

## ಕೋಷ್ಟಕ–04 : ಕೇರಳ ಮತ್ತು ರಾಜ್ಯ ಸರ್ಕಾರಿ ನೌಕರರ ಕೆಲವು ಸಮಾನಾಂತರ ಹುದ್ದೆಗಳ ಒಟ್ಟು ವರಮಾನ ಮತ್ತು ಶೇಕಡವಾರು ಅಸಮಾನತೆಯ ತ:ಖ್ತೆ

| ಕ್ರ. ಸ. | ಪದನಾಮ | ಕೇರಳ ಸರ್ಕಾರ | | | ರಾಜ್ಯ ಸರ್ಕಾರ | | | ಅಸಮಾನತೆ | |
|---|---|---|---|---|---|---|---|---|---|
| | | ಮೂಲ ವೇತನ | ತುಟ್ಟಿ ಭತ್ಯೆ ಶೇ. 34% | ಒಟ್ಟು | ಮೂಲ ವೇತನ | ತುಟ್ಟಿ ಭತ್ಯೆ ಶೇ. 31% | ಒಟ್ಟು | ರೂ. ಗಳಲ್ಲಿ | ಶೇಕಡವಾರು |
| 1 | ಸಮೂಹ 'ಡಿ' | 23000 | 7820 | 30820 | 17000 | 5270 | 22270 | 8550 | 38.39 |
| 2 | ವಾಹನ ಚಾಲಕರು | 27900 | 9486 | 37386 | 21400 | 6634 | 28034 | 9352 | 33.36 |
| 3 | ಕಿರಿಯ ಸಹಾಯಕರು/ದ್ವಿ.ದ.ಸ | 27900 | 9486 | 37386 | 21400 | 6634 | 28034 | 9352 | 33.36 |
| 4 | ಪ್ರಾಥಮಿಕ ಶಾಲೆ ಶಿಕ್ಷಕರು | 45600 | 15504 | 61104 | 25800 | 7998 | 33798 | 27306 | 80.79 |
| 5 | ಪ್ರ.ದ.ಸ/ಯು.ಡಿ.ಸಿ | 31100 | 10574 | 41674 | 27650 | 8572 | 36222 | 5453 | 15.05 |
| 6 | ಕಛೇರಿ ಅಧೀಕ್ಷಕರು | 51400 | 17476 | 68876 | 30350 | 9409 | 39759 | 29118 | 73.24 |
| 7 | ಪೋಲಿಸ್ ಪೇದೆ | 31100 | 10574 | 41674 | 21400 | 6634 | 28034 | 13640 | 48.66 |
| 8 | ಸಹಾಯಕ ನಿರ್ದೇಶಕರು | 59300 | 20162 | 79462 | 43100 | 13361 | 56461 | 23001 | 40.74 |
| 9 | ಉಪ ನಿರ್ದೇಶಕರು | 63700 | 21658 | 85358 | 52650 | 16322 | 68972 | 16387 | 23.76 |
| 10 | ಜಂಟಿ ನಿರ್ದೇಶಕರು | 95600 | 32504 | 128104 | 67550 | 20941 | 88491 | 39614 | 44.77 |
| 12 | ನಿರ್ದೇಶಕರು | 165758 | 56358 | 222116 | 90500 | 28055 | 118555 | 103561 | 87.35 |

## ಕೋಷ್ಟಕ–05 : ಕೇರಳ ಮತ್ತು ರಾಜ್ಯ ಸರ್ಕಾರಿ ನೌಕರರ ಕೆಲವು ಸಮಾನಾಂತರ ಹುದ್ದೆಗಳ ಒಟ್ಟು ವರಮಾನ ಮತ್ತು ಶೇಕಡವಾರು ಅಸಮಾನತೆಯ ತ:ಖ್ತೆ




—*—

**2. ಸರ್ಕಾರಿ ಸೇವೆಯಲ್ಲಿ ಹಾಲಿ ಜಾರಿಯಲ್ಲಿರುವ ಕೆಲಸದ ಅವಧಿ, ರಜಾ ಸೌಲಭ್ಯಗಳು ಮತ್ತು ಸಾರ್ವಜನಿಕ ರಜಾ ದಿನಗಳ ಬಗ್ಗೆ ನಿಮ್ಮ ದೃಷ್ಟಿಕೊನವೇನು?**

ನಗರ ಮತ್ತು ಪಟ್ಟಣಗಳಲ್ಲಿ ಅನಿಯಮಿತ ಸಾರಿಗೆ ವ್ಯವಸ್ಥೆ ಮತ್ತು ಸಂಚಾರ ದಟ್ಟಣೆಯಿಂದಾಗಿ ಬೆಳಿಗ್ಗೆ ಮತ್ತು ಸಂಜೆ ನೌಕರರು ಕಛೇರಿಗೆ ಬಂದು–ಹೋಗುವಾಗ ಸಾರಿಗೆ ಸಮಸ್ಯೆಗಳನ್ನು ಎದುರಿಸುತ್ತಿದ್ದು, ಪ್ರಸ್ತುತ ಕೇಂದ್ರ ಸರ್ಕಾರದ ಮಾದರಿಯಂತೆ ಕಛೇರಿ ಸಮಯದ ಬದಲಾವಣೆ ಮಾಡುವುದು ಅವಶ್ಯಕತೆ ಇರುತ್ತದೆ. ಇದರಿಂದಾಗಿ;

- ಸರ್ಕಾರಕ್ಕೆ ಸಾರಿಗೆ, ವಿದ್ಯುತ್, ನೀರು, ಸರ್ಕಾರಿ ವಾಹನಗಳ ಇಂಧನ ಹಾಗೂ ನಿರ್ವಹಣೆ ವೆಚ್ಚದಲ್ಲಿ ಆರ್ಥಿಕ ಮಿತವ್ಯಯ.
- ಪ್ರವಾಸೋಧ್ಯಮ ಅಭಿವೃದ್ಧಿಗೆ ಪೂರಕವಾಗಿ ಸರ್ಕಾರಕ್ಕೆ ಆದಾಯ ಹೆಚ್ಚಳವಾಗುತ್ತದೆ.
- ಸರ್ಕಾರಿ ನೌಕರರು ಖಾಲಿ ಹುದ್ದೆಗಳ ಪರಿಣಾಮವಾಗಿ ಹೆಚ್ಚಿನ ಕಾರ್ಯಭಾರ ಒತ್ತಡ ಹಾಗೂ ಮಾನಸಿಕ ಖಿನ್ನತೆಗೆ ಒಳಗಾಗಿದ್ದು, ಇದರಿಂದ ಕ್ರಿಯಾಶೀಲರಾಗಿ ಕಾರ್ಯನಿರ್ವಹಿಸಲು ಅನುಕೂಲವಾಗಲಿದೆ.

ರಜಾ ಸೌಲಭ್ಯಗಳ ನೀಡುವಿಕೆಯ ಹಾಗೂ ಸಾರ್ವಜನಿಕ ರಜಾ ಕುರಿತಂತೆ, ರಜೆಯನ್ನು ರಾಜಕೀಯ, ಧಾರ್ಮಿಕ ಮತ್ತು ಇತರೆ ಉದ್ದೇಶಗಳಿಗಾಗಿ ಸರ್ಕಾರವು ಘೋಷಿಸಿದ್ದು, ಇದು ಸಂಘದ–ನೌಕರರ ಬೇಡಿಕೆಯಾಗಿರುವುದಿಲ್ಲ. ಆದ್ದರಿಂದ;

**ಕರ್ನಾಟಕ ರಾಜ್ಯದಲ್ಲಿ ಕಛೇರಿ ಕೆಲಸದ ವೇಳೆಯನ್ನು ಹಾಲಿಯಿರುವ ಬೆಳಿಗ್ಗೆ 10.00 ಕ್ಕೆ ಬದಲಾಗಿ ಬೆಳಿಗ್ಗೆ 9.30ರಿಂದ ಹಾಗೂ ಸಂಜೆ 5.30ಕ್ಕೆ ಬದಲಾಗಿ ಸಂಜೆ 6.00 ರವರೆಗೆ ನಿಗದಿಪಡಿಸುವುದು.**

**ಮುಂದುವರೆದು ಶೈಕ್ಷಣಿಕ ಸಂಸ್ಥೆಗಳನ್ನು ಹೊರತುಪಡಿಸಿ ಸರ್ಕಾರಿ ಕಛೇರಿಯ ವಾರದ ಕರ್ತವ್ಯದ ದಿನಗಳನ್ನು ಶನಿವಾರ, ಭಾನುವಾರ ಹೊರತುಪಡಿಸಿ ವಾರಕ್ಕೆ ಐದು ದಿನಗಳಂತೆ ಕರ್ತವ್ಯದ ದಿನಗಳೆಂದು ನಿಗದಿಪಡಿಸುವುದು.**

–*–

**3. ವೇತನ ಹೆಚ್ಚಳದಿಂದ ಉಂಟಾಗುವ ಹೆಚ್ಚುವರಿ ವೆಚ್ಚವನ್ನು ಸ್ವಲ್ಪ ಮಟ್ಟಿಗೆ ಸರಿದೂಗಿಸಲು ಸರ್ಕಾರದ ವೆಚ್ಚಗಳಲ್ಲಿ ಮಿತವ್ಯಯ ಸಾಧಿಸಲು ಯಾವುದಾದರೂ ನಿರ್ದಿಷ್ಟ ಸಲಹೆಗಳಿವೆಯೇ?**

ವೇತನ ಹೆಚ್ಚಳ ಮಾಡುವುದರಿಂದ ಸರ್ಕಾರಕ್ಕೆ ಯಾವುದೇ ಹೆಚ್ಚುವರಿಯಾಗಿ ಆರ್ಥಿಕ ಹೊರೆಯಾಗುವುದಿಲ್ಲ. ಕಾರಣ;

- ಕರ್ನಾಟಕ ರಾಜ್ಯ ಸರ್ಕಾರಿ ನೌಕರರು ರಚನಾತ್ಮಕವಾಗಿ ದಕ್ಷತೆಯಿಂದ ಕಾರ್ಯ ನಿರ್ವಹಿಸುವಲ್ಲಿ ದೇಶದಲ್ಲಿಯೇ ಮಾದರಿ.
- ಅನಗತ್ಯ ವೆಚ್ಚಗಳಿಗೆ ಕಡಿವಾಣ ಹಾಕುವುದು.
- ಸರ್ಕಾರಿ ನೌಕರರು ಕ್ರಿಯಾಶೀಲವಾಗಿ ಕಾರ್ಯ ನಿರ್ವಹಿಸಲು ಪ್ರೇರೆಪಿಸಿ ಸರ್ಕಾರಕ್ಕೆ ಹೆಚ್ಚಿನ ಆದಾಯವನ್ನು ನಿರೀಕ್ಷಿಸುವುದು.
- ಆಡಳಿತದಲ್ಲಿ ತಂತ್ರಜ್ಞಾನವನ್ನು ಪೂರ್ಣ ಪ್ರಮಾಣದಲ್ಲಿ ಬಳಸವುದರಿಂದ ಮಿತವ್ಯಯ ಸಾಧಿಸಬಹುದಾಗಿದೆ.
- ಸರ್ಕಾರಗಳು ಎಲ್ಲಾ ಅನಗತ್ಯ ವೆಚ್ಚಗಳಿಗೆ ನಿರ್ದಿಷ್ಟವಾದ ಕಾನೂನು ರೂಪಿಸುವುದು ಅವಶ್ಯವಾಗಿದೆ.

ಆದಾಗ್ಯೂ ಈ ಕೆಳಕಂಡಂತೆ ರಾಜ್ಯ ಸರ್ಕಾರಿ ನೌಕರರ ವೇತನ ಭತ್ಯೆಗಳಿಗೆ ಸರ್ಕಾರವು ವಾರ್ಷಿಕವಾರು ವೆಚ್ಚ ಮಾಡುತ್ತಿದೆ.

**ಕೋಷ್ಟಕ–6 : ರಾಜ್ಯದ ಆಯವ್ಯಯದ ಒಟ್ಟು ಜಮಾ–ಖರ್ಚುಗಳು**

| ವರ್ಷ | ರಾಜ್ಯ ಆಂತರಿಕ ಉತ್ಪನ್ನ | ಸರ್ಕಾರಿ ನೌಕರರಿಗೆ ವೇತನ & ಭತ್ಯೆಗಳು | ನಿವೃತ್ತ ನೌಕರರ ಪಿಂಚಣಿ/ಭತ್ಯೆಗಳು | ಶಾಸಕಾಂಗದ ಎಲ್ಲಾ ವೇತನ/ ಪಿಂಚಣಿ ಭತ್ಯೆ / & ಇತರೆ ವೆಚ್ಚಗಳು | ಅಭಿವೃದ್ಧಿ, ಸಾಲ ಮರುಪಾವತಿ ಇನ್ನಿತರೆ ಯೋಜನಾ ವೆಚ್ಚ |
|---|---|---|---|---|---|
| 2021–22 | 100% | 18% | 12% | 15% | 55% |

- ರಾಜ್ಯ ಸರ್ಕಾರಗಳು ರಾಜ್ಯದ ಆಯವ್ಯಯದಲ್ಲಿ ಯೋಜನೇತರ ವೆಚ್ಚಗಳಲ್ಲಿ ರಾಜ್ಯ ಸರ್ಕಾರಿ ನೌಕರರ ವೇತನ ಭತ್ಯೆಗಳಿಗೆ ರಾಜ್ಯದ ರಾಜಸ್ವದಲ್ಲಿ ಶೇ. 45% ರಷ್ಟು ವ್ಯಯಮಾಡುತ್ತಿರುವುದಾಗಿ ಬಿಂಬಿಸುವ ಮೂಲಕ ಸಾರ್ವಜನಿಕರಿಗೆ ತಪ್ಪು ಮಾಹಿತಿ ನೀಡಲಾಗುತ್ತಿದೆ.


- ವಾಸ್ತವವಾಗಿ ಒಟ್ಟು ರಾಜಸ್ವದ ಯೋಜನೇತರ ವೆಚ್ಚಗಳಲ್ಲಿ ರಾಜ್ಯ ಸರ್ಕಾರಿ ನೌಕರರಿಗೆ ಶೇ. 18% ರಷ್ಟು ಮಾತ್ರ ವೇತನ ಭತ್ಯೆಗಳಿಗೆ ಬಳಸಲಾಗುತ್ತಿದೆ.

**ಒಟ್ಟು ರಾಜಸ್ವದ ಯೋಜನೇತರ ವೆಚ್ಚಗಳಲ್ಲಿ ಶಾಸಕಾಂಗ ಹಾಗೂ ಕಾರ್ಯಾಂಗದ ವೇತನ, ಭತ್ಯೆ, ಪಿಂಚಣಿ ಇತರೆ ಸವಲತ್ತುಗಳನ್ನು ಪ್ರತ್ಯೇಕವಾಗಿ ವಿಂಗಡಿಸುವಂತೆ ಆಯೋಗವು ಸರ್ಕಾರಕ್ಕೆ ಶಿಫಾರಸ್ಸು ಮಾಡುವುದು.**


**ಕೋಷ್ಟಕ–7 : ರಾಜ್ಯದಲ್ಲಿನ ಆರ್ಥಿಕ ಬೆಳವಣಿಗೆಯ ಅಭಿವೃದ್ಧಿ ಈ ಕೆಳಕಂಡಂತೆ ಗಮನಿಸಬಹುದಾಗಿದೆ:**

| ರಾಜ್ಯ ಆಂತರಿಕ ಉತ್ಪನ್ನದ ಬೆಳವಣಿಗೆ 2017–18 ರಿಂದ 2021–22 | | | | |
|---|---|---|---|---|
| ವರ್ಷ | ರಾಜ್ಯ ಆಂತರಿಕ ಉತ್ಪನ್ನ (ಕೋಟಿ ರೂಗಳಲ್ಲಿ) | ರಾಜ್ಯ ಆಂತರಿಕ ಉತ್ಪನ್ನದ ವಾರ್ಷಿಕ ಬೆಳವಣಿಗೆ ದರ(%) | ತಲಾ ರಾಜ್ಯ ಆಂತರಿಕ ಉತ್ಪನ್ನ (ರೂಗಳಲ್ಲಿ) | ತಲಾ ರಾಜ್ಯ ಆಂತರಿಕ ಉತ್ಪನ್ನದ ವಾರ್ಷಿಕ ಬೆಳವಣಿಗೆ ದರ(%) |
| **2017–18** | **1333240** | **–** | **185840** | **–** |
| **2018–19** | **1476496** | **9.70** | **204804** | **9.26** |
| **2019–20** | **1615457** | **8.60** | **222002** | **7.75** |
| **2020–21** | **1730991** | **6.67** | **236451** | **6.11** |
| **2021–22** | **2049379** | **15.54** | **278786** | **15.19** |


**ಕೋಷ್ಟಕ–8**




## ಕೋಷ್ಟಕ–9




## ಕೋಷ್ಟಕ–10




## ಕೋಷ್ಟಕ–11




–*–

**4. ಸರ್ಕಾರಿ ನೌಕರರ ವೇತನ ಪರಿಷ್ಕರಣೆಯ ಬಗ್ಗೆ ಶಿಫಾರಸ್ಸು ಮಾಡುವಾಗ ಆಯೋಗವು ನೆರೆ ರಾಜ್ಯಗಳು ಹಾಗೂ ಕೇಂದ್ರ ಸರ್ಕಾರದಲ್ಲಿ ಜಾರಿಯಲ್ಲಿರುವ ವೇತನ ಶ್ರೇಣಿಗಳನ್ನು ಪರಿಗಣಿಸಬೇಕೆ?**

ಕರ್ನಾಟಕ ರಾಜ್ಯ 7ನೇ ವೇತನ ಆಯೋಗವು ವೇತನ ಆಯೋಗದ ಶಿಫಾರಸ್ಸಿನ ಸಂದರ್ಭದಲ್ಲಿ ಕೇರಳ ರಾಜ್ಯದ ವೇತನ ಸೌಲಭ್ಯಗಳನ್ನು ಹಾಗೂ ಕೇಂದ್ರ ಸರ್ಕಾರ 2026ರಲ್ಲಿ ಪರಿಷ್ಕರಿಸುವ ಕೇಂದ್ರ ವೇತನ ಆಯೋಗದ ವೇತನ ಭತ್ಯೆಗಳನ್ನು ರಾಜ್ಯ ಸರ್ಕಾರಿ ನೌಕರರಿಗೂ ಸಹ ಪರಿಷ್ಕರಿಸುವುದು ಅವಶ್ಯವಾಗಿರುತ್ತದೆ. ಕಾರಣ;

- ರಾಷ್ಟ್ರದ ಬೇರೆ ಬೇರೆ ರಾಜ್ಯಗಳಲ್ಲಿ ಕುಟುಂಬ ನಿರ್ವಹಣಾ ವೆಚ್ಚಗಳು ಒಂದೇ ಆಗಿರುತ್ತವೆ.
- ಸಾರಿಗೆ, ವಸತಿ, ಶೈಕ್ಷಣಿಕ, ಆರೋಗ್ಯ ವೆಚ್ಚಗಳು ಏಕರೂಪದಲ್ಲಿರುತ್ತವೆ.
- ಬ್ಯಾಂಕ್ ಸಾಲ ಸೌಲಭ್ಯಗಳ ಬಡ್ಡಿದರಗಳು ಸಹ ಏಕರೂಪದಲ್ಲಿರುತ್ತವೆ.
- ರಾಷ್ಟ್ರದ ಬಹುತೇಕ ರಾಜ್ಯಗಳಲ್ಲಿ ಸರ್ಕಾರಿ ನೌಕರರ ಕಾರ್ಯ ವಿಧಾನಗಳು ಭಾಗಶಃ ಏಕರೂಪದಿಂದ ಕೂಡಿರುತ್ತದೆ.
- ದೇಶದ ಕೆಲವು ರಾಜ್ಯಗಳಲ್ಲಿ ವೇತನ ಹೆಚ್ಚಿದ್ದು, ಕೆಲವು ರಾಜ್ಯಗಳಲ್ಲಿ ಕಡಿಮೆ ಇರುವುದರಿಂದ ನೌಕರರಲ್ಲಿ ಅಸಮಧಾನ ಉಂಟಾಗಿ ಆಡಳಿತದ ಮೇಲೆ ದುಷ್ಪರಿಣಾಮ ಬೀರಲಿದೆ.

**ಮೇಲಿನ ಅಂಶಗಳ ಹಿನ್ನಲೆಯಲ್ಲಿ ರಾಜ್ಯದ 7ನೇ ವೇತನ ಆಯೋಗದ ಶಿಫಾರಸ್ಸಿನಲ್ಲಿ ಕೇರಳ ಮಾದರಿಯ ವೇತನ ಸೌಲಭ್ಯಗಳನ್ನು ನೀಡುವುದು ಹಾಗೂ ಕೇಂದ್ರ ಸರ್ಕಾರವು 2026ರಲ್ಲಿ ಪರಿಷ್ಕರಿಸಲಿರುವ ವೇತನ ಶ್ರೇಣಿ ಹಾಗೂ ಭತ್ಯೆಗಳನ್ನು ರಾಜ್ಯ ಸರ್ಕಾರಿ ನೌಕರರಿಗೂ ಅನ್ವಯಗೊಳಿಸಲು ಆಯೋಗವು ಸರ್ಕಾರಕ್ಕೆ ಶಿಫಾರಸ್ಸು ಮಾಡುವುದು**

–*–

**5. ಸರ್ಕಾರಿ ನೌಕರರಿಗೆ ಹೊಸ ವೇತನ ರಚನೆಯನ್ನು ಶಿಫಾರಸ್ಸು ಮಾಡುವಾಗ ಆಯೋಗವು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವಿನ ಹುದ್ದೆಗಳ ಸಮಾನತೆಯನ್ನು ನಿರ್ಧರಿಸುವ ಮೂಲಕ ಕೇಂದ್ರ ಸರ್ಕಾರದ ವೇತನ ರಚನೆಯನ್ನು ಅಳವಡಿಸಿಕೊಳ್ಳುವ ಕಾರ್ಯಸಾಧ್ಯತೆಯನ್ನು ಪರಿಶೀಲಿಸುವ ಅಗತ್ಯವಿದೆ, ಅಂತಹ ಸಮಾನತೆಯ ಸಾಧ್ಯತೆ ಮತ್ತು ಸಮಂಜಸವೆನಿಸಬಹುದಾದ ಹುದ್ದೆಗಳ ಪ್ರವರ್ಗಗಳ ಕುರಿತು ದಯವಿಟ್ಟು ಸಲಹೆಗಳನ್ನು ಸಮರ್ಥನೆಯೊಂದಿಗೆ ಒದಗಿಸುವುದು.**

**ಪ್ರಸ್ತುತ ನಾವು ರಾಜ್ಯ ವೇತನ ಆಯೋಗದ ಶಿಫಾರಸ್ಸುಗಳನ್ನು ಮಾತ್ರ ನಿರೀಕ್ಷಿಸುತ್ತಿದ್ದು, 2026ರಲ್ಲಿ ಪರಿಷ್ಕರಿಸಲಿರುವ ಕೇಂದ್ರ ಮಾದರಿಯ ವೇತನ ಹಾಗೂ ಭತ್ಯೆಗಳನ್ನು ರಾಜ್ಯ ಸರ್ಕಾರಿ ನೌಕರರಿಗೂ ಅನ್ವಯಗೊಳಿಸಲು ಆಯೋಗವು ಸರ್ಕಾರಕ್ಕೆ ಶಿಫಾರಸ್ಸು ಮಾಡುವುದು.**

–*–

**6. ಸರ್ಕಾರವು ದಿನಾಂಕ:– 1–7–2017 ರಿಂದ ಜಾರಿಗೊಳಿಸಿರುವ ಮುಖ್ಯ ವೇತನ ಶ್ರೇಣಿ ಬಗ್ಗೆ ಹಾಗೂ ಈ ಮುಖ್ಯ ವೇತನ ಶ್ರೇಣಿಯನ್ನು 25 ಪ್ರತ್ಯೇಕ ವೇತನ ಶ್ರೇಣಿಗಳಾಗಿ ವಿಭಾಗಿಸಿರುವ ಬಗ್ಗೆ ಅಭಿಪ್ರಾಯವೇನು? ನಿಮ್ಮ ಅಭಿಪ್ರಾಯದಲ್ಲಿ ಇದು ಸೂಕ್ತವೆ? ಈ ಬಗ್ಗೆ ನಿಮ್ಮ ಯಾವುದೇ ಅಭಿಪ್ರಾಯ ಮತ್ತು ಸಲಹೆಗಳಿದ್ದಲ್ಲಿ ನೀಡುವುದು.**

ಕೆಲವು ತಾರತಮ್ಯಗಳನ್ನು

- 1993ರ ಕರ್ನಾಟಕ 4ನೇ ವೇತನ ಆಯೋಗದ ಮುಖ್ಯ ಶ್ರೇಣಿಗಳು ಮತ್ತು ಫಿಟ್‌ಮೆಂಟ್ ಸೂತ್ರ ಸ್ವೀಕಾರ್ಹವಾಗಿವೆ.
- 1970ರಲ್ಲಿ ನಿವೃತ್ತ ನ್ಯಾಯಾಧೀಶರಾದ ಶ್ರೀ ತುಕೂಳ್ ವೇತನ ಆಯೋಗವು 104 ರಿಂದ 27 ವೇತನ ಶ್ರೇಣಿಗಳಿಗೆ ಸರಳಿಕರಿಸಿತ್ತು.
- ನಂತರದ ಆಯೋಗಗಳು ಶಿಫಾರಸ್ಸು ಮಾಡಿದ್ದ 27 ವೇತನ ಶ್ರೇಣಿಗಳನ್ನು ಕ್ರಮೇಣ 21 ವೇತನ ಶ್ರೇಣಿಗಳಿಗೆ ಇಳಿಸಲಾಯಿತು.
- ಕರ್ನಾಟಕ 5ನೇ ವೇತನ ಆಯೋಗದ ವರದಿ ಆಧಾರದ ಮೇಲೆ 25 ವೇತನ ಶ್ರೇಣಿಗಳನ್ನು ಅನುಷ್ಠಾನಗೊಳಿಸಲಾಗಿದ್ದು. ಇವು ಸಮಂಜಸವಾಗಿರುತ್ತವೆ.

**ಪ್ರಸ್ತುತ ಇರುವ 25 ಮಾಸ್ಟರ್ ವೇತನ ಶ್ರೇಣಿ ಹಾಗೂ 92 ವೇತನ ಹಂತಗಳನ್ನು ಮುಂದುವರೆಸುವುದು.**

–*–

**7. ಸರ್ಕಾರಿ ನೌಕರರ ಪ್ರಸ್ತುತ ವೇತನ ಶ್ರೇಣಿಯನ್ನು ದಿನಾಂಕ:– 01–07–2017 ರಂದು ಇದ್ದ 12 ತಿಂಗಳ ಸರಾಸರಿ ಬಳಕೆದಾರರ ಬೆಲೆ ಸೂಚ್ಯಂಕದ 276.9 (AIACPI) ಸೂಚ್ಯಂಕದ ಆಧಾರದಲ್ಲಿ ರೂಪಿಸಲಾಗಿದೆ. ನಿಮ್ಮ ಅಭಿಪ್ರಾಯದಲ್ಲಿ, ನೂತನ ಶ್ರೇಣಿಯನ್ನು AIACPI ಯ ಯಾವ ಬಿಂದುವಿನ ಆಧಾರದ ಮೇಲೆ ರೂಪಿಸಬೇಕು ?**

ಕೇಂದ್ರದ ಏಳನೇ ಆಯೋಗವು, ಕೇಂದ್ರ ಸರ್ಕಾರಿ ನೌಕರರಿಗೆ 15ನೇ ಅಂತರಾಷ್ಟ್ರೀಯ ಕಾರ್ಮಿಕ ಸಂಸ್ಥೆಯು ನೀಡಿರುವ ಕನಿಷ್ಠ ವೇತನವನ್ನು ಕಂಡುಹಿಡಿಯಲು ***ಅಕ್ರಾಯ್ಡ್*** ಸೂತ್ರವನ್ನು ಅಳವಡಿಸಿ ಪ್ರತಿ ಮಾಹೆ ಕನಿಷ್ಠ ಮೂಲವೇತನ ರೂ.18,000 ಗರಿಷ್ಠ ಮೂಲವೇತನ ರೂ.2,25,000 ನಿಗದಿಪಡಿಸಿದೆ.

ನೌಕರರು ಅವರ ಪೂರ್ಣ ಸೇವಾಧಿಯಲ್ಲಿ ಯಾವುದೇ ರೀತಿಯ ಸ್ಥಗಿತ ಇಲ್ಲದಂತೆ ವೇತನ ಶ್ರೇಣಿಗಳನ್ನು ರೂಪಿಸಬೇಕು. ಯಾಕೆಂದರೆ ಅನೇಕ ನೌಕರರಲ್ಲಿ 33ವರ್ಷಗಳಿಗಿಂತ ಅಧಿಕವಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ.

**ಅಗತ್ಯತೆಗೆ ಅನುಗುಣವಾದ ಕನಿಷ್ಠ ವೇತನವನ್ನು 15ನೇ ಅಂತರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ಕನಿಷ್ಠ ವೇತನದ ಆಕ್ರಾಯ್ಡ್ ಸೂತ್ರವನ್ನು ಅಳವಡಿಸಿ ಹೊಸ ವೇತನ ಶ್ರೇಣಿಗಳನ್ನು 2022ನೇ ಸಾಲಿನ 12 ತಿಂಗಳ ಸರಾಸರಿ AICAPI ದರದ ಗರಿಷ್ಠ ಮಟ್ಟದ ಸೂಚ್ಯಾಂಕದ ಆಧಾರದ ಮೇಲೆ ನಿಗದಿಪಡಿಸುವುದು.**

–*–

8. ಈಗ ಜಾರಿಯಲ್ಲಿರುವ ವೇತನ ಶ್ರೇಣಿಗಳಲ್ಲಿ (ವೇತನ + ತುಟ್ಟಿ ಭತ್ಯೆ + ಮನೆಬಾಡಿಗೆ ಭತ್ಯೆ + ನಗರ ಪರಿಹಾರ ಭತ್ಯೆ ಸೇರಿ) ಮಾಹೆಯಾನ ಕನಿಷ್ಟ ವೇತನ ಬೆಂಗಳೂರಿನಲ್ಲಿ ರೂ. 26,850/– ಮತ್ತು ಗ್ರಾಮಾಂತರ ಪ್ರದೇಶದಲ್ಲಿ ರೂ. 23,630/– ಇರುತ್ತದೆ. ಹಾಲಿ ಜೀವನ ನಿರ್ವಹಣಾ ವೆಚ್ಚವನ್ನು ಪರಿಗಣಿಸಿದ್ದಲ್ಲಿ ವೇತನ ಎಷ್ಟಿರಬೇಕು?

ಹಾಲಿ ಇರುವ ಡಿ ವೃಂದ ನೌಕರರ ವೇತನ & ಭತ್ಯೆ

| | ಬೆಂಗಳೂರು ನಗರ | ಗ್ರಾಮಾಂತರ ಪ್ರದೇಶ |
|---|---|---|
| ಮೂಲ ವೇತನ | 17000 | 17000 |
| ತುಟ್ಟಿಭತ್ಯೆ | 5270 | 5270 |
| ಮನೆ ಬಾಡಿಗೆ ಭತ್ಯೆ | 4080 | 1360 |
| ನಗರ ಪರಿಹಾರ ಭತ್ಯೆ | 500 | – |
| ಒಟ್ಟು ರೂ. | 26850–00 | 23630–00 |

ಪರಿಷ್ಕರಿಸಬೇಕಾಗಿರುವ ಡಿ ವೃಂದ ನೌಕರರ ವೇತನ & ಭತ್ಯೆ

| | ಬೆಂಗಳೂರು ನಗರ | ಗ್ರಾಮಾಂತರ ಪ್ರದೇಶ |
|---|---|---|
| ಮೂಲ ವೇತನ | 17000 | 17000 |
| ತುಟ್ಟಿಭತ್ಯೆ | 5270 | 5270 |
| ಮನೆ ಬಾಡಿಗೆ ಭತ್ಯೆ | – | – |
| ನಗರ ಪರಿಹಾರ ಭತ್ಯೆ | – | – |
| ಒಟ್ಟು ರೂ. | 22270 | 22270 |
| ಶೇ. 40 % ಫಿಟ್‌ಮೆಂಟ್ ನೀಡಿದಲ್ಲಿ | 8908 | 8908 |
| ಒಟ್ಟು ನೀಡಬೇಕಾದ ಮೂಲ ವೇತನ | 31178 | 31178 |

ಮೇಲಿನ ಕೋಷ್ಟಕದಂತೆ ಡಿ ವೃಂದದ ಕನಿಷ್ಠ ಮೂಲ ವೇತನ ರೂ. 31,000 ಕ್ಕೆ ನಿಗದಿಗೊಳಿಸುವುದು.

## ಕೋಷ್ಟಕ–12 : ಮಾರುಕಟ್ಟೆ ದರಗಳ ಮಾಹಿತಿಯಂತೆ ಒಂದು ಕುಟುಂಬಕ್ಕೆ ಮಾಸಿಕ ಕುಟುಂಬ ನಿರ್ವಹಣ ವೆಚ್ಚದ ವಿವರ

| ಕನಿಷ್ಠ ವೇತನದ ಲೆಕ್ಕಾಚಾರ 31–12–2022 ರಂತೆ–ಕರ್ನಾಟಕ ಸರ್ಕಾರ | | | | | |
|---|---|---|---|---|---|
| ಕ್ರ. ಸ. | ವಸ್ತುಗಳು | ಪ್ರತಿದಿನದ ತಲಾವಾರು ಬಳಕೆ ಘಟಕ (ಗ್ರಾಂ. / ಮಿ.ಲೀ.) | ಪ್ರತಿ ತಿಂಗಳದ 3–ಬಳಕೆ ಘಟಕ (ಕಿ.ಗ್ರಾಂ/ಲೀ) | ಚಾಲ್ತಿ ಪ್ರತಿ ಕಿಲೋದ ಬೆಲೆ (ರೂ) | ಖರ್ಚು (ರೂ) |
| 1 | ಅಕ್ಕಿ/ಗೋಧಿ | 490 | 44.1 | 45 | 1984.5 |
| 2 | ಬೆಳೆಕಾಳುಗಳು (ತೊಗರಿ/ಉದ್ದು/ಹೆಸರು) | 85 | 7.65 | 160 | 1224 |
| 3 | ಕಚ್ಚಾ ತರಕಾರಿ | 120 | 10.8 | 65 | 702 |
| 4 | ಹಸಿರು ಎಲೆ ತರಕಾರಿ | 150 | 13.5 | 45 | 607.5 |
| 5 | ಇತರೇತರಕಾರಿ | 80 | 7.2 | 40 | 288 |
| 6 | ಹಣ್ಣುಗಳು | 130 | 11.7 | 110 | 1287 |
| 7 | ಹಾಲು | 250 | 22.5 | 40 | 900 |
| 8 | ಸಕ್ಕರೆ ಮತ್ತು ಬೆಲ್ಲ | 50 | 4.5 | 48 | 216 |
| 9 | ತಿನ್ನುವ ಎಣ್ಣೆ | 40 | 3.6 | 170 | 612 |
| 10 | ಮೀನು | | 6 | 410 | 2460 |
| 11 | ಮಾಂಸ | | 8 | 800 | 6400 |
| 12 | ಮೊಟ್ಟೆ | | 90 | 6.6 | 594 |
| 13 | ಮಾರ್ಜಕಗಳು (ಪ್ರತಿ ಮಾಹೆ) | | | | 1200 |
| 14 | ಬಟ್ಟೆ | | | | 2200 |
| 15 | ಒಟ್ಟು (1–14) | | | | 20675 |
| 16 | ಇಂಧನ. ವಿದ್ಯುಚ್ಛಕ್ತಿ ಮತ್ತು ನೀರಿನ ವೆಚ್ಚಗಳು | | | | 2800 |
| 17 | ಒಟ್ಟು(15+16) | | | | 23475 |
| 18 | ಮದುವೆ, ಮನರಂಜನೆ, ಹಬ್ಬಗಳು, ಇತ್ಯಾದಿ | | | | 4500 |
| 19 | ಒಟ್ಟು(17+18) | | | | 27975 |
| 20 | ಕೌಶಲ್ಯ ಅಭಿವೃದ್ಧಿ (19) | | | | 3500 |
| 21 | ಒಟ್ಟು(19+20) | | | | 31475 |
| 22 | ವಸತಿ | | | | 1000 |
| 23 | ಒಟ್ಟು(21+22) | | | | 32475 |
| 24 | ಕ್ರ.ಸಂ 23ನ್ನು 3.75% ರಷ್ಟು ಹೆಚ್ಚಿಸಲಾಗಿದೆ (ತುಟ್ಟಿ ಭತ್ಯೆ ದಿ:–1.7.2022) | | | | 1217.813 |
| 25 | ಕನಿಷ್ಠ ವೇತನ 1.4.2022 ರಲ್ಲಿದ್ದಂತೆ (23+24) | | | | 33692.81 |
| 26 | ಪೂರ್ಣಾಂಕ | | | | 33000 |
| * ಪ್ರಸ್ತುತ ಮಾರುಕಟ್ಟೆಯ ಬೆಲೆಗಳ ಅನುಗುಣವಾಗಿ ಮೇಲ್ಕಂಡ ಪದಾರ್ಥಗಳ ಬೆಲೆಗಳನ್ನು ಅಂದಾಜಿಸಿದೆ. | | | | | |

–*–

**9. ಈಗ ಅತ್ಯಂತ ಕೆಳಗಿನ ವೇತನ ಶ್ರೇಣಿಯ ಕನಿಷ್ಟ ವೇತನ ಮತ್ತು ಅತ್ಯಂತ ಮೇಲಿನ ವೇತನ ಶ್ರೇಣಿಯ ಗರಿಷ್ಟ ವೇತನ ಇವುಗಳ ನಡುವಿನ ಅನುಪಾತ 1:8.86 ರಷ್ಟಿದ್ದು, ಅತ್ಯಂತ ಕೆಳಗಿನ ವೇತನ ಶ್ರೇಣಿಯ ಗರಿಷ್ಟ ವೇತನ ಮತ್ತು ಅತ್ಯಂತ ಮೇಲಿನ ವೇತನ ಶ್ರೇಣಿಯ ಗರಿಷ್ಟ ವೇತನ ಇವುಗಳ ನಡುವಿನ ಅನುಪಾತ 1:5.20 ರಷ್ಟಿದೆ. ಈ ಅನುಪಾತಗಳನ್ನು ಪುನರ್‌ಪರಿಶೀಲಿಸಬೇಕು/ ಮಾರ್ಪಡಿಸಬೇಕೆ ಎಂದು ನೀವು ಭಾವಿಸುತ್ತೀರಾ?**

ರಾಜ್ಯ 7ನೇ ವೇತನ ಆಯೋಗದ ಪ್ರಶ್ನಾವಳಿಯಲ್ಲಿ ನೀಡಿರುವ ಅನುಪಾತವು ಮೂಲವೇತನವನ್ನು ಮಾತ್ರ ಪರಿಗಣಿಸಿರುತ್ತದೆ. 7ನೇ ವೇತನ ಆಯೋಗವು ಪರಿಷ್ಕರಿಸಲಿರುವ ವೇತನ ಶ್ರೇಣಿಗಳಲ್ಲಿನ ಕನಿಷ್ಠ ಹಾಗೂ ಗರಿಷ್ಠ ವೇತನದ ನಡುವಿನ ಅನುಪಾತ **1:8.86** ಕ್ಕೆ ನಿಗದಿಪಡಿಸಿ ಶಿಫಾರಸ್ಸು ಮಾಡುವುದು.

–*–

**10. ವಿವಿಧ ವೇತನ ಶ್ರೇಣಿಗಳ ನಡುವೆ ಈಗ ಇರುವ ಹೋಲಿಕೆಯು, ವಿವಿಧ ಹಂತಗಳಿಗೆ ಅನ್ವಯಿಸುವ ಜವಾಬ್ದಾರಿಗಳಿಗೆ ಅನುಗುಣವಾಗಿದೆಯೇ? ಯಾವುದಾದರೂ ನಿರ್ದಿಷ್ಟ ಹಂತಗಳಲ್ಲಿ ವಿಷಯದಲ್ಲಿ ಬದಲಾವಣೆ ಅಗತ್ಯವಿದ್ದರೆ, ದಯವಿಟ್ಟು ಕಾರಣಗಳನ್ನು ತಿಳಿಸುವುದು.**

ಹಿಂದಿನ ಅನೇಕ ಆಯೋಗಗಳು/ ಸಮಿತಿಗಳು ಕೆಲಸ ಮತ್ತು ಹೊಣೆಗಾರಿಕೆಗೆ ತಕ್ಕಂತೆ ವಿವಿಧ ವೇತನ ಶ್ರೇಣಿಗಳ ನಡುವಿನ ಸಾಪೇಕ್ಷೆಗಳ ಬಗೆಗೆ ಹೇಳಿದೆ. ವೇತನ ಶ್ರೇಣಿಗಳನ್ನು ಮೌಲ್ಯಮಾಪನ ಮಾಡಿ, ಸಾಪೇಕ್ಷತೆಗಳನ್ನು ಕಂಡುಹಿಡಿದು, ಈ ಸಾಪೇಕ್ಷತೆಗಳು ಜವಾಬ್ದಾರಿಗೆ ಅನುಗುಣವಾಗಿ ಇವೆಯೆ ಎಂಬ ವಿಮರ್ಶೆಗೆ ಒಳಪಟ್ಟು ಪ್ರತಿ ವೃಂದವು ಉತ್ತರಿಸಬೇಕಾಗಿದೆ.

ನಾಗರಿಕ ಸೇವಾ ಕಾರ್ಯಕ್ಷಮತೆ, ಉತ್ತಮ ಆಡಳಿತ, ಪಾರದರ್ಶಕ ನೇಮಕಾತಿ ಮತ್ತು ಗುಣಮಟ್ಟದ ತರಬೇತಿ ಹಾಗೂ ಜವಾಬ್ದಾರಿಗಳಿಂದ ಕೂಡಿದ ವ್ಯವಸ್ಥೆಯನ್ನು ಜಾರಿಗೆ ತರುವುದು ಅವಶ್ಯವಾಗಿದೆ.

**ಪ್ರಸ್ತುತ ವಿವಿಧ ವೇತನಗಳ ಮಧ್ಯೆ ಇರುವ ಸಾಪೇಕ್ಷತೆಯನ್ನು (Relativity) ಆಯಾ ವೇತನಗಳಿಗೆ ನೀಡಿರುವ ಹೊಣೆಗಾರಿಕೆಗಳ ಮೇಲೆ ನಿರ್ಧರಿಸಿರುವುದನ್ನು ಆಯೋಗದ ವಿವೇಚನೆಗೆ ಬಿಡಲಾಗಿದೆ. ಹಾಗೂ ಈ ಹಿಂದೆ ನಡೆದುಕೊಂಡು ಬಂದಿರುವ ವೇತನ ಶ್ರೇಣಿಗಳ ನಡುವಿನ ಸಾಪೇಕ್ಷೆಗಳನ್ನು (Relativity) ಸಾಧ್ಯವಾದಷ್ಟುಮಟ್ಟಿಗೆ ಹಾಗೆಯೇ ಮುಂದುವರಿಸುವುದು ಸಮಂಜಸವೆಂದು ಸಂಘದ ಚಿಂತನೆಯಾಗಿದೆ.**

**ಹಲವಾರು ಬಲವಾದ ಅಂಶಗಳು ಮತ್ತು ಬದಲಾದ ಸಂದರ್ಭಗಳು ಮತ್ತು ತಾಂತ್ರಿಕತೆಯ ಸಮರ್ಥನೆಯ ಕಾರಣಗಳಿಂದಾಗಿ ಅನೇಕ ವೃಂದದ ಹುದ್ದೆಗಳ ವೇತನ ಶ್ರೇಣಿಗಳಲ್ಲಿ ಬದಲಾವಣೆಯಾಗಬೇಕಾದಲ್ಲಿ ಅಂತಹ ಬದಲಾವಣೆಗಳನ್ನು ಪರಿಗಣಿಸಿ ಆಯೋಗವು ಸೂಕ್ತ ಶಿಫಾರಸ್ಸು ಮಾಡುವುದು.**

–*–

**11. ನಿಮ್ಮ ಅಭಿಪ್ರಾಯದಲ್ಲಿ ಸರ್ಕಾರಿ ನೌಕರರಿಗೆ ತಮ್ಮ ಸೇವಾ ಅವಧಿಯಲ್ಲಿ ಎಷ್ಟು ಮುಂಬಡ್ತಿಗೆ ಅವಕಾಶಗಳಿರಬೇಕು (30–35 ವರ್ಷಗಳ ಅವಧಿಯಲ್ಲಿ)?**

ಅನೇಕ ಇಲಾಖೆಗಳಲ್ಲಿ ಸೇವಾ ಅರ್ಹತೆ ಇದ್ದಾಗ್ಯೂ ಮುಂಬಡ್ತಿಯ ಅವಕಾಶಗಳು ಅತ್ಯಲ್ಪವಾಗಿವೆ. ಕಾರಣ ಮೇಲಿನ ಹಂತದ ಹುದ್ದೆಗಳು ಅಗತ್ಯ ಪ್ರಮಾಣದಲ್ಲಿ ಇಲ್ಲದೆ ಇರುವುದರಿಂದ ಹಾಗೂ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಅಗತ್ಯ ತಿದ್ದುಪಡಿಗಳು ಆಗದೆ ಇರುವುದರಿಂದ ಮುಂಬಡ್ತಿಗಳು ದೊರಕುವುದಿಲ್ಲ.

ಈ ಪದ್ದತಿ ಇಲಾಖೆಗಳಿಂದ ಇಲಾಖೆಗಳಿಗೆ ಬದಲಾಗಿರುತ್ತದೆ. ಉದಾ: ಒಂದು ಇಲಾಖೆಯ ದ್ವಿತೀಯ ದರ್ಜೆಯ ಸಹಾಯಕ 5 ವರ್ಷಗಳ ಸೇವೆಯ ನಂತರ ಮುಂಬಡ್ತಿ ಪಡೆಯುತ್ತಾರೆ. ಆದರೆ ಕೆಲವು ಇಲಾಖೆಗಳಲ್ಲಿ 20, 25 ಅಥವಾ 30ವರ್ಷಗಳ ಸೇವೆ ಸಲ್ಲಿಸಿದರು ಸಹ ಯಾವುದೇ ಮುಂಬಡ್ತಿ ದೊರೆತಿರುವುದಿಲ್ಲ. ಇದು ಸ್ವಾಭಾವಿಕ ನ್ಯಾಯ ತತ್ವಕ್ಕೆ ವಿರುದ್ಧವಾಗಿರುತ್ತದೆ.

ರಾಜ್ಯ ಮಟ್ಟದ ಜಂಟಿ ಸಮಾಲೋಚನಾ ಸಮಿತಿಯ ನಿರ್ಣಯದಂತೆ, ರಾಜ್ಯ ಸರ್ಕಾರವು ಎಲ್ಲಾ ಇಲಾಖೆಗಳ ಮುಖ್ಯಸ್ಥರುಗಳಿಗೆ ಪ್ರತಿ ಮೂರು ವರ್ಷಗಳಿಗೊಮ್ಮೆ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಪರಿಷ್ಕರಿಸಲು ಸೂಚನೆ ನೀಡಿದ್ದಾಗ್ಯೂ ಕೆಲವು ಇಲಾಖೆಗಳಲ್ಲಿ ಸೂಚನೆಗಳನ್ನು ಪಾಲಿಸದಿರುವುದರಿಂದ ಮುಂಬಡ್ತಿ ಅವಕಾಶಗಳು ಅತ್ಯಲ್ಪವಾಗುತ್ತಿರುವುದನ್ನು ಆಯೋಗವು ಮನಗಾಣಬೇಕಾಗಿದೆ.

ಕೆಲವು ಇಲಾಖೆಗಳಲ್ಲಿ ಹುದ್ದೆಗಳನ್ನು ಮೇಲ್ದರ್ಜೆಗೆರಿಸದೆ ಇರುವುದರಿಂದ ಮುಂಬಡ್ತಿ ಅವಕಾಶದಿಂದ ನೌಕರರು ವಂಚಿತರಾಗುತ್ತಿದ್ದಾರೆ.

ಪದೋನ್ನತಿ ಬಡ್ತಿ ಅವಕಾಶಗಳ ಕೊರತೆಯು ಕ್ರಮೇಣ ಪದೇಪದೇ ಹುಟ್ಟಲಿರುವ ಸಮಸ್ಯೆ ಎಂದು ವಿವಿಧ ವೃಂದ ಸಂಘಗಳಿಂದ ನಮ್ಮ ಸಂಘಕ್ಕೆ ಬಂದಿರುವ ದೂರುಗಳಿಂದ ಮುಂಬಡ್ತಿ ವಿಷಯವು ಅತ್ಯಂತ ಗಂಭೀರವಾದ ವಿಷಯ.

ಇಲಾಖಾ ಪದೋನ್ನತಿ ಸಮಿತಿ ಸಭೆಗಳನ್ನು (ಡಿಪಿಸಿ) ವರ್ಷದಲ್ಲಿ 3 ಬಾರಿ ನಡೆಸಿ ಆ ಸಂದರ್ಭದಲ್ಲಿ ಲಭ್ಯವಿರುವ ಮುಂಬಡ್ತಿ ಹುದ್ದೆಗಳಿಗೆ ಅನುಗುಣವಾಗಿ ಪದೋನ್ನತಿ ನೀಡುವುದು.

ಸಮರ್ಪಕವಾದ ಪದೋನ್ನತಿ ಬಡ್ತಿಯ ಅವಕಾಶಗಳನ್ನು ಒದಗಿಸುವುದರಿಂದ ಸರ್ಕಾರಿ ನೌಕರರನ್ನು ಗುಣಮಟ್ಟದ ಸೇವೆಗೆ ಪ್ರೋತ್ಸಾಹಿಸಿದಂತಾಗುವುದಲ್ಲದೆ, ನಾಗರೀಕ ಸೇವೆಗಳಲ್ಲಿನ ಸಿಬ್ಬಂದಿಯ ಗೌರವ ಹಾಗೂ ಆರ್ಥಿಕ ಸುಧಾರಣೆಗೆ ಅನುಕೂಲವಾಗಲಿದೆ. ಆದ್ದರಿಂದ;

**ಅರ್ಹ ನೌಕರನು 5 ವರ್ಷದ ಸೇವಾವಧಿ ಅಥವಾ 5 ವರ್ಷ ಸೇವೆ ಸಲ್ಲಿಸಿದ ಅಭ್ಯರ್ಥಿ ಲಭ್ಯವಿಲ್ಲದಿದ್ದಲ್ಲಿ ಕನಿಷ್ಠ 03 ವರ್ಷ ಸೇವೆಯ ನಂತರ ಸ್ವಯಂಚಾಲಿತವಾಗಿ ಅಥವಾ ಕಾಲೋಚಿತವಾಗಿ ಪದೋನ್ನತಿಯನ್ನು ನೀಡುವುದು.**
**ವರ್ಷದಲ್ಲಿ ಕನಿಷ್ಠ 3 ಬಾರಿಯಾದರು ಮುಂಬಡ್ತಿ ಹುದ್ದೆಗಳಿಗೆ ಪದೋನ್ನತಿ ನೀಡುವುದು.**
**ಸೇವಾವಧಿಯಲ್ಲಿ ಕನಿಷ್ಠ 3–4 ಬಡ್ತಿ ಅವಕಾಶಗಳು ಲಭ್ಯವಾಗುವಂತೆ ಶಿಫಾರಸ್ಸು ಮಾಡುವುದು.**

–*–

**12. ನಿಮ್ಮ ಪ್ರಕಾರ ಕನಿಷ್ಠ ವಾರ್ಷಿಕ ವೇತನ ಬಡ್ತಿ ದರವು ಎಷ್ಟಿರಬೇಕು? ಮತ್ತು ಯಾವುದೇ ಒಂದು ವೇತನ ಶ್ರೇಣಿಯಲ್ಲಿ ಅಥವಾ ಬೇರೆ ಬೇರೆ ವೇತನ ಶ್ರೇಣಿಗಳಲ್ಲಿನ ವೇತನ ಬಡ್ತಿಗಳ ನಡುವೆ ಯಾವ ರೀತಿಯ ವ್ಯತ್ಯಾಸ/ಅಂತರ ಇರಬೇಕು?**

| ಕೇಂದ್ರ ಹಾಗೂ ಇತರೆ ರಾಜ್ಯಗಳ ವಾರ್ಷಿಕ ವೇತನ ಬಡ್ತಿ ದರಗಳ ವ್ಯತ್ಯಾಸದ ವಿವರ * ಕನಿಷ್ಠ ಮೂಲವೇತನದ | | |
|---|---|---|
| ಕೇಂದ್ರ ಸರ್ಕಾರ | ಕೇರಳ ಸರ್ಕಾರ | ಕರ್ನಾಟಕ ಸರ್ಕಾರ |
| ಶೇ. 3% | ಶೇ. 3.04% | ಶೇ. 2.35% |

ರಾಜ್ಯದಲ್ಲಿರುವ ವಾರ್ಷಿಕ ವೇತನ ಬಡ್ತಿ ದರಗಳು ನ್ಯಾಯಸಮ್ಮತವಾಗಿಲ್ಲ. ನೆರೆ ರಾಜ್ಯಗಳ ಮಾದರಿಯಲ್ಲಿ ವಾರ್ಷಿಕ ವೇತನ ಬಡ್ತಿ ದರವನ್ನು ನಿಗದಿಗೊಳಿಸುವುದು ಅವಶ್ಯವಾಗಿದೆ. ಆದುದರಿಂದ;

**ವಾರ್ಷಿಕ ವೇತನ ಬಡ್ತಿಯ ದರವನ್ನು ಕೇರಳ ರಾಜ್ಯದ ಮಾದರಿಯಲ್ಲಿ ಮೂಲ ವೇತನಕ್ಕೆ ಶೇ.3.04% ರಷ್ಟು ಮಂಜೂರು ಮಾಡುವುದು.**

–*–

**13. ಪ್ರಸ್ತುತ 8 ವಾರ್ಷಿಕ ಸ್ಥಗಿತ ವೇತನ ಬಡ್ತಿಗಳನ್ನು ಮಂಜೂರು ಮಾಡಲಾಗುತ್ತಿದೆ. ಇದು ಸಮರ್ಪಕವೆಂದು ನೀವು ಭಾವಿಸುತ್ತೀರಾ? ಇಲ್ಲದಿದ್ದಲ್ಲಿ, ಈ ಸ್ಥಗಿತ ವೇತನ ಬಡ್ತಿಯ ವಿಷಯದಲ್ಲಿ ಯಾವುದೇ ಬದಲಾವಣೆಗಳನ್ನು ಸಲಹೆ ಮಾಡುತ್ತೀರಾ?**

ಪ್ರಸ್ತುತ ಇರುವ 8 ವಾರ್ಷಿಕ ಸ್ಥಗಿತ ವೇತನ ಬಡ್ತಿಗಳ ಜೊತೆ ಹೆಚ್ಚುವರಿಯಾಗಿ 4 ಸ್ಥಗಿತ ವೇತನ ಬಡ್ತಿಗಳನ್ನು ಮಂಜೂರು ಮಾಡುವುದು ಸೂಕ್ತವಾಗಿರುತ್ತದೆ. ಕಾರಣ ಹಲವಾರು ಅಧಿಕಾರಿ/ ನೌಕರರು ಸ್ಥಗಿತ ಹಂತಕ್ಕೆ ಹೋದ ಮೇಲೆ ತಾನು ಕರ್ತವ್ಯ ನಿರ್ವಹಿಸಿದರು ಸಹ ಯಾವುದೇ ಆರ್ಥಿಕ ಸೌಲಭ್ಯಗಳು ದೊರೆಯದೆ ಇರುವುದರಿಂದ ಸೇವೆಯಲ್ಲಿ ನಿರಾಸಕ್ತಿ ಹೊಂದುತ್ತಾನೆ. ಆದುದರಿಂದ;

**ಒಬ್ಬ ನೌಕರನು ತನ್ನ ಸೇವಾವಧಿಯಲ್ಲಿ ಬಡ್ತಿ ಸ್ಥಗಿತತೆ ಹೊಂದಿದ ನಂತರ ಹಾಲಿ ಇರುವ 8 ವಾರ್ಷಿಕ ಸ್ಥಗಿತ ವೇತನದ ಜೊತೆಗೆ ಹೆಚ್ಚುವರಿಯಾಗಿ 4 ಸ್ಥಗಿತ ಬಡ್ತಿಗಳನ್ನು ನೀಡಿ ಒಟ್ಟಾರೆ 12 ಸ್ಥಗಿತ ಬಡ್ತಿಗಳಿಗೆ ನಿಗದಿಪಡಿಸುವುದು.**

–*–

**14. ಸಚಿವಾಲಯ ಸಿಬ್ಬಂದಿ ಮತ್ತು ಸಚಿವಾಲಯೇತರ ಸಿಬ್ಬಂದಿಗಳಲ್ಲಿ ಹೋಲಿಸಬಹುದಾದ/ಸಮಾನ ಹುದ್ದೆಗಳಿಗೆ ಸಮಾನ ವೇತನ ಶ್ರೇಣಿ ನೀಡುವ ಕುರಿತಂತೆ ನಿಮ್ಮ ಅನಿಸಿಕೆಯೇನು?**

ಭಾರತ ಸಂವಿಧಾನದ ಅನುಚ್ಛೇದ 166ರನ್ವಯ ರಾಷ್ಟ್ರದ ಪ್ರತಿಯೊಂದು ರಾಜ್ಯಗಳು ಹಾಗೂ ಕೇಂದ್ರ ಸರ್ಕಾರಗಳು ತಮ್ಮ ಸುಗಮ ಆಡಳಿತ ನಿರ್ವಹಣೆ ಹಾಗೂ ಸರ್ಕಾರದ ಕಾರ್ಯಯೋಜನೆಗಳನ್ನು ಕಾರ್ಯಕಾರಿ ಇಲಾಖೆಗಳ ಮೂಲಕ ಶ್ರೀಸಾಮಾನ್ಯರಿಗೆ ತಲುಪಿಸಲು ಸಚಿವಾಲಯಗಳನ್ನು ಸ್ಥಾಪಿಸುವ ಅವಕಾಶವನ್ನು ಕಲ್ಪಿಸಲಾಗಿದೆ. ಅದರಂತೆ, ಕರ್ನಾಟಕ ರಾಜ್ಯದಲ್ಲಿ ಮೂರು ಸಚಿವಾಲಯಗಳು ಅಂದರೆ;

1) ಕರ್ನಾಟಕ ಸರ್ಕಾರ ಸಚಿವಾಲಯ
2) ವಿಧಾನಸಭೆ ಸಚಿವಾಲಯ
3) ಕರ್ನಾಟಕ ವಿಧಾನ ಪರಿಷತ್ತು ಸಚಿವಾಲಯ

ಮೇಲ್ಕಂಡ ಮೂರೂ ಸಚಿವಾಲಯಗಳು ಸರ್ಕಾರದಲ್ಲಿ ಅತ್ಯಂತ ಪ್ರಮುಖ ಹಾಗೂ ನಿರ್ಣಾಯಕ ಪಾತ್ರವನ್ನು ನಿರ್ವಹಿಸುತ್ತಿವೆ. ಅಲ್ಲದೆ, ಸಚಿವಾಲಯದ ನೇಮಕಾತಿಗಳು ಕರ್ನಾಟಕ ಲೋಕಸೇವಾ ಆಯೋಗ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಉನ್ನತ ಶ್ರೇಯಾಂಕ ಪಡೆದ ಅಭ್ಯರ್ಥಿಗಳನ್ನು ಮಾತ್ರ ಸಚಿವಾಲಯ ಸೇವೆಗೆ ನೇಮಕ ಮಾಡಲಾಗುತ್ತದೆ. ಇದರ ಉದ್ದೇಶ ಅತೀ ಹೆಚ್ಚಿನ ಜ್ಞಾನ ಹೊಂದಿರುವ ಇಂತಹ ಸಿಬ್ಬಂದಿಗಳು ಸರ್ಕಾರದ ನಿಯಮಗಳನ್ನು ರೂಪಿಸುವಂತಹ ಕೌಶಲ್ಯವನ್ನು ಹೊಂದಿರುವುದಾಗಿದೆ.

ಸಚಿವಾಲಯದ ಸೇವೆಗಳು ಹಾಗೂ ಕ್ಷೇತ್ರ ಇಲಾಖೆಗಳ ಕಾರ್ಯವೈಖರಿ ವಿಭಿನ್ನವಾಗಿರುವುದರಿಂದ ಸಚಿವಾಲಯದ ಸಿಬ್ಬಂದಿಗಳ ಕೌಶಲ್ಯವನ್ನು ಉತ್ತೇಜಿಸುವ ನಿಟ್ಟಿನಲ್ಲಿ ಈ ಕೆಳಕಂಡ ಸೌಲಭ್ಯಗಳನ್ನು ನೀಡುವುದು.

- **ಸಚಿವಾಲಯ–ಸಚಿವಾಲಯೇತರ ಸಮಾನ ಹುದ್ದೆಗಳ ವೇತನವನ್ನು ಸಮಾನಗೊಳಿಸಲು ಶಿಫಾರಸ್ಸು ಮಾಡುವುದು.**
- **ಕರ್ನಾಟಕ ಸರ್ಕಾರ ಸಚಿವಾಲಯ ಸಿಬ್ಬಂದಿಗಳಿಗೆ ಕೇಂದ್ರ ಸಚಿವಾಲಯದ (Central Secretariate Service) ಅಧಿಕಾರಿ–ನೌಕರರಿಗೆ ನಿಗದಿಪಡಿಸಿರುವ ಮಾದರಿಯಲ್ಲಿ ಪ್ರತ್ಯೇಕ ವೇತನ ಶ್ರೇಣಿ ಹಾಗೂ ಭತ್ಯೆಗಳನ್ನು ಮಂಜೂರು ಮಾಡಲು ಶಿಫಾರಸ್ಸು ಮಾಡುವುದು. ವಿಧಾನಸಭೆ ಮತ್ತು ವಿಧಾನ ಪರಿಷತ್ ಸಚಿವಾಲಯಗಳ ಅಧಿಕಾರಿ–ಸಿಬ್ಬಂದಿಗಳಿಗೆ ಲೋಕಸಭೆ & ರಾಜ್ಯಸಭೆ ಸಚಿವಾಲಯ ಸಿಬ್ಬಂದಿಗಳಿಗೆ ನೀಡುತ್ತಿರುವ ಮಾದರಿಯಲ್ಲಿ ಪ್ರತ್ಯೇಕ ವೇತನಶ್ರೇಣಿ ಮತ್ತು ಭತ್ಯೆಗಳನ್ನು ಮಂಜೂರು ಮಾಡಲು ಶಿಫಾರಸ್ಸು ಮಾಡುವುದು.**

–*–

**15. ವಿಶೇಷ ಭತ್ಯೆ(ಗಳ)ಗೆ ಸಂಬಂಧಿಸಿದಂತೆ ಯಾವುದಾದರೂ ಹುದ್ದೆಗಳ ಭತ್ಯೆಯ ಪ್ರಮಾಣವನ್ನು ಪರಿಷ್ಕರಿಸುವ ಅಗತ್ಯವಿದೆಯೆಂದು ಭಾವಿಸುತ್ತೀರಾ? ದಯವಿಟ್ಟು ವಿವರಗಳನ್ನು ಸಮರ್ಥನೆಯೊಂದಿಗೆ ನೀಡಿರಿ.**

ಕರ್ನಾಟಕ ಸರ್ಕಾರಿ ಸೇವಾ ನಿಯಮಗಳ (ಕೆಸಿಎಸ್‌ಆರ್) ನಿಯಮ 8(420) ರಡಿ ವಿಶೇಷ ವೇತನವನ್ನು ವ್ಯಾಖ್ಯಾನಿಸಲಾಗಿದೆ. ಅಂದರೆ, ಈ ಕೆಳಗಿನವುಗಳನ್ನು ಪರಿಗಣಿಸಿ, ಒಂದು ಹುದ್ದೆ ಅಥವಾ ಸರ್ಕಾರಿ ನೌಕರನ ಉಪಲಬ್ಧಗಳಿಗೆ ವೇತನ ಸ್ವರೂಪ ಒಂದು ಹೆಚ್ಚಳ:

ಅ) **ವಿಶೇಷ ಕ್ಲಿಷ್ಟಕರ ಸ್ವರೂಪದ ಕರ್ತವ್ಯಗಳು; ಅಥವಾ**

ಆ) **ಪ್ರಸಕ್ತ ಕೆಲಸ ಅಥವಾ ಜವಾಬ್ದಾರಿಯ ಜೊತೆಗೆ ವಿಶಿಷ್ಟವಾದ ಹೆಚ್ಚಿನ ಜವಾಬ್ದಾರಿಗಳು; ಅಥವಾ**

ಇ) **ಅನಾರೋಗ್ಯಕರ ವಾತಾವರಣ ಪ್ರದೇಶದಲ್ಲಿ ಕೆಲಸ ಮಾಡುವ ಸಂದರ್ಭ.**

ಕೆಲವು ಇಲಾಖೆಗಳಲ್ಲಿ ಸರ್ಕಾರಿ ನೌಕರರು ತಮ್ಮ ಜೀವದ ಹಂಗನ್ನು ತೊರೆದು ಹಾಗೂ ಕಷ್ಟಕರ ಪರಿಸ್ಥಿತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಅಲ್ಲದೇ ಅವರ ಸರಾಸರಿ ಜೀವಿತಾವಧಿಯು ಸಾಮಾನ್ಯ ನೌಕರರಿಗೆ ಹೋಲಿಸಿದಲ್ಲಿ ಕಡಿಮೆ ಇರುತ್ತದೆ. ಆದುದರಿಂದ;

**ಕೆಲವು ಇಲಾಖೆಗಳಲ್ಲಿ ಅತ್ಯಂತ ವಿಶೇಷ-ಕ್ಲಿಷ್ಟಕರ, ಅನಾರೋಗ್ಯಕರ ವಾತಾವರಣದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ-ನೌಕರರಿಗೆ ವಿಶೇಷ ಭತ್ಯೆಯನ್ನು ಅಲ್ಲಿನ ವಾಸ್ತವ ಪರಿಸ್ಥಿತಿಯನ್ನಾಧರಿಸಿ ಹಾಲಿ ಇರುವ ವಿಶೇಷ ಭತ್ಯೆಯನ್ನು ದ್ವಿಗುಣಗೊಳಿಸುವುದು.**

-*-

**16. ತುಟ್ಟಿಭತ್ಯೆ ಮಂಜೂರಾತಿಯು ಸಂಬಳದ ವಾಸ್ತವಿಕ ವರಮಾನವನ್ನು ಬೆಲೆ ಏರಿಕೆಯಿಂದ ಉಂಟಾಗುವ ಪರಿಣಾಮದಿಂದ ರಕ್ಷಿಸುವ ಪರಿಣಾಮಕಾರಿ ತಂತ್ರವೆಂದು ನೀವು ಭಾವಿಸುತ್ತೀರಾ? ಗ್ರಾಹಕ ಬೆಲೆ ಸೂಚ್ಯಂಕವು ನಿಗದಿತ ಹಂತವನ್ನು ತಲುಪಿದಾಗ ಸ್ವಯಂ ಚಾಲಿತವಾಗಿ ತುಟ್ಟಿಭತ್ಯೆ ಮಂಜೂರು ಮಾಡಬೇಕೆಂಬುದನ್ನು ಒಪ್ಪುತ್ತೀರಾ? ಇಲ್ಲವಾದಲ್ಲಿ, ಮಾರ್ಪಾಟುಗಳಿಗೆ ಸಕಾರಣಗಳೊಂದಿಗೆ ಸಲಹೆಗಳನ್ನು ನೀಡುವುದು.**

- ತುಟ್ಟಿಭತ್ಯೆ ಪರಿಕಲ್ಪನೆಯು ಎರಡನೇ ಮಹಾಯುದ್ಧ ಸಮಯದಲ್ಲಿ ಬೆಲೆ ಏರಿಕೆಯ ಕಾರಣಗಳಿಂದಾಗಿ ತಾತ್ಕಾಲಿಕ ರಕ್ಷಣೆಯನ್ನು ನೀಡುವ ಸಲುವಾಗಿ ಪ್ರಾರಂಭವಾಯಿತು.
- ಇದು ಭಾರತದಲ್ಲೀಗ ಔದ್ಯೋಗಿಕ ಸಂಘಟಿತ ವಲಯಗಳಲ್ಲಿ ಕನಿಷ್ಠ ವೇತನ ರಚನೆಯ ನಿರಂತರ ಭಾಗವಾಗಿ ಪರಿಣಮಿಸಿದೆ. ಕೇಂದ್ರದ ದರಗಳಿಗೆ ಸಮಾನವಾಗಿ 26 ರಾಜ್ಯಗಳು ತಮ್ಮ ನೌಕರರಿಗೆ ತುಟ್ಟಿಭತ್ಯೆಯನ್ನು ನೀಡುತ್ತಲಿವೆ.
- ಅದರಂತೆ ರಾಜ್ಯ ಸರ್ಕಾರವೂ ಸಹ ಕೇಂದ್ರಕ್ಕನುಗುಣವಾಗಿ ಸಮಾನ ತುಟ್ಟಿಭತ್ಯೆಯನ್ನು ಮಂಜೂರು ಮಾಡುವುದು ಸೂಕ್ತವಾಗಿರುತ್ತದೆ. ಆದುದರಿಂದ;

**ಪ್ರತಿ 06 ತಿಂಗಳಿಗೊಮ್ಮೆ ನೀಡಲಾಗುವ ತುಟ್ಟಿಭತ್ಯೆಯನ್ನು 7ನೇ ವೇತನ ಆಯೋಗದ ಪರಿಷ್ಕೃತ ವೇತನ ಶ್ರೇಣಿಗಳಲ್ಲಿ ಕೇಂದ್ರ ಸರ್ಕಾರಿ ನೌಕರರಿಗೆ ಸರಿಸಮಾನವಾದ ದರದಲ್ಲಿ ರಾಜ್ಯ ಸರ್ಕಾರಿ ನೌಕರರಿಗೆ ವಿಳಂಬವಿಲ್ಲದೆ ತುಟ್ಟಿಭತ್ಯೆಯನ್ನು ನೀಡುವುದು.**

-*-

**17. ಹಾಲಿ ಜಾರಿಯಲ್ಲಿರುವ ಮನೆ ಬಾಡಿಗೆ ಭತ್ಯೆ ಮತ್ತು ನಗರ ಪರಿಹಾರ ಭತ್ಯೆ ದರಗಳು ವಾಸ್ತವಿಕ ಮತ್ತು ಸಮಂಜಸವೆಂದು ನೀವು ಅಭಿಪ್ರಾಯಪಡುವಿರಾ? ಇಲ್ಲದಿದ್ದಲ್ಲಿ, ಕಾರಣಗಳ ಸಹಿತ ನೀವು ಪರಿಗಣಿಸುವ ಸಮಂಜಸ ದರವೇನು ಮತ್ತು ಏಕೆ ಎಂದು ದಯವಿಟ್ಟು ಸೂಚಿಸಿರಿ.**

ಬಾಡಿಗೆ ಮನೆಯಲ್ಲಿ ವಾಸಿಸುವವರಿಗೆ ಪರಿಹಾರವಾಗಿ ಪ್ರಸ್ತುತ ರಾಜ್ಯ ಸರ್ಕಾರಿ ನೌಕರರಿಗೆ ನೀಡುತ್ತಿರುವ ಮನೆ ಬಾಡಿಗೆ ಭತ್ಯೆಯು ಅತ್ಯಂತ ಮುಖ್ಯವಾದ ಅಂಶವಾಗಿದೆ,

- ಸರ್ಕಾರವು ತನ್ನ ನೌಕರರಿಗೆ ಕಾರ್ಯಸ್ಥಾನಗಳಲ್ಲಿ ವಸತಿ ಸೌಲಭ್ಯಗಳನ್ನು ಕಲ್ಪಿಸಿರುವುದಿಲ್ಲ.
- ಮಾಲೀಕರು ಮನೆಗಳನ್ನು ಬಾಡಿಗೆಗೆ ಕೊಡುವಾಗ ನೌಕರರ ಮೇಲೆ ಕಟ್ಟುನಿಟ್ಟಾದ ಷರತ್ತಿನ ಕರಾರುಗಳನ್ನು ವಿಧಿಸಿ ಹೆಚ್ಚಿನ ಮುಂಗಡಗಳನ್ನು ಪಡೆಯುತ್ತಾರೆ.
- ಬಾಡಿಗೆಯನ್ನು ಪ್ರತಿ ವರ್ಷ ಶೇ.5–10% ರಷ್ಟು ಹೆಚ್ಚಳ ಮಾಡುತ್ತಾರೆ.
- ಪ್ರಸ್ತುತ ಗ್ರಾಮೀಣ ಪ್ರದೇಶದಲ್ಲೂ ಅವಶ್ಯ ಮೂಲಭೂತ ಸೌಲಭ್ಯಗಳು ಲಭ್ಯವಿರುವುದರಿಂದ ಗ್ರಾಮೀಣ ಪ್ರದೇಶದಲ್ಲಿಯೂ ಹೆಚ್ಚಿನ ಬಾಡಿಗೆಯನ್ನು ವಿಧಿಸಲಾಗುತ್ತಿದೆ.
- ರಾಜ್ಯ ಸರ್ಕಾರಿ ನೌಕರರಿಗೆ ಕಡಿಮೆ ದರದ ಮನೆಬಾಡಿಗೆ ಭತ್ಯೆಯನ್ನು ನಿಗದಿಪಡಿಸುವ ಕ್ರಮವು ಅವೈಜ್ಞಾನಿಕವಾಗಿರುತ್ತದೆ.
- ರಾಜ್ಯ ಸರ್ಕಾರವು 6ನೇ ವೇತನ ಆಯೋಗದ ಶಿಫಾರಸ್ಸು ಹಾಗೂ ಕೇಂದ್ರ ಸರ್ಕಾರದ ಮಾದರಿಯಲ್ಲಿ ಮನೆ ಬಾಡಿಗೆ ಭತ್ಯೆಯನ್ನು ಈ ಕೆಳಕಂಡಂತೆ ಅನುಷ್ಠಾನಗೊಳಿಸಿದೆ.
- 2011ರ ಜನಗಣತಿಯ ಜನಸಂಖ್ಯೆಯನ್ನು ಆಧಾರವಾಗಿ ಇಟ್ಟುಕೊಂಡಿರುವುದು ಅವೈಜ್ಞಾನಿಕವಾಗಿರುತ್ತದೆ. ಸರ್ಕಾರವು ಇದುವರೆವಿಗೂ 2021ರ ಜನಗಣತಿ ಕಾರ್ಯವನ್ನು ಪೂರ್ಣಗೊಳಿಸದಿರುವುದರಿಂದ ಕಳೆದ 02 ವರ್ಷಗಳಿಂದ ನೌಕರರಿಗೆ ಅರ್ಹರಿದ್ದರೂ ಹೆಚ್ಚಿನ ಮನೆ ಬಾಡಿಗೆ ಭತ್ಯೆ ಸಿಗುತ್ತಿಲ್ಲ.

**ಕೋಷ್ಟಕ–13 : ರಾಜ್ಯದಲ್ಲಿ ಹಾಲಿ ಇರುವ ಮನೆ ಬಾಡಿಗೆ ಭತ್ಯೆ ದರಗಳು**

| ಜನಸಂಖ್ಯೆ | ವರ್ಗೀಕರಣ | ಮೂಲವೇತನದ ಶೇಕಡವಾರು ಮನೆ ಬಾಡಿಗೆ ಭತ್ಯೆ ದರಗಳು |
|---|---|---|
| **25 ಲಕ್ಷಕ್ಕೂ ಮೇಲ್ಪಟ್ಟು** | **A** | **24%** |
| **5 ಲಕ್ಷ ಮತ್ತು ಅದಕ್ಕೂ ಮೇಲ್ಪಟ್ಟು ಆದರೆ 25 ಲಕ್ಷಕ್ಕೂ ಕಡಿಮೆ** | **B** | **16%** |
| **5 ಲಕ್ಷಕ್ಕಿಂತ ಕಡಿಮೆ** | **C** | **8%** |

**ಹಾಲಿ ಮನೆ ಬಾಡಿಗೆ ಭತ್ಯೆಯ ನಗರಗಳ ವರ್ಗೀಕರಣ: (2011ರ ಜನಗಣತಿಯಂತೆ)**

| ವರ್ಗೀಕರಣ | ಪ್ರದೇಶಗಳು / ಜನ ಸಂಖ್ಯೆ |
|---|---|
| **'A'** ವರ್ಗದ ನಗರ | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ |
| **'B'** ವರ್ಗದ ನಗರಗಳು | ಮೈಸೂರು, ಹುಬ್ಬಳ್ಳಿ–ಧಾರವಾಡ, ಕಲ್ಬುರ್ಗಿ, ಬೆಳಗಾವಿ ಮತ್ತು ಮಂಗಳೂರು ಮಹಾನಗರ ಪಾಲಿಕೆಗಳು. |
| **'C'** ವರ್ಗದ ನಗರಗಳು | ಜನ ಸಂಖ್ಯೆಯಲ್ಲಿ 5 ಲಕ್ಷಕ್ಕೂ ಕಡಿಮೆ ಇರುವ ಎಲ್ಲಾ ಇತರೆ ಪ್ರದೇಶಗಳು. |

**ಕೋಷ್ಟಕ–14 : ಪ್ರಸ್ತುತ ಕೇಂದ್ರ ಸರ್ಕಾರದ ಮನೆ ಬಾಡಿಗೆ ಭತ್ಯೆ ದರಗಳು**

| ನಗರಗಳು/ಪಟ್ಟಣಗಳ ವರ್ಗೀಕರಣ | ಮೂಲವೇತನದ ಶೇಕಡವಾರು ಮನೆ ಬಾಡಿಗೆ ಭತ್ಯೆ ದರಗಳು |
|---|---|
| **X** | 27% |
| **Y** | 18% |
| **Z** | 9% |

**ರಾಜ್ಯದಲ್ಲಿರುವ ಪ್ರಸ್ತುತ ಜನಸಂಖ್ಯೆಗೆ ಅನುಗುಣವಾಗಿ ಈ ಕೆಳಕಂಡ ಅಂಶಗಳ ಅನ್ವಯ ಪರಿಷ್ಕರಿಸುವುದು.**

- ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯಲ್ಲಿ ಲಭ್ಯವಿರುವ ಇತ್ತೀಚಿನ ಜನಸಂಖ್ಯೆಯ ಅಂಕಿ–ಅಂಶಗಳ ಮಾಹಿತಿಯನ್ವಯ ರಾಜ್ಯದ ಬೃಹತ್ ಮಹಾನಗರ ಪಾಲಿಕೆ, ಮಹಾನಗರ ಪಾಲಿಕೆ, ನಗರ ಸಭೆ, ಪುರಸಭೆ, ಪಟ್ಟಣ ಪಂಚಾಯಿತಿ ಹಾಗೂ ಗ್ರಾಮಾಂತರ ಪ್ರದೇಶಗಳನ್ನು ವರ್ಗೀಕರಿಸುವುದು.
- 2021ರ ಜನಸಂಖ್ಯೆಯನ್ನು ಪರಿಗಣಿಸಿದಲ್ಲಿ ಶಿವಮೊಗ್ಗ, ದಾವಣಗೆರೆ, ತುಮಕೂರು, ವಿಜಯಪುರ, ಬಳ್ಳಾರಿ ಸೇರಿದಂತೆ ಹಲವು ಜಿಲ್ಲಾ ಕೇಂದ್ರಗಳು ಮಹಾನಗರ ಪಾಲಿಕೆಗಳಾಗಿ ವರ್ಗೀಕರಣಗೊಂಡಿದ್ದು, ಜನಸಂಖ್ಯೆ ಹೆಚ್ಚಳವಾಗಿರುವ ಹಿನ್ನಲೆಯಲ್ಲಿ ಇವುಗಳನ್ನೂ ಸಹ **'B'** ವರ್ಗಕ್ಕೆ ವರ್ಗೀಕರಿಸುವುದು.
- ಈಗಾಗಲೇ ಕೇಂದ್ರ ಸರ್ಕಾರಿ ನೌಕರರಿಗೆ ತುಟ್ಟಿಭತ್ಯೆ ದರವು ಶೇ. 25% ಹಾಗೂ ಶೇ. 50% ಕ್ಕೆ ತಲುಪಿದಾಗ ಶೇ. 3% ರಷ್ಟು ಮನೆ ಬಾಡಿಗೆ ಭತ್ಯೆ ಹೆಚ್ಚಳವಾಗುತ್ತಿದ್ದು, ರಾಜ್ಯ ಸರ್ಕಾರಿ ನೌಕರರಿಗೂ ವಿಸ್ತರಿಸುವುದು.

ಸರ್ಕಾರವು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್‌ಗಳ ಸಂಖ್ಯೆಯನ್ನು 100 ರಿಂದ 198ಕ್ಕೆ ಹೆಚ್ಚಳ ಮಾಡಿ ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯಲ್ಲಿನ ಹಲವು ಗ್ರಾಮಾಂತರ ಪ್ರದೇಶಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಸೇರ್ಪಡೆಗೊಳಿಸಿರುವ ಹಿನ್ನೆಲೆಯಲ್ಲಿ ಈ ಕೆಳಕಂಡ ಅಂಶಗಳನ್ನು ಪರಿಗಣಿಸಿ ಬೆಂಗಳೂರು ನಗರ ಜಿಲ್ಲೆಯ ಕಂದಾಯ ಗಡಿಯವರೆಗಿನ ಎಲ್ಲಾ ಪ್ರದೇಶಗಳನ್ನೂ **'A'** ವರ್ಗದಲ್ಲಿ ವರ್ಗೀಕರಿಸುವುದು.

- ಬೆಂಗಳೂರು ನಗರ ಜಿಲ್ಲೆಯ ಗಡಿಭಾಗದ ಪ್ರದೇಶಗಳಲ್ಲಿ ಐ.ಟಿ/ಬಿ.ಟಿ. ಮತ್ತು ಬೃಹತ್ ಕೈಗಾರಿಕೆಗಳು ಸ್ಥಾಪನೆಗೊಂಡಿರುತ್ತವೆ.
- ಬೆಂಗಳೂರು ನಗರ ಜಿಲ್ಲೆಯ ಗಡಿ ಭಾಗದಲ್ಲಿ ಕಂದಾಯ, ಆರೋಗ್ಯ, ಜಿಲ್ಲಾ ಪಂಚಾಯಿತಿ, ಪೊಲೀಸ್, ಶಿಕ್ಷಣ ಇಲಾಖೆಗಳ ಆಡಳಿತ ಕಛೇರಿಗಳನ್ನು ಹೊಂದಿವೆ.
- 3 ಮತ್ತು 4ನೇ ಹಂತದಲ್ಲಿ ಮೆಟ್ರೋ ಸೌಲಭ್ಯಗಳು ಬೆಂಗಳೂರು ನಗರ ಜಿಲ್ಲೆಯ ಗಡಿ ಭಾಗದವರೆಗೂ ವಿಸ್ತಾರಗೊಂಡಿರುವುದು.
- ಬೆಂಗಳೂರು ನಗರ ಜಿಲ್ಲೆಯ ಗಡಿ ಭಾಗದವರೆಗೂ ಬಿ.ಎಂ.ಟಿ.ಸಿ. ಬಸ್ ಸೌಲಭ್ಯ ಕಲ್ಪಿಸಿರುವುದು.
- ಬೆಂಗಳೂರು ನಗರ ಜಿಲ್ಲೆಯ ಗಡಿ ಭಾಗದವರೆಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಸ್ವಚ್ಛತೆ, ಆರೋಗ್ಯ ಸೇರಿದಂತೆ ಇತರೆ ಸೇವೆಗಳನ್ನು ವಿಸ್ತರಿಸಿರುವುದು.
- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಗಡಿಯಿಂದ 500 ಮೀ. ವ್ಯಾಪ್ತಿಯಲ್ಲಿ ಬೆಂಗಳೂರು ನಗರ ಜಿಲ್ಲೆಯ ಸರ್ಕಾರಿ ಕಚೇರಿಗಳು, ಆರೋಗ್ಯ ಕೇಂದ್ರಗಳು, ಸರ್ಕಾರಿ ಶೈಕ್ಷಣಿಕ ಸಂಸ್ಥೆಗಳಿದ್ದು, ಅಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸರ್ಕಾರಿ ನೌಕರರು ಬೃಹತ್ ಬೆಂಗಳೂರು ನಗರ ಪ್ರದೇಶದ ವ್ಯಾಪ್ತಿಯ ದರದಲ್ಲೇ ಮನೆ ಬಾಡಿಗೆಯನ್ನು ನೀಡುತ್ತಿರುವುದು.
- ಬೃಹತ್ ಬೆಂಗಳೂರು ಮಹಾನಗರದಲ್ಲಿ ಲಭ್ಯವಿರುವ ಎಲ್ಲಾ ಸೌಲಭ್ಯಗಳು ಬೆಂಗಳೂರು ಜಿಲ್ಲೆಯ ಕಂದಾಯ ಗಡಿ ಪ್ರದೇಶಗಳಲ್ಲೂ ಲಭ್ಯವಾಗುತ್ತಿರುವುದರಿಂದ ಆ ಪ್ರದೇಶದ ಆರ್ಥಿಕ ತೆರಿಗೆ ಸಂಗ್ರಹವೂ ಸಹ ಹೆಚ್ಚಳವಾಗಿವೆ, ಸಹಜವಾಗಿಯೇ ಮನೆ ಬಾಡಿಗೆ ದರಗಳೂ ದುಬಾರಿಯಾಗಿವೆ.

ಆದುದರಿಂದ, ಮೇಲ್ಕಂಡ ಅಂಶಗಳನ್ನು ಪರಿಗಣಿಸಿ ಬೆಂಗಳೂರು ನಗರ ಜಿಲ್ಲೆಯನ್ನು ಸಂಪೂರ್ಣವಾಗಿ **'A'** ವರ್ಗಕ್ಕೆ ವರ್ಗೀಕರಿಸಿ ಮನೆ ಬಾಡಿಗೆ ಭತ್ಯೆಯನ್ನು ಪರಿಷ್ಕರಿಸುವುದು.

**ಕೋಷ್ಟಕ–15 : ಮನೆ ಬಾಡಿಗೆ ಭತ್ಯೆ ಮಂಜೂರು ಮಾಡಲು ವರ್ಗೀಕರಿಸಬೇಕಾದ ನಗರಗಳು/ಪಟ್ಟಣಗಳ ಪಟ್ಟಿ**

| A ವರ್ಗೀಕರಿಸಿದ ನಗರಗಳು | B ವರ್ಗೀಕರಿಸಿದ ನಗರಗಳು |
| --- | --- |
| ಬೆಂಗಳೂರು ನಗರ ಜಿಲ್ಲೆ | ಮೈಸೂರು(ಯುಎ), ಹುಬ್ಬಳ್ಳಿ–ಧಾರವಾಡ(ಯುಎ), ಕಲ್ಬುರ್ಗಿ(ಯುಎ), ಬೆಳಗಾವಿ(ಯುಎ) ಮತ್ತು ಮಂಗಳೂರು(ಯುಎ) ಶಿವಮೊಗ್ಗ (ಯುಎ) ದಾವಣಗೆರೆ (ಯುಎ) ತುಮಕೂರು (ಯುಎ) ವಿಜಯಪುರ (ಯುಎ) ಬಳ್ಳಾರಿ (ಯುಎ) |

**ಕೋಷ್ಟಕ–16 : ಪ್ರಸ್ತಾಪಿಸಿರುವ ಮನೆ ಬಾಡಿಗೆ ಭತ್ಯೆಯ ದರಗಳು**

| ಜನಸಂಖ್ಯೆ | ವರ್ಗೀಕರಣ | ಮೂಲವೇತನದ ಶೇಕಡವಾರು ಮನೆ ಬಾಡಿಗೆ ಭತ್ಯೆ ದರಗಳು |
| --- | --- | --- |
| 25 ಲಕ್ಷಕ್ಕೂ ಮೇಲ್ಪಟ್ಟು | A | 30% |
| 5 ಲಕ್ಷ ಮತ್ತು ಅದಕ್ಕೂ ಮೇಲ್ಪಟ್ಟು ಆದರೆ 25 ಲಕ್ಷಕ್ಕೂ ಕಡಿಮೆ | B | 20% |
| 5 ಲಕ್ಷಕ್ಕಿಂತ ಕಡಿಮೆ | C | 15% |

- ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯಲ್ಲಿ ಲಭ್ಯವಿರುವ 2021ರ ಜನಸಂಖ್ಯೆಯ ಮಾಹಿತಿಯನ್ನಾಧರಿಸಿ ನಗರ ಹಾಗೂ ಪಟ್ಟಣ ಪ್ರದೇಶಗಳನ್ನು ವರ್ಗೀಕರಿಸುವುದು.
- HRA ಯ ಉದ್ದೇಶಕ್ಕಾಗಿ ಪ್ರಸ್ತುತ ಬಿ.ಬಿ.ಎಂ.ಪಿ ವ್ಯಾಪ್ತಿಯನ್ನು ಬೆಂಗಳೂರು ನಗರ ಜಿಲ್ಲೆ ಗಡಿ ವ್ಯಾಪ್ತಿಗೆ ವಿಸ್ತರಿಸುವುದು.
- 'ಎ' ವರ್ಗಕ್ಕೆ ಶೇ. 30%, 'ಬಿ' ವರ್ಗಕ್ಕೆ ಶೇ. 20% ಮತ್ತು 'ಸಿ' ವರ್ಗಕ್ಕೆ ಶೇ. 15% ದರದಲ್ಲಿ ಮನೆ ಬಾಡಿಗೆ ಭತ್ಯೆ ನೀಡುವುದು.
- ಕೇಂದ್ರ ಸರ್ಕಾರದ ಮಾದರಿಯಲ್ಲಿ ತುಟ್ಟಿಭತ್ಯೆಯು ಶೇ.25% ಮತ್ತು ಶೇ.50% ರ ಹಂತವನ್ನು ತಲುಪಿದಾಗ ಮನೆ ಬಾಡಿಗೆ ಭತ್ಯೆಗಳನ್ನು ಸ್ವಯಂಚಾಲಿತವಾಗಿ ಶೇ. 3% ರಷ್ಟು ಹೆಚ್ಚಿಸುವುದು.

## ಕೋಷ್ಟಕ–17 : ಹಾಲಿ ಇರುವ ನಗರ ಪರಿಹಾರ ಭತ್ಯೆ ದರಗಳು (CCA)

| ನಗರಗಳು/ಪಟ್ಟಣಗಳ ವರ್ಗೀಕರಣ | ಸರ್ಕಾರಿ ನೌಕರ ಯಾವ ಗುಂಪಿಗೆ ಸೇರಿರುವನು | ನಗರ ಪರಿಹಾರ ಭತ್ಯೆಯ ದರಗಳು (ರೂ.ಗಳಲ್ಲಿ) |
|---|---|---|
| **BBMP** | **A &B** | **600** |
| | **C&D** | **500** |
| ಮೈಸೂರು(ಯುಎ),<br>ಹುಬ್ಬಳ್ಳಿ–ಧಾರವಾಡ(ಯುಎ), ಬೆಳಗಾವಿ(ಯುಎ)<br>ಮತ್ತು ಮಂಗಳೂರು(ಯುಎ),<br>ಶಿವಮೊಗ್ಗ(ಯುಎ) ದಾವಣಗೆರೆ (ಯುಎ)<br>ತುಮಕೂರು (ಯುಎ)<br>ವಿಜಯಪುರ (ಯುಎ) ಬಳ್ಳಾರಿ (ಯುಎ) | **A &B**<br>**C&D** | **450**<br>**400** |

## ಕೋಷ್ಟಕ–18 : ನಗರ ಪರಿಹಾರ ಭತ್ಯೆಗಳ ದರವನ್ನು ಈ ಕೆಳಕಂಡಂತೆ ಪರಿಷ್ಕರಿಸುವುದು.

| ನಗರಗಳು/ಪಟ್ಟಣಗಳ ವರ್ಗೀಕರಣ | ಸರ್ಕಾರಿ ನೌಕರ ಯಾವ ಗುಂಪಿಗೆ ಸೇರಿರುವನು | ನಗರ ಪರಿಹಾರ ಭತ್ಯೆಯ ದರಗಳು (ರೂ.ಗಳಲ್ಲಿ) |
|---|---|---|
| ಬೆಂಗಳೂರು ನಗರ ಜಿಲ್ಲೆ | **A&B**<br>**C &D** | **1200**<br>**1000** |
| ಮೈಸೂರು(ಯುಎ), ಹುಬ್ಬಳ್ಳಿ–<br>ಧಾರವಾಡ(ಯುಎ), ಬೆಳಗಾವಿ(ಯುಎ)<br>ಮತ್ತು ಮಂಗಳೂರು(ಯುಎ)<br>ಶಿವಮೊಗ್ಗ (ಯುಎ)ದಾವಣಗೆರೆ (ಯುಎ)<br>ತುಮಕೂರು (ಯುಎ)<br>ವಿಜಯಪುರ (ಯುಎ) ಬಳ್ಳಾರಿ (ಯುಎ) | **A&B**<br>**C &D** | **1000**<br>**800** |

- ಇಂಧನ ಹಾಗೂ ಪ್ರಯಾಣ ದರಗಳು ಕಾಲಕ್ರಮೇಣ ಹೆಚ್ಚಾಗುತ್ತಿದ್ದು, ನಗರ ಪ್ರದೇಶಗಳಲ್ಲಿ ವಾಸಿಸುವ ನೌಕರರು ದುಬಾರಿ ಸಾರಿಗೆ ವೆಚ್ಚವನ್ನು ಭರಿಸಬೇಕಾಗಿರುತ್ತದೆ.
- ಪ್ರಸ್ತುತ ನೀಡುತ್ತಿರುವ ನಗರ ಪರಿಹಾರ ಭತ್ಯೆಯು ಅತ್ಯಲ್ಪವಾಗಿರುವುದರಿಂದ ಆಯೋಗವು ನಗರ ಪರಿಹಾರ ಭತ್ಯೆಗಳ ಮೇಲ್ಕಂಡ ದರದಂತೆ ಪರಿಷ್ಕರಿಸುವುದು.

–*–

**18. ಪ್ರಸ್ತುತ ನೌಕರರ ಸಂಪೂರ್ಣ ಸೇವಾವಧಿಯಲ್ಲಿ ಎರಡು ಬಾರಿ ಮಾತ್ರ ರಜಾ ಪ್ರಯಾಣ ರಿಯಾಯಿತಿಯನ್ನು ನೀಡಲು ಇರುವ ಅವಕಾಶದಲ್ಲಿ ಯಾವುದೇ ಮಾರ್ಪಡಿಸಲು ಸಲಹೆ ಮಾಡುವಿರಾ ? ಹಾಗಿದ್ದಲ್ಲಿ, ದಯವಿಟ್ಟು ಸಲಹೆಗಳನ್ನು ಕಾರಣಗಳೊಂದಿಗೆ ನೀಡುವುದು.**

ಪ್ರಸ್ತುತವಾಗಿ, ಕೇಂದ್ರ ಸರ್ಕಾರಿ ನೌಕರರಿಗೆ ರಜಾ ಪ್ರಯಾಣ ರಿಯಾಯಿತಿ ಸೌಲಭ್ಯವನ್ನು ಪ್ರತಿ 4 ವರ್ಷಕ್ಕೆ ನೀಡಲಾಗುತ್ತಿದೆ.

ಸರ್ಕಾರಿ ನೌಕರರು ಒತ್ತಡ ಹಾಗೂ ಕೌಟುಂಬಿಕ ಸಮಸ್ಯೆಗಳ ಹಿನ್ನಲೆಯಲ್ಲಿ ಹಾಲಿ ಇರುವ ಸೌಲಭ್ಯಗಳನ್ನು ಹೆಚ್ಚಿಸುವುದು ಅವಶ್ಯವಾಗಿದೆ. ಆದುದರಿಂದ;

**ಸೇವಾವಧಿಯಲ್ಲಿ 2 ಬಾರಿ ಇರುವ ರಜಾ ಪ್ರಯಾಣ ರಿಯಾಯಿತಿ ಸೌಲಭ್ಯವನ್ನು ಪ್ರತಿ 4 ವರ್ಷಕೊಮ್ಮೆ ನೀಡುವುದು. ಹಾಗೂ ಪ್ರಯಾಣ ಭತ್ಯೆದ ಜೊತೆಗೆ ದಿನ ಭತ್ಯೆಯನ್ನು ಸಹ ನೀಡುವುದು.**

–*–

**19. ಖಾಸಗಿ ವೈದ್ಯಕೀಯ ಸಂಸ್ಥೆಗಳು /ಆಸ್ಪತ್ರೆಗಳನ್ನು ಸರ್ಕಾರವು ಮಾನ್ಯ ಮಾಡುತ್ತಾ ಮತ್ತು ಹಲವು ತರಹದ ಖಾಯಿಲೆಗಳಿಗೆ ತಗಲುವ ವೈದ್ಯಕೀಯ ವೆಚ್ಚದ ಮರುಪಾವತಿಯ ದರವನ್ನು ನಿಗದಿಗೊಳಿಸಿ, ವೈದ್ಯಕೀಯ ವೆಚ್ಚದ ಮರುಪಾವತಿಯ ಸೌಲಭ್ಯವನ್ನು ಸರ್ಕಾರವು ಕಾಲಕಾಲಕ್ಕೆ ಸರಳೀಕರಣಗೊಳಿಸಿದೆ. ಅಲ್ಲದೇ, ಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆ (ಕೆ.ಎ.ಎಸ್.ಎಸ್) ಎಂಬ ನಗದುರಹಿತ ಯೋಜನೆಯನ್ನು ಜಾರಿಗೊಳಿಸಿದೆ. ಅಲ್ಲದೆ ಗ್ರೂಪ್–ಸಿ ಮತ್ತು ಗ್ರೂಪ್–ಡಿ ದರ್ಜೆಯ ನೌಕರರಿಗೆ ಮಾಸಿಕ ರೂ.200/– ವೈದ್ಯಕೀಯ ಭತ್ಯೆಯಾಗಿ ಮಂಜೂರು ಮಾಡಿದೆ, ಈ ನಿಟ್ಟಿನಲ್ಲಿ ಸುಧಾರಣೆ ಮಾಡಲು ಸಲಹೆಗಳು ಏನಾದರೂ ಇದ್ದಲ್ಲಿ ನೀಡುವುದು.**

- ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಮನವಿ ಮೇರೆಗೆ ರಾಜ್ಯ ಸರ್ಕಾರವು 2021–22ನೇ ಸಾಲಿನ ಆಯವ್ಯಯದಲ್ಲಿ ಅನುದಾನ ಕಾಯ್ದಿರಿಸಿ **"ಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆ"** (ಕೆ.ಎ.ಎಸ್.ಎಸ್.) ಘೋಷಣೆ ಮಾಡಿ ಆದೇಶ ಹೊರಡಿಸಿದೆ.
- ಈ ಯೋಜನೆಯನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಕಾರ್ಯೋನ್ಮುಖವಾಗಿದ್ದು, ಯೋಜನೆ ಅಂತಿಮ ಹಂತದಲ್ಲಿದೆ.
- ಈ ಯೋಜನೆಯನ್ನು ಆದಷ್ಟು ಶೀಘ್ರವಾಗಿ ಅನುಷ್ಠಾನಗೊಳಿಸುವುದು ಅವಶ್ಯವಾಗಿದೆ. ಆದುದರಿಂದ;

- **ಎಲ್ಲಾ ಕಾಯಿಲೆಗಳಿಗೆ ಎಲ್ಲಾ ಆಸ್ಪತ್ರೆಗಳಲ್ಲಿ ಸಂಪೂರ್ಣ ಉಚಿತವಾಗಿ ಎಲ್ಲಾ ಚಿಕಿತ್ಸಾ ಸೌಲಭ್ಯಗಳನ್ನು ನೀಡುವುದು.**
- **ಈ ಯೋಜನೆಗೆ ಸರ್ಕಾರಿ ನೌಕರರು ಮಾಸಿಕ ವಂತಿಗೆ ನೀಡುವುದರಿಂದ ಅವಲಂಬಿತರ ಆದಾಯದ ಮಿತಿಯನ್ನು ತೆಗೆದುಹಾಕುವುದು.**
- **ವಿವಾಹಿತ ಮಹಿಳಾ ಸರ್ಕಾರಿ ನೌಕರರ ತಂದೆ–ತಾಯಿಯವರನ್ನು ಅವಲಂಬಿತರೆಂದು ಪರಿಗಣಿಸುವುದು.**

–*–

**20. ಪ್ರಸ್ತುತ ಜಾರಿಯಲ್ಲಿರುವ ಸೇವಾ ಪರಿಸ್ಥಿತಿಯು ಮಹಿಳಾ ಉದ್ಯೋಗಿಗಳ ವಿಶೇಷ ಸಮಸ್ಯೆಗಳ ಕುರಿತು ಸಾಕಷ್ಟು ಗಮನ ನೀಡಿದೆ ಎಂದು ಅಭಿಪ್ರಾಯಪಡುವಿರಾ?**

ಪ್ರಸ್ತುತ ರಾಜ್ಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಮಹಿಳಾ ನೌಕರರು ಸಾಕಷ್ಟು ಸಮಸ್ಯೆಗಳ ನಡುವೆ ಕರ್ತವ್ಯ ನಿರ್ವಹಿಸುತ್ತಿದ್ದು, ಅವರುಗಳ ಹಿತರಕ್ಷಣೆ–ಕ್ಷೇಮಾಭಿವೃದ್ಧಿ ಮಾಡುವುದು ಸರ್ಕಾರದ ಜವಾಬ್ದಾರಿಯಾಗಿದೆ. ಅದರಂತೆ ಈ ಕೆಳಕಂಡ ಸುಧಾರಣಾ ಕ್ರಮಗಳನ್ನು ಮಹಿಳಾ ನೌಕರರಿಗೆ ಜಾರಿಗೆ ತರುವುದು ಅತ್ಯವಶ್ಯಕವಾಗಿದೆ.

- ರಾಜ್ಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಮಹಿಳಾ ನೌಕರರಿಗೆ ತಮ್ಮ ಕಾರ್ಯವ್ಯಾಪ್ತಿಯಲ್ಲಿ ಶುಚಿತ್ವವಾದ ಶೌಚಾಲಯಗಳನ್ನು ಒದಗಿಸುವುದು.
- ಮಹಿಳಾ ನೌಕರರು ಕಾರ್ಯನಿರ್ವಹಿಸುತ್ತಿರುವ ಕಛೇರಿಗಳಲ್ಲಿ ಶಿಶುಪಾಲನಾ ಕೇಂದ್ರಗಳನ್ನು ಪ್ರಾರಂಭಿಸುವುದು.
- ಮಹಿಳಾ ನೌಕರರು ಕಛೇರಿಗಳ ವ್ಯಾಪ್ತಿಯಲ್ಲಿ ಪ್ರತೀಕ್ಷಣಾಲಯ ಕೊಠಡಿ (Waiting Room) ಗಳನ್ನು ನಿರ್ಮಿಸುವುದು.
- ಕಛೇರಿ ವ್ಯಾಪ್ತಿಯಲ್ಲಿ ಸಾರ್ವಜನಿಕರಿಂದ ತೊಂದರೆಯಾಗದಂತೆ ರಕ್ಷಣಾತ್ಮಕ ಕ್ರಮಗಳನ್ನು ಕೈಗೊಳ್ಳಲು ಸರ್ಕಾರವು ಸೂಕ್ತ ಸುತ್ತೋಲೆಗಳನ್ನು ಹೊರಡಿಸುವುದು.
- ಮಹಿಳಾ ನೌಕರರು 2 ವರ್ಷಗಳ ಮಕ್ಕಳಿಗೆ ದಿನಕ್ಕೆ 2 ಬಾರಿ ಸ್ತನ್ಯಪಾನಕ್ಕಾಗಿ ಅವಕಾಶ ನೀಡಿ ಆದೇಶ ಹೊರಡಿಸುವುದು.
- ಕಛೇರಿಯ ನಿಗದಿತ ವೇಳೆಯ ನಂತರ ಕೆಲಸ ಮಾಡಿದ ಸಂದರ್ಭದಲ್ಲಿ ಮಹಿಳಾ ನೌಕರರನ್ನು ಸುರಕ್ಷಿತವಾಗಿ ಅವರ ವಾಸಸ್ಥಳಗಳಿಗೆ ಬಿಡುವುದು.

### ಮಹಿಳಾ ನೌಕರರಿಗೆ ರಜೆಗಳು ಹಾಗೂ ಇತರೆ ಭತ್ಯೆಗಳ ಪರಿಷ್ಕರಣೆ:

- **ವಿಕಲಾಂಗಚೇತನ ಮಹಿಳೆಯರಿಗೆ ವಿಶೇಷ ಶಿಶುಪಾಲನಾ ಭತ್ಯೆ:** ವಿಕಲಾಂಗಚೇತನ ಮಕ್ಕಳನ್ನು ಹೊಂದಿರುವ ಸರ್ಕಾರಿ ನೌಕರ ಮಹಿಳೆಯರಿಗೆ ನೀಡುತ್ತಿರುವ ವಿಶೇಷ ಶಿಶುಪಾಲನಾ ಭತ್ಯೆಯನ್ನು ದ್ವಿಗುಣಗೊಳಿಸುವುದು.
- **ಶಿಶುಪಾಲನಾ ರಜೆ:** ಶಿಶುಪಾಲನಾ ರಜೆಯನ್ನು ಮಂಜೂರು ಮಾಡಲು ಈಗಿರುವ ಷರತ್ತನ್ನು ಸಡಿಲಿಸಿ ಕನಿಷ್ಠ 7 ದಿನಗಳ ರಜೆಯನ್ನು ಪಡೆಯುವ ಅವಕಾಶ ಮಾಡಿಕೊಡುವುದು. ಕಾರಣ; ಕೆಲವು ಮಹಿಳಾ ನೌಕರರಿಗೆ ಕಡಿಮೆ ರಜೆಯ ಅವಶ್ಯಕತೆಯಿದ್ದಾಗ ಅನವಶ್ಯಕವಾಗಿ ಗರಿಷ್ಠ ದಿನಗಳ ರಜೆಯನ್ನು ಬಳಸಿಕೊಳ್ಳಬೇಕಾಗುತ್ತದೆ. ಇದರಿಂದ ಆಡಳಿತ ವ್ಯವಸ್ಥೆಯ ಮೇಲೆ ದುಷ್ಪರಿಣಾಮ ಬೀರುತ್ತದೆ. ಈ ರಜೆಯನ್ನು ಮಕ್ಕಳ ಆರೈಕೆ ಉದ್ದೇಶದಿಂದ ಪತ್ನಿ ಇಲ್ಲದ ಹಾಗೂ ಮರು ಮದುವೆಯಾಗದ ಏಕ ಪುರುಷ ಪೋಷಕರಿಗೂ ಸಹ ವಿಸ್ತರಿಸುವುದು

- **ಬಾಡಿಗೆ ತಾಯ್ತನ ಸಂದರ್ಭದ ಹೆರಿಗೆ ಮತ್ತು ಶಿಶುಪಾಲನಾ ರಜೆ:** ಬಾಡಿಗೆ ತಾಯ್ತನದ ಸಂದರ್ಭದಲ್ಲಿ ಮಹಿಳಾ ನೌಕರರಿಗೆ ಹೆರಿಗೆ ಮತ್ತು ಶಿಶುಪಾಲನಾ ರಜೆಗಳಿಗೆ ಅವಕಾಶವಿರುವುದಿಲ್ಲಾ. ಅಂತಹ ಮಹಿಳಾ ನೌಕರರಿಗೂ ಸಹ ಹೆರಿಗೆ ರಜೆ ಮತ್ತು ಶಿಶುಪಾಲನಾ ರಜೆ ಮಂಜೂರು ಮಾಡುವುದು.

–*–

**21. ಈ ಕೆಳಕಂಡ ಭತ್ಯೆಗಳಿಗೆ ಇರುವ ಅರ್ಹತಾ ಷರತ್ತು ಮತ್ತು ಮೊತ್ತದ ಕುರಿತು ಸಲಹೆಗಳೇನಾದರೂ ಇದೆಯೇ ?**

1. **ವಾಹನ ಭತ್ಯೆ**
2. **ಸಮವಸ್ತ್ರ ಭತ್ಯೆ**
3. **ಗಿರಿ ಭತ್ಯೆ**
4. **ಅಪಾಯ ಸಂಭವ ಭತ್ಯೆ**
5. **ಪ್ರಭಾರ ಭತ್ಯೆ**
6. **ನಿಗದಿತ ಪ್ರಯಾಣ ಭತ್ಯೆ**
7. **ಅನ್ಯ ಸೇವೆ ಭತ್ಯೆ**
8. **ವಿಶೇಷ ಭತ್ಯೆ**

**ವಾಹನ ಭತ್ಯೆ :**

ರಾಜ್ಯ 6ನೇ ವೇತನ ಆಯೋಗದ ಶಿಫಾರಸ್ಸಿನಂತೆ ಸರ್ಕಾರವು ಆದೇಶ ಸಂಖ್ಯೆ: ಆಇ 24 ಎಸ್.ಆರ್.ಪಿ. 2018(I) ದಿನಾಂಕ: 11–01–2019ರನ್ವಯ ವಾಹನ ಭತ್ಯೆಗಳನ್ನು ಪರಿಷ್ಕರಿಸಿ ಆದೇಶಿಸುತ್ತದೆ ಹಾಗೂ ಈ ಉದ್ದೇಶಕ್ಕೆ ನೌಕರರ ವರ್ಗವನ್ನು ಎ, ಬಿ, ಸಿ ಹಾಗೂ ಡಿ ವರ್ಗಗಳನ್ನಾಗಿ ವರ್ಗೀಕರಿಸಿರುತ್ತದೆ. ವರ್ಗೀಕರಿಸಲ್ಪಟ್ಟ ವರ್ಗಕ್ಕೆ ಸರ್ಕಾರವು ನಿಗದಿಪಡಿಸಿರುವ ದರಗಳನ್ನು ಪ್ರಸ್ತುತ ಪರಿಸ್ಥಿತಿಗಳಿಗೆ ಅನುಗುಣವಾಗಿ ಪರಿಷ್ಕರಿಸುವುದು ಅವಶ್ಯವಿದ್ದು ಈ ಕೆಳಕಂಡಂತೆ ಪರಿಷ್ಕರಿಸುವುದು.

**ಕೋಷ್ಟಕ–19 : ಹಾಲಿ ಇರುವ ವಾಹನ ಭತ್ಯೆ ದರಗಳು.**

| Category of Government Servants | Vehicles Maintatined and used | Rate of Allowance Per month |
|---|---|---|
| Group A | Motor car / Motor Cycle/ Scooter/ Moped / Bicycle | Rs. 900.00 |
| Group B | | Rs. 900.00 |
| Group C | | Rs. 600.00 |
| Group D | | Rs. 300.00 |

**ಕೋಷ್ಟಕ–20 : ಪರಿಷ್ಕರಿಸಬೇಕಾಗಿರುವ ವಾಹನ ಭತ್ಯೆ ದರಗಳು.**

| Category of Government Servants | Vehicles Maintatined and used | Rate of Allowance Per month |
|---|---|---|
| Group A | Motor car / Motor Cycle/ Scooter/ Moped / Bicycle | Rs. 1500.00 |
| Group B | | Rs. 1500.00 |
| Group C | | Rs. 1000.00 |
| Group D | | Rs. 750.00 |

**ಸಮವಸ್ತ್ರ ಭತ್ಯೆ :**

ರಾಜ್ಯ 6ನೇ ವೇತನ ಆಯೋಗದ ಶಿಫಾರಸ್ಸಿನಂತೆ ಸರ್ಕಾರವು ಆದೇಶ ಸಂಖ್ಯೆ:– ಆಇ 24 ಎಸ್.ಆರ್.ಪಿ. 2018(III) ದಿನಾಂಕ: 11–01–2019 ರನ್ವಯ ಸಮವಸ್ತ್ರ ಭತ್ಯೆಗಳನ್ನು ಪರಿಷ್ಕರಿಸಿರುತ್ತದೆ. ಈ ಭತ್ಯೆಗಳನ್ನು ಅತ್ಯಗತ್ಯ ಇಲಾಖೆಗಳಾದ ಪೋಲಿಸ್, ಕಾರಾಗೃಹ, ಸಾರಿಗೆ, ಅಬಕಾರಿ, ಅಗ್ನಿ ಶಾಮಕ ಮತ್ತು ತುರ್ತು ಸೇವೆಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ/ ವೈದ್ಯಕೀಯ ಶಿಕ್ಷಣ/ ಕಾರ್ಮಿಕ ಇಲಾಖೆ, ಅರಣ್ಯ ಇಲಾಖೆ, ಕಾನೂನು ಮಾಪನ ಶಾಸ್ತ್ರ ಇಲಾಖೆ, ರಾಜ್ಯ ಶಿಷ್ಠಾಚಾರ ಹಾಗೂ ಅತಿಥಿ ಗೃಹಗಳು, ನವದೆಹಲಿ ಕರ್ನಾಟಕ ಭವನ ಸಿಬ್ಬಂದಿಗಳು, ಸಿಆಸುಇ (ಕಾರ್ಯಕಾರಿ), ಸರ್ಕಾರಿ ವಸತಿ ಗೃಹ ಊಟಿ ಸೇರಿದಂತೆ ಇನ್ನಿತರೆ ಕೆಲವು ಇಲಾಖೆಗಳ ಸಿಬ್ಬಂದಿಗಳಿಗೆ ಮಂಜೂರು ಮಾಡಲಾಗಿರುತ್ತದೆ.

ಸಮವಸ್ತ್ರ ಭತ್ಯೆಯ ಪ್ರಸ್ತುತ ದರವು ಕಡಿಮೆಯಾಗಿದ್ದು,ಇವುಗಳನ್ನು ಪ್ರಸ್ತುತ ಪರಿಸ್ಥಿತಿಗಳಿಗೆ ಅನುಗುಣವಾಗಿ ಪರಿಷ್ಕರಿಸುವ ಅಗತ್ಯವಿದ್ದು, ಹಾಲಿ ನೀಡುತ್ತಿರುವ ಸಮವಸ್ತ್ರ ಭತ್ಯೆ ದರವನ್ನು ದ್ವಿಗುಣಗೊಳಿಸುವುದು.

**ಸರ್ಕಾರಿ ಆದೇಶ ಸಂಖ್ಯೆ:– ಆಇ 24 ಎಸ್.ಆರ್.ಪಿ. 2018(III) ದಿನಾಂಕ:– 11–01–2019 ರನ್ವಯ 12 ಇಲಾಖೆಗಳ ವಿವಿಧ ವೃಂದಗಳ ಸಿಬ್ಬಂದಿಗಳಿಗೆ ನೀಡಿರುವ ಸಮವಸ್ತ್ರ ಭತ್ಯೆಯನ್ನು ಪರಿಸ್ಥಿತಿಗೆ ಅನುಗುಣವಾಗಿ ದ್ವಿಗುಣಗೊಳಿಸುವುದು.**

**ಗಿರಿ ಭತ್ಯೆ :**

ರಾಜ್ಯ ಸರ್ಕಾರವು ಹಲವು ವರ್ಷಗಳಿಂದ ರಾಜ್ಯದ ಗಿರಿತಾಣ ಪ್ರದೇಶಗಳಾದ ನಂದಿ ಬೆಟ್ಟ, ಮಹದೇಶ್ವರಸ್ವಾಮಿ ಬೆಟ್ಟ, ಕೃಷ್ಣರಾಜ ಗಿರಿಧಾಮ, ಬೆಳಿಗಿರಿ ರಂಗನ ಬೆಟ್ಟ, ಮಡಿಕೇರಿ ಈ ಪ್ರದೇಶಗಳಲ್ಲಿ ಕರ್ತವ್ಯ ನಿರ್ವಹಿಸುವ ರಾಜ್ಯ ಸರ್ಕಾರಿ ನೌಕರರಿಗೆ ಗಿರಿತಾಣ ಭತ್ಯೆಗಳನ್ನು ಮಂಜೂರು ಮಾಡಿತ್ತು. ಆದರೆ 2012ರ ಅಧಿಕಾರಿಗಳ ವೇತನ ಸಮಿತಿ ಹಾಗೂ ಕರ್ನಾಟಕ ರಾಜ್ಯ 6ನೇ ವೇತನ ಆಯೋಗದ ಶಿಫಾರಸ್ಸಿನ ಅನ್ವಯ ಸರ್ಕಾರವು ಆದೇಶ ಸಂಖ್ಯೆ: ಆಇ 24 ಎಸ್.ಆರ್.ಪಿ. 2018(IV) ದಿನಾಂಕ:– 11–01–2019 ರನ್ವಯ ಈ ಭತ್ಯೆಯನ್ನು ರದ್ದುಪಡಿಸಿರುತ್ತದೆ.

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘವು 6ನೇ ವೇತನ ಆಯೋಗದ ಮುಂದೆ ಈ ಬಗ್ಗೆ ಸಮರ್ಥನೀಯ ವಾದವನ್ನು ಮಂಡಿಸಿತ್ತಾದರು ಆಯೋಗವು ನಮ್ಮ ಮನವಿಯನ್ನು ಪರಿಗಣಿಸಿರುವುದಿಲ್ಲ.

ವಾಸ್ತವವಾಗಿ ಗುಡ್ಡಗಾಡು, ಗಿರಿತಾಣ ಪ್ರದೇಶಗಳಲ್ಲಿ ಕರ್ತವ್ಯ ನಿರ್ವಹಿಸುವ ಶಿಕ್ಷಕರುಗಳು, ಆರೋಗ್ಯ, ಅರಣ್ಯ, ಗ್ರಾಮೀಣಾಭಿವೃದ್ಧಿ, ಕಂದಾಯ, ಪಶುಪಾಲನೆ, ಪೊಲೀಸ್ ಇಲಾಖೆಯ ಸಿಬ್ಬಂದಿಗಳು ತುರ್ತು ಹಾಗೂ ಅತ್ಯವಶ್ಯಕ ಸೇವೆಗಳಗಡಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ದುರ್ಗಮ ಪ್ರದೇಶದಲ್ಲಿ ಸಂಚರಿಸಿ ಕಾರ್ಯನಿರ್ವಹಿಸುವ ಸಂದರ್ಭದಲ್ಲಿ ಯಾವುದೇ ಮೂಲಭೂತ ಸೌಲಭ್ಯಗಳಿಲ್ಲದ ರಸ್ತೆಗಳಲ್ಲಿ ಹಾಗೂ ಕಾಡು ಪ್ರಾಣಿಗಳ ಭಯದಲ್ಲಿ ಕಾರ್ಯ ನಿರ್ವಹಿಸಬೇಕಾದ ಪರಿಸ್ಥಿತಿಯನ್ನು ಅವಲೋಕಿಸಿ ಇಂತಹ ವರ್ಗಕ್ಕೆ ಗಿರಿತಾಣ ಭತ್ಯೆ ನೀಡುವುದು ನ್ಯಾಯಸಮ್ಮತವಾಗಿರುತ್ತದೆ.

**ರಾಜ್ಯದ ಗಿರಿತಾಣ ಪ್ರದೇಶಗಳಾದ ನಂದಿ ಬೆಟ್ಟ, ಮಲೈ ಮಹದೇಶ್ವರಸ್ವಾಮಿ ಬೆಟ್ಟ, ಬಿಳಿಗಿರಿರಂಗನ ಬೆಟ್ಟ, ಮಡಿಕೇರಿ ಹಾಗೂ ಕೃಷ್ಣರಾಜ ಗಿರಿಧಾಮ, ರಾಜ್ಯದ ಪಶ್ಚಿಮ ಘಟ್ಟದ ಜಿಲ್ಲೆಗಳಾದ ಚಿಕ್ಕಮಗಳೂರು, ಉತ್ತರ ಕನ್ನಡ, ದಕ್ಷಿಣ ಕನ್ನಡ, ಶಿವಮೊಗ್ಗ ಜಿಲ್ಲೆಯ ಕೆಲವು ಭಾಗ, ಕೊಡಗು ಜಿಲ್ಲೆಯ ವಿರಾಜಪೇಟೆ ಮತ್ತು ಸೋಮವಾರಪೇಟೆ ತಾಲ್ಲೂಕುಗಳನ್ನು ಪರಿಗಣಿಸಿ, 'ಡಿ' ದರ್ಜೆ ನೌಕರರಿಗೆ ಕನಿಷ್ಟ ರೂ. 500–00 'ಎ' 'ಬಿ' ಮತ್ತು 'ಸಿ' ವರ್ಗದ ನೌಕರರಿಗೆ ಕನಿಷ್ಟ ರೂ. 1000–00 ಗಳ ಗಿರಿಭತ್ಯೆಯನ್ನು ಮಂಜೂರು ಮಾಡುವಂತೆ ಆಯೋಗವು ಸರ್ಕಾರಕ್ಕೆ ಶಿಫಾರಸ್ಸು ಮಾಡುವುದು.**

**ಅಪಾಯ ಸಂಭವ ಭತ್ಯೆ:**

**ಸದರಿ ಭತ್ಯೆಗೆ ಅರ್ಹರಿರುವ ನೌಕರರಿಗೆ ವಿಮೆ ಸೌಲಭ್ಯವನ್ನು 'ಡಿ' ಗುಂಪಿನ ನೌಕರರಿಗೆ ರೂ. 15 ಲಕ್ಷಗಳಷ್ಟು, 'ಸಿ' ಗುಂಪಿನ ನೌಕರರಿಗೆ ರೂ. 20 ಲಕ್ಷಗಳಷ್ಟು ಹಾಗೂ 'ಬಿ' ಮತ್ತು 'ಎ' ಗುಂಪಿನ ನೌಕರರಿಗೆ ರೂ. 25 ಲಕ್ಷಗಳಷ್ಟು ಹೆಚ್ಚಿಸುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡುವುದು.**

**ಪ್ರಭಾರ ಭತ್ಯೆ:**

ಸರ್ಕಾರದ ಆದೇಶದನ್ವಯ ಹಾಲಿ ಇರುವ ಪ್ರಭಾರ ಭತ್ಯೆ ದರ ಶೇ. 15% ಅನ್ನು ಶೇ. 20% ಕ್ಕೆ ಹೆಚ್ಚಿಸುವುದು.

**ನಿಗದಿತ ಪ್ರಯಾಣ ಭತ್ಯೆ:**

ರಾಜ್ಯ ಸರ್ಕಾರವು ಆದೇಶ ಸಂಖ್ಯೆ: ಆಇ 24 ಎಸ್.ಆರ್.ಪಿ. 2018(II) ದಿನಾಂಕ: 11–01–2019 ರನ್ವಯ ನಿಗದಿತ ಪ್ರಯಾಣ ಭತ್ಯೆಗಳನ್ನು ಪರಿಷ್ಕರಿಸಿರುತ್ತದೆ. ಆದರೆ ಈ ಪರಿಷ್ಕರಣೆಯು ಅವೈಜ್ಞಾನಿಕವಾಗಿದ್ದು ಇದರ ಪ್ರಯೋಜನ ಪಡೆಯುವ ಕಂದಾಯ ಇಲಾಖೆ, ಭೂಮಾಪನ, ಕಂದಾಯ ವ್ಯವಸ್ಥೆ ಹಾಗೂ ಭೂದಾಖಲೆಗಳ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಪಶು ಸಂಗೋಪನಾ ಇಲಾಖೆ, ಕೃಷಿ ಇಲಾಖೆ, ಶಿಕ್ಷಣ ಇಲಾಖೆ, ನ್ಯಾಯಾಂಗ ಇಲಾಖೆ ಹಾಗೂ ಇನ್ನಿತರೆ ಇಲಾಖೆಗಳ ಕಾರ್ಯಕಾರಿ ಸಿಬ್ಬಂದಿಗಳಿಗೆ ನಿಗದಿತ ಪ್ರಯಾಣಕ್ಕೆ ತಗಲುವ ವೆಚ್ಚಗಳು ಅಧಿಕವಾಗಿದ್ದು ಇವುಗಳನ್ನು ಪರಿಷ್ಕರಣೆ ಮಾಡುವುದು.

**ಕೋಷ್ಟಕ–21 : ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘವು ಪ್ರಸ್ತುತ ಇರುವ ನಿಗದಿತ ಪ್ರಯಾಣ ಭತ್ಯೆಯನ್ನು ಈ ಕೆಳಕಂಡಂತೆ ಪರಿಷ್ಕರಿಸಲು ಕೋರುತ್ತದೆ.**

| ಇಲಾಖೆಗಳು | ಪ್ರಸ್ತುತ ದರ | ಪರಿಷ್ಕರಿಸಬೇಕಾದ ದರ |
|---|---|---|
| ಕಂದಾಯ ಇಲಾಖೆ | | |
| 1. ತಾಲ್ಲೂಕು ಪ್ರಭಾರದಲ್ಲಿರುವ ತಾಲ್ಲೂಕಿನ ತಹಶೀಲ್ದಾರ್ ( ಸರ್ಕಾರಿ ವಾಹನವನ್ನು ಒದಗಿಸದಿದಲ್ಲಿ) | 1000 | 2000 |
| 2. ರಾಜಸ್ವ ನಿರೀಕ್ಷಕ | 750 | 1500 |
| 3. ಗ್ರಾಮ ಲೆಕ್ಕಿಗ | 500 | 1000 |
| ಭೂಮಾಪನ, ಕಂದಾಯ ವ್ಯವಸ್ಥೆ ಹಾಗೂ ಭೂದಾಖಲೆಗಳ ಇಲಾಖೆ | | |
| 1. ಸಹಾಯಕ ನಿರ್ದೇಶಕರು | 1000 | 2000 |
| 2. ಮೇಲ್ವಿಚಾರಕರು(ಸೂಪರ್‌ವೈಸರ್) | 750 | 1500 |
| 3. ಪ್ರಥಮ/ದ್ವಿತೀಯ ದರ್ಜೆ ಭೂಮಾಪಕರು | 600 | 1200 |
| 4. ಬಾಂದ್ ಜವಾನ್ | 400 | 800 |
| ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ | | |
| 1. ಮೇಲ್ವಿಚಾರಕರು | 750 | 1500 |
| ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ | | |
| 1. ಕಿರಿಯ ಆರೋಗ್ಯ ಸಹಾಯಕರು (ಪುರುಷ/ಮಹಿಳೆ) | 400 | 800 |
| 2. ಹಿರಿಯ ಆರೋಗ್ಯ ಸಹಾಯಕರು (ಪುರುಷ/ ಮಹಿಳೆ) | 400 | 800 |
| ಪಶುಸಂಗೋಪನಾ ಇಲಾಖೆ | | |
| 1. ಹಿರಿಯ ಪಶು ವೈದ್ಯಕೀಯ ನಿರಿಕ್ಷಕರು | 600 | 1200 |
| 2. ಪಶು ವೈದ್ಯ ನಿರೀಕ್ಷಕ | 400 | 800 |

| | | |
|---|---|---|
| **ಕೃಷಿ ಇಲಾಖೆ** | | |
| **1. ಸಹಾಯಕ ಕೃಷಿ ಅಧಿಕಾರಿ** | **750** | **1500** |
| **2. ಕೃಷಿ ಸಹಾಯಕ** | **400** | **800** |
| **ಶಿಕ್ಷಣ ಇಲಾಖೆ** | | |
| **1. ಕ್ಷೇತ್ರ ಶಿಕ್ಷಣಾಧಿಕಾರಿ (ಸರ್ಕಾರಿ ವಾಹನವನ್ನು ಒದಗಿಸದಿರುವ)** | **1000** | **2000** |
| **ನ್ಯಾಯಾಂಗ ಇಲಾಖೆ( ಅಧೀನ ನ್ಯಾಯಾಲಯ)** | | |
| **1. ಬೇಲಿಫ್‌ಗಳು ಮತ್ತು ಪ್ರೊಸೆಸ್ ಸರ್ವರ್‌ಗಳು** | **500** | **1000** |

**ಇಂಧನ ದರಗಳು / ಸಾರಿಗೆ ವೆಚ್ಚಗಳು ಹೆಚ್ಚಾಗಿರುವುದರಿಂದ ವಾಸ್ತವಾಂಶವನ್ನು ಗಮನದಲ್ಲಿಟ್ಟುಕೊಂಡು ಪ್ರಸ್ತುತ ಇರುವ ನಿಗಧಿತ ಪ್ರಯಾಣ ಭತ್ಯೆಯನ್ನು ಕೋಷ್ಠಕದಲ್ಲಿರುವಂತೆ ಪರಿಷ್ಕರಿಸುವುದು.**

**ಅನ್ಯ ಸೇವೆ ಭತ್ಯೆ:**

ಹಾಲಿ ಇರುವ ಅನ್ಯ ಸೇವಾ ಭತ್ಯೆಯನ್ನು ದ್ವಿಗುಣಗೊಳಿಸುವುದು.

**ವಿಶೇಷ ಭತ್ಯೆ :**

ಕರ್ನಾಟಕ ಸರ್ಕಾರಿ ಸೇವಾ ನಿಯಮಗಳ (ಕೆಸಿಎಸ್‌ಆರ್) ನಿಯಮ 8(420) ರಡಿ ವಿಶೇಷ ವೇತನವನ್ನು ವ್ಯಾಖ್ಯಾನಿಸಲಾಗಿದೆ. ಅಂದರೆ, ಈ ಕೆಳಗಿನವುಗಳನ್ನು ಪರಿಗಣಿಸಿ, ಒಂದು ಹುದ್ದೆ ಅಥವಾ ಸರ್ಕಾರಿ ನೌಕರರ ಉಪಲಬ್ಧಗಳಿಗೆ ವೇತನ ಸ್ವರೂಪ ಒಂದು ಹೆಚ್ಚಳ:–

- ವಿಶೇಷ ಕ್ಲಿಷ್ಟಕರ ಸ್ವರೂಪದ ಕರ್ತವ್ಯಗಳು; ಅಥವಾ
- ಪ್ರಸಕ್ತ ಕೆಲಸ ಅಥವಾ ಜವಾಬ್ದಾರಿಯ ಜೊತೆಗೆ ವಿಶಿಷ್ಟವಾದ ಹೆಚ್ಚಿನ ಜವಾಬ್ದಾರಿಗಳು;
- ಅನಾರೋಗ್ಯಕರ ವಾತಾವರಣ ಪ್ರದೇಶದಲ್ಲಿ ಕೆಲಸ ಮಾಡುವ ಸಂದರ್ಭ.

ಸರ್ಕಾರವು ಆದೇಶ ಸಂಖ್ಯೆ: ಆಇ 24 ಎಸ್.ಆರ್.ಪಿ. 2018(XI) ದಿನಾಂಕ: 11–01–2019 ರನ್ವಯ ವಿಶೇಷ ಭತ್ಯೆಯನ್ನು ಮೇಲ್ಕಂಡ ಕಾರಣಗಳಿಗಾಗಿ ಮಂಜೂರು ಮಾಡಿರುತ್ತದೆ. ಈ ಭತ್ಯೆಗಳನ್ನು ದ್ವಿಗುಣಗೊಳಿಸುವ ಮೂಲಕ ಕ್ಲಿಷ್ಟಕರ ಹಾಗೂ ಅನಾರೋಗ್ಯಕರ ವಾತವರಣದಲ್ಲಿ ಕರ್ತವ್ಯ ನಿರ್ವಹಿಸುವ ಸಿಬ್ಬಂದಿಗಳಿಗೆ ಉತ್ತೇಜನ ನೀಡಲು ಶಿಫಾರಸ್ಸು ಮಾಡುವುದು.

- ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಿಬ್ಬಂದಿಗಳಿಗೆ ನೀಡುತ್ತಿರುವ ವಿಶೇಷ ಭತ್ಯೆಯ ಮಂಜೂರಾತಿಯಲ್ಲಿನ ಷರತ್ತಿನಲ್ಲಿರುವ "Control Scheme" ಎಂಬ ಪದದಿಂದಾಗಿ ಅರ್ಹ ನೌಕರರು ಈ ಭತ್ಯೆಯಿಂದ ವಂಚಿತರಾಗುತ್ತಿದ್ದು, ಆದುದರಿಂದ "Control Scheme" ಕೈಬಿಡಲು ಶಿಫಾರಸ್ಸು ಮಾಡುವುದು.

- ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ 'ಡಿ' ದರ್ಜೆ ವೃಂದದ ಅಡುಗೆಯವರು ಮತ್ತು ಅಡುಗೆ ಸಹಾಯಕರು ಕಠಿಣ ಪರಿಸ್ಥಿತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವುದರಿಂದ ಈ ವೃಂದದ ನೌಕರರಿಗೆ ವಿಶೇಷ ಭತ್ಯೆ ನೀಡಲು ಶಿಫಾರಸ್ಸು ಮಾಡುವುದು

**ಹಾಲಿ ಇರುವ ವಿಶೇಷ ಭತ್ಯೆಯನ್ನು ದ್ವಿಗುಣಗೊಳಿಸುವುದು.**

—*—

**22. ವರ್ಗಾವಣೆಯಾದ ಒಬ್ಬ ನೌಕರನಿಗೆ ಮಂಜೂರು ಮಾಡುವ ಈಗಿರುವ ವರ್ಗಾವಣೆ ಅನುದಾನ ಮತ್ತು ಸಾಮಾನು ಸರಂಜಾಮು ಸಾಗಣೆ ಭತ್ಯೆಗಳ ಬಗ್ಗೆ ನಿಮ್ಮ ಅಭಿಪ್ರಾಯಗಳೇನು?**

**ಕೇಂದ್ರ 7ನೇ ವೇತನ ಆಯೋಗವು ಈ ಕೆಳಕಂಡಂತೆ ಶಿಫಾರಸು ಮಾಡಿದೆ.**

ಸಂಯೋಜಿತಾ ವರ್ಗಾವಣೆ ಮತ್ತು ಪ್ಯಾಕಿಂಗ್ ಅನುದಾನ [Composite Transfer and Packing Grant (CTG)] ಆಯೋಗವು ಸೇವೆಯಲ್ಲಿರುವ ಹಾಗೂ ನಿವೃತ್ತಿಯಾಗಿರುವ ನೌಕರರಿಬ್ಬರಿಗೂ ಅವರ ವರ್ಗಾವಣೆಯಿಂದ ಒಂದು ತಿಂಗಳಿನ ಕೊನೆಯಲ್ಲಿ ಪಡೆದ ಮೂಲವೇತನದ ದರವನ್ನಾಗಿ CTG ಯಾಗಿ ನೀಡಲಾಗುತ್ತಿದೆ. ಅದರಂತೆ;

**ಕೇಂದ್ರ ಮಾದರಿಯಂತೆ ವರ್ಗಾವಣೆಗೊಂಡ ಹಾಗೂ ವಯೋನಿವೃತ್ತಿ ಹೊಂದುವ ರಾಜ್ಯ ಸರ್ಕಾರಿ ನೌಕರರಿಗೆ ಕೊನೆ ಮಾಹೆಯ ಮೂಲವೇತನದ ಶೇ. 80% ರಷ್ಟು ವರ್ಗಾವಣೆ ಅನುದಾನ ಮತ್ತು ಸಾಮಾನು ಸರಂಜಾಮು ಸಾಗಣೆ ಭತ್ಯೆಯನ್ನು ನೀಡುವಂತೆ ಶಿಫಾರಸ್ಸು ಮಾಡುವುದು.**

—*—

**23. ಅಧಿಕೃತ ಪ್ರಯಾಣ / ಪ್ರವಾಸದ ಪ್ರಯಾಣ ಭತ್ಯೆ ಮತ್ತು ದಿನ ಭತ್ಯೆಗಳ ದರಗಳನ್ನು ಮಾರ್ಪಡಿಸುವ ಅಗತ್ಯವಿದೆಯೆಂದು ಭಾವಿಸುವಿರಾ? ಹಾಗಾದಲ್ಲಿ ಸೂಕ್ತ ಭತ್ಯೆ ಎಷ್ಟೆಂದು ಸೂಚಿಸುವುದು ?**

ರಾಜ್ಯ ಸರ್ಕಾರವು 6ನೇ ವೇತನ ಆಯೋಗದ ಶಿಫಾರಸ್ಸಿನ ಅನ್ವಯ ಅಧಿಕೃತ ಪ್ರಯಾಣ/ ಪ್ರವಾಸದ ಸೌಲಭ್ಯ ಪಡೆಯಲು ರಾಜ್ಯ ಸರ್ಕಾರಿ ನೌಕರರ ವೃಂದವನ್ನು ಈ ಕೆಳಕಂಡಂತೆ ವರ್ಗೀಕರಿಸಿದೆ;

**ಕೋಷ್ಟಕ–22 : ಹಾಲಿ ಪ್ರವರ್ಗಗಳ ಸಮೂಹ**

| ಪ್ರವರ್ಗ | ಸಮೂಹ |
|---|---|
| I A | ಸಮೂಹ ಎ (ಹಿರಿಯ ಶ್ರೇಣಿ ಮತ್ತು ಹೆಚ್ಚಿನ) ನೌಕರರು |
| I B | ಸಮೂಹ ಎ (ಕಿರಿಯ ಶ್ರೇಣಿ) ನೌಕರರು |
| II | ಸಮೂಹ ಬಿ ನೌಕರರು |
| III | ಸಮೂಹ ಸಿ ನೌಕರರು |
| IV | ಸಮೂಹ ಡಿ ನೌಕರರು |

**ಕೋಷ್ಟಕ–23 : ಪರಿಷ್ಕರಿಸಬೇಕಾದ ಪ್ರವರ್ಗಗಳ ಸಮೂಹ ಕೋಷ್ಟಕ.**

| ಪ್ರವರ್ಗ | ಸಮೂಹ |
|---|---|
| I<br>(I A& I B) | ರೂ. 45,300 ರಿಂದ ಮತ್ತು ಅದಕ್ಕೂ ಮೇಲ್ಪಟ್ಟು |
| II | ರೂ. 36,000 ರಿಂದ ರೂ.45,299/– ವರೆಗೆ |
| III | ರೂ. 21,400 ರಿಂದ ರೂ. 35,999/– ವರೆಗೆ |
| IV | ರೂ. 21,400 /–ಗಳಿಗಿಂತ ಕಡಿಮೆ. |

**ಕೋಷ್ಟಕ–24 : ಹಾಲಿ ಇರುವ ಭತ್ಯೆಯ ದರಗಳು.**

| ಕ್ರಮ ಸಂಖ್ಯೆ | ಪ್ರವರ್ಗ | ಅರ್ಹತೆ |
|---|---|---|
| 1 | **I A ರೂಪಾಯಿ 74,400/– ಅಥವಾ ಅದಕ್ಕೂ ಮೇಲ್ಪಟ್ಟು ವೇತನ ಪಡೆಯುವವರು** | **ಶತಾಬ್ದಿ ಎಕ್ಸ್‌ಪ್ರೆಸ್‌ನಲ್ಲಿ ಎಕ್ಸಿಕ್ಯೂಟಿವ್ ಕ್ಲಾಸ್ ಮತ್ತು ಇತರೆ ರೈಲುಗಳಲ್ಲಿ ಎ.ಸಿ. ಫಸ್ಟ್ ಕ್ಲಾಸ್** |
| | **I B ರೂಪಾಯಿ 52,650/– ಅಥವಾ ಅದಕ್ಕೂ ಮೇಲ್ಪಟ್ಟು ಅಂದರೆ ರೂಪಾಯಿ 74,400/– ಗಳಿಗಿಂತ ಕಡಿಮೆ ವೇತನ ಪಡೆಯುವವರು** | **ಶತಾಬ್ದಿ ಎಕ್ಸ್‌ಪ್ರೆಸ್‌ನಲ್ಲಿ ಎ.ಸಿ.ಚೇರ್ ಕಾರ್ ಮತ್ತು ಇತರೆ ರೈಲುಗಳಲ್ಲಿ ಎ.ಸಿ. 2 ಟಯರ್** |
| 2 | II | **ಎ.ಸಿ. ಚೇರ್ ಕಾರ್/ ಫಸ್ಟ್ ಕ್ಲಾಸ್ / ಎ.ಸಿ. 3 ಟಯರ್** |
| 3 | III | **ಎ.ಸಿ. ಚೇರ್ ಕಾರ್/ ಫಸ್ಟ್ ಕ್ಲಾಸ್ / ಎ.ಸಿ. 3 ಟಯರ್** |
| 4 | IV | **ಶತಾಬ್ದಿ ಹಾಗೂ ರಾಜಧಾನಿ ಎಕ್ಸ್‌ಪ್ರೇಸ್‌ನಲ್ಲಿ ಎ.ಸಿ. ಚೇರ್‌ಕಾರ್ ಮತ್ತು ಇತರೆ ರೈಲುಗಳಲ್ಲಿ ಸ್ಲೀಪರ್ ಕ್ಲಾಸ್** |

**ಕೋಷ್ಟಕ–25 : ಈ ಕೆಳಕಂಡಂತೆ ಭತ್ಯೆಗಳನ್ನು ಪರಿಷ್ಕರಿಸಿ ಶಿಫಾರಸ್ಸು ಮಾಡುವುದು.**

| ಕ್ರಮ ಸಂಖ್ಯೆ | ಪ್ರವರ್ಗ | ಅರ್ಹತೆ |
|---|---|---|
| 1 | I<br>(I A& I B) | ವಂದೇ ಭಾರತ್, ಶತಾಬ್ದಿ ಎಕ್ಸ್‌ಪ್ರೆಸ್‌ನಲ್ಲಿ ಎಕ್ಸಿಕ್ಯೂಟಿವ್ ಕ್ಲಾಸ್ ಮತ್ತು ಇತರೆ ರೈಲುಗಳಲ್ಲಿ ಎ.ಸಿ. ಫಸ್ಟ್ ಕ್ಲಾಸ್ |
| 2 | II | ವಂದೇ ಭಾರತ್, ಶತಾಬ್ದಿ ಎಕ್ಸ್‌ಪ್ರೆಸ್‌ನಲ್ಲಿ ಎ.ಸಿ.ಚೇರ್ ಕಾರ್ ಮತ್ತು ಇತರೆ ರೈಲುಗಳಲ್ಲಿ ಎ.ಸಿ. 2 ಟಯರ್ |
| 3 | III | ಶತಾಬ್ದಿ ಹಾಗೂ ರಾಜಧಾನಿ ಎಕ್ಸ್‌ಪ್ರೇಸ್‌ನಲ್ಲಿ ಎ.ಸಿ. ಚೇರ್ ಕಾರ್/ ಫಸ್ಟ್ ಕ್ಲಾಸ್ / ಎ.ಸಿ. 3 ಟಯರ್ |
| 4 | IV | ಶತಾಬ್ದಿ ಹಾಗೂ ರಾಜಧಾನಿ ಎಕ್ಸ್‌ಪ್ರೇಸ್‌ನಲ್ಲಿ ಎ.ಸಿ. ಚೇರ್ ಕಾರ್/ ಫಸ್ಟ್ ಕ್ಲಾಸ್ / ಎ.ಸಿ. 3 ಟಯರ್ |

**ಕೋಷ್ಟಕ–26 : ಹಾಲಿ ಇರುವ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಮುಖಾಂತರ ಪ್ರಯಾಣದ ಅರ್ಹತೆ.**

| ಕ್ರಮ ಸಂಖ್ಯೆ | ಪ್ರವರ್ಗ | ಅರ್ಹತೆ |
|---|---|---|
| 1 | IA & IB | ವೋಲ್ವೋ (ಐರಾವತ) – ಹವಾನಿಯಂತ್ರಿತ ಸೀಟರ್<br>ಕರೋನ (ಅಂಬಾರಿ) – ಹವಾನಿಯಂತ್ರಿತವಲ್ಲದ ಸೀಟರ್<br>ಹವಾನಿಯಂತ್ರಿತ ಸ್ಲೀಪರ್ ಮತ್ತು ಹವಾನಿಯಂತ್ರಿತವಲ್ಲದ ಸ್ಲೀಪರ್ |
| 2 | II | ಶೀತಲ್–ಹವಾನಿಯಂತ್ರಿತ ಸೀಟರ್<br>ಅಲ್ಟ್ರಾ ಡಿಲಕ್ಸ್ (ರಾಜಹಂಸ) – ಹವಾನಿಯಂತ್ರಿತವಲ್ಲದ ಸೀಟರ್ |
| 3 | III & IV | ಸಾಮಾನ್ಯ / ಎಕ್ಸ್‌ಪ್ರೇಸ್– ಹವಾನಿಯಂತ್ರಿತವಲ್ಲದ ಸೀಟರ್ |

**ಕೋಷ್ಟಕ–27 : ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಮುಖಾಂತರ ಪ್ರಯಾಣದ ಅರ್ಹತೆಯನ್ನು ಈ ಕೆಳಕಂಡಂತೆ ಪರಿಷ್ಕರಿಸಿ ಶಿಫಾರಸ್ಸು ಮಾಡುವುದು.**

| ಕ್ರಮ ಸಂಖ್ಯೆ | ಪ್ರವರ್ಗ | ಅರ್ಹತೆ |
|---|---|---|
| 1 | I<br>(I A& I B) | ವೋಲ್ವೋ (ಐರಾವತ) – ಹವಾನಿಯಂತ್ರಿತ ಸೀಟರ್<br>ಕರೋನ (ಅಂಬಾರಿ) – ಹವಾನಿಯಂತ್ರಿತವಲ್ಲದ ಸೀಟರ್<br>ಹವಾನಿಯಂತ್ರಿತ ಸ್ಲೀಪರ್ ಮತ್ತು ಹವಾನಿಯಂತ್ರಿತವಲ್ಲದ ಸ್ಲೀಪರ್ |
| 2 | II | ಕರೋನ (ಅಂಬಾರಿ) – ಹವಾನಿಯಂತ್ರಿತವಲ್ಲದ ಸೀಟರ್<br>ಹವಾನಿಯಂತ್ರಿತ ಸ್ಲೀಪರ್ ಮತ್ತು ಹವಾನಿಯಂತ್ರಿತವಲ್ಲದ ಸ್ಲೀಪರ್ |
| 3 | III & IV | ಶೀತಲ್–ಹವಾನಿಯಂತ್ರಿತ ಸೀಟರ್<br>ಅಲ್ಟ್ರಾ ಡಿಲಕ್ಸ್ (ರಾಜಹಂಸ) – ಹವಾನಿಯಂತ್ರಿತವಲ್ಲದ ಸೀಟರ್ |

**ವಿಮಾನದ ಮೂಲಕ ಪ್ರವಾಸದ ಪ್ರಯಾಣ:–**

ಸರ್ಕಾರಿ ನೌಕರನು ಮಾಸಿಕ ರೂ.52,650 ಮತ್ತು ಅದಕ್ಕೂ ಮೇಲ್ಪಟ್ಟು ವೇತನ ಆಧಾರದ ಮೇಲೆ ರಾಜ್ಯದ ಹೊರಗೆ ವಿಮಾನದ ಮೂಲಕ ಪ್ರವಾಸ ಮಾಡಲು ಅರ್ಹತೆ ಹೊಂದಿರುತ್ತಾನೆ.

ಸರ್ಕಾರಿ ನೌಕರನು ಮಾಸಿಕ ರೂ.48,900 ಮತ್ತು ಅದಕ್ಕೂ ಮೇಲ್ಪಟ್ಟು ವೇತನ ಆಧಾರದ ಮೇಲೆ ರಾಜ್ಯದ ಒಳಗೆ ವಿಮಾನದ ಮೂಲಕ ಪ್ರವಾಸ ಮಾಡಲು ಅರ್ಹತೆ ಹೊಂದಿರುತ್ತಾನೆ.

**ಪ್ರಸ್ತುತ ಸರ್ಕಾರಿ ನೌಕರರು ಪ್ರಯಾಣಿಸಲು ಇರುವ ವರ್ಗೀಕರಣವನ್ನು ಹೊಸ ವೇತನ ಶ್ರೇಣಿಗಳ ಪ್ರಕಾರ ಪ್ರಯಾಣ ಭತ್ಯೆಯನ್ನು ವರ್ಗೀಕರಣ ಮಾಡುವುದು. ಈಗಿರುವ ಪ್ರವರ್ಗ I(ಎ) ಮತ್ತು I (ಬಿ)ಯನ್ನು ಒಂದೇ I ಪ್ರವರ್ಗವಾಗಿ ಪರಿಗಣಿಸುವುದು.**

**ಪ್ರವಾಸದ ಅವಧಿಯಲ್ಲಿ ದಿನಭತ್ಯೆ:–**

ರಾಜ್ಯದ ಒಳಗೆ ಹಾಗೂ ಹೊರಗೆ ಪ್ರವಾಸದ ಸಮಯದಲ್ಲಿ ಪ್ರಯಾಣದ ಸಲುವಾಗಿ ತಂಗುವುದಕ್ಕಾಗಿ ಹಾಲಿ ಇರುವ ದಿನಭತ್ಯೆ ದರಗಳು ಈ ಕೆಳಕಂಡಂತೆ ಇರುತ್ತವೆ:–

**ಕೋಷ್ಟಕ–28 : ಹಾಲಿ ಇರುವ ದಿನಭತ್ಯೆ ದರಗಳು.**

| ಪ್ರವರ್ಗ | ರಾಜ್ಯದಲ್ಲಿ ತಂಗುವಿಕೆಗಳು (ರೂ.) | | | ರಾಜ್ಯದ ಹೊರಗಡೆ ತಂಗುವಿಕೆಗಳು (ರೂ.) | |
|---|---|---|---|---|---|
| | ಬೆಂಗಳೂರು | ಮಹಾನಗರ ಪಾಲಿಕೆಗಳಿರುವ ನಗರಗಳು | ಇತರ ಸ್ಥಳಗಳು | ದೆಹಲಿ , ಮುಂಬಯಿ, ಕಲ್ಕತ್ತ, ಚೆನ್ನೈ ಮತ್ತು ಹೈದರಬಾದ್ | ಇತರೆ ಸ್ಥಳಗಳು |
| IA & IB | 600 | 500 | 400 | 800 | 600 |
| II | 400 | 400 | 300 | 600 | 400 |
| III | 300 | 300 | 200 | 500 | 300 |
| IV | 300 | 300 | 200 | 500 | 300 |

**ಕೋಷ್ಟಕ–29 : ಈ ಕೆಳಕಂಡಂತೆ ದಿನಭತ್ಯೆ ದರಗಳನ್ನು ಪರಿಷ್ಕರಿಸಲು ಶಿಫಾರಸ್ಸು ಮಾಡುವುದು.**

| ಪ್ರವರ್ಗ | ರಾಜ್ಯದಲ್ಲಿ ತಂಗುವಿಕೆಗಳು (ರೂ.) | | | ರಾಜ್ಯದ ಹೊರಗಡೆ ತಂಗುವಿಕೆಗಳು (ರೂ.) | |
|---|---|---|---|---|---|
| | ಬೆಂಗಳೂರು | ಮಹಾನಗರ ಪಾಲಿಕೆಗಳಿರುವ ನಗರಗಳು | ಇತರ ಸ್ಥಳಗಳು | ದೆಹಲಿ , ಮುಂಬಯಿ, ಕಲ್ಕತ್ತ, ಚೆನ್ನೈ ಮತ್ತು ಹೈದರಬಾದ್ | ಇತರೆ ಸ್ಥಳಗಳು |
| IA & IB | 2000 | 900 | 600 | 3000 | 1500 |
| II | 900 | 800 | 500 | 1200 | 800 |
| III | 600 | 600 | 400 | 1000 | 600 |
| IV | 600 | 600 | 400 | 1000 | 600 |

**ವಿಶೇಷ ದಿನ ಭತ್ಯೆ ದರಗಳು:–**

ರಾಜ್ಯದ ಹೊರಗೆ ಪ್ರವಾಸ ಪ್ರಯಾಣ ಕೈಗೊಳ್ಳುವ ಸಮಯದಲ್ಲಿ ಹೋಟೆಲಿನಲ್ಲಿ ಅಥವಾ ಇತರೆ ಅಂಗೀಕೃತ ಸಾರ್ವಜನಿಕ ಸಂಸ್ಥೆಯಲ್ಲಿನ ತಂಗುವಿಕೆಗಾಗಿ ನೀಡುವ ದಿನಭತ್ಯೆ ವಿಶೇಷ ದರಗಳು, ಉಚಿತ ವಸತಿ/ಊಟವನ್ನು ಒದಗಿಸಿದಲ್ಲಿ ಈ ಕೆಳಕಂಡ ದರಗಳನ್ನು ಸರ್ಕಾರವು ಆದೇಶ ಸಂಖ್ಯೆ:– ಆಇ 1 ಸನಿತಿ 2019, ದಿನಾಂಕ:– 11–01–2019ರನ್ವಯ ಪರಿಷ್ಕರಿಸಿ ಆದೇಶ ಹೊರಡಿಸಿರುತ್ತದೆ.

**ಕೋಷ್ಟಕ–30 : ಹಾಲಿ ಪಡೆಯುತ್ತಿರುವ ವಿಶೇಷ ದಿನ ಭತ್ಯೆ ದರಗಳು.**

| ಪ್ರವರ್ಗ | ದೆಹಲಿ, ಮುಂಬಯಿ, ಕಲ್ಕತ್ತ, ಚೆನ್ನೈ ಮತ್ತು ಹೈದ್ರಾಬಾದ್‌ನಲ್ಲಿ ತಂಗುವಿಕೆ | ರಾಜ್ಯದ ಹೊರಗಿನ ಇತರ ಸ್ಥಳಗಳು |
|---|---|---|
| **I A & I B** | ರೂ. 3000–00 | ರೂ. 3000–00 |
| **II** | ರೂ. 3000–00 | ರೂ. 3000–00 |
| **III** | ರೂ. 2000–00 | ರೂ. 2000–00 |
| **IV** | ರೂ. 2000–00 | ರೂ. 2000–00 |

ಹೊರ ರಾಜ್ಯಗಳಲ್ಲಿ ಪ್ರಯಾಣ ಕೈಗೊಳ್ಳುವ ಸಮಯದಲ್ಲಿ ಹೋಟೆಲ್ ಅಥವಾ ಇತರೆ ಅಂಗೀಕೃತ ಸಾರ್ವಜನಿಕ ಸಂಸ್ಥೆಯಲ್ಲಿನ ತಂಗುವಿಕೆಗಾಗಿ ನೀಡುವ ದಿನಭತ್ಯೆಗಳು ತೀರಾ ಅತ್ಯಲ್ಪವಾಗಿದ್ದು, ಪ್ರಸ್ತುತ ವೆಚ್ಚಗಳು ದುಬಾರಿಯಾಗಿರುವ ಹಿನ್ನೆಲೆ ಹಾಗೂ ಕೆಲವೊಂದು ಸಂದರ್ಭಗಳಲ್ಲಿ ಜಿ.ಎಸ್.ಟಿ. ಪಾವತಿಸಬೇಕಾದ ಸಂದರ್ಭಗಳು ಎದುರಾಗುತ್ತಿದ್ದು, ಈ ದರಗಳ

ಪರಿಷ್ಕರಣೆ ಅವಶ್ಯಕತೆ ಇರುತ್ತದೆ. ಆದ್ದರಿಂದ ಸಂಘವು ಈ ಕೆಳಕಂಡ ದರಗಳನ್ನು ಶಿಫಾರಸ್ಸು ಮಾಡಲು ಆಯೋಗಕ್ಕೆ ಮನವಿ ಮಾಡುತ್ತದೆ.

**ಕೋಷ್ಟಕ–31 : ಪರಿಷ್ಕರಿಸಬೇಕಾದ ವಿಶೇಷ ದಿನ ಭತ್ಯೆ ದರಗಳು.**

| ಪ್ರವರ್ಗ | ದೆಹಲಿ, ಮುಂಬಯಿ, ಕಲ್ಕತ್ತ, ಚೆನ್ನೈ ಮತ್ತು ಹೈದ್ರಾಬಾದ್‌ನಲ್ಲಿ ತಂಗುವಿಕೆ | ರಾಜ್ಯದ ಹೊರಗಿನ ಇತರ ಸ್ಥಳಗಳು |
|---|---|---|
| **I A & I B** | ರೂ. 6000–00 | ರೂ. 6000–00 |
| **II** | ರೂ. 6000–00 | ರೂ. 6000–00 |
| **III** | ರೂ. 4000–00 | ರೂ. 4000–00 |
| **IV** | ರೂ. 4000–00 | ರೂ. 4000–00 |

**ವಸತಿ ಗೃಹಗಳ ಹಾಗೂ ಊಟ–ಉಪಹಾರಗಳ ಬೆಲೆಗಳಲ್ಲಿ ಗಣನೀಯ ಪ್ರಮಾಣದಲ್ಲಿ ಹೆಚ್ಚಳವಾಗಿರುವುದರಿಂದ ಸರ್ಕಾರಿ ನೌಕರರ ತಂಗುವಿಕೆಯ ದಿನಭತ್ಯೆ ದರವನ್ನು ಎರಡರಷ್ಟು ಹೆಚ್ಚಿಸಲು ಶಿಫಾರಸ್ಸು ಮಾಡುವುದು.**

–*–

**24. ಈ ಕೆಳಕಂಡ ಸೌಲಭ್ಯಗಳಲ್ಲಿ ಅಗತ್ಯವಿರುವ ಯಾವುದಾದರೂ ಬದಲಾವಣೆಗಳ ಬಗ್ಗೆ ಸಲಹೆ ಮತ್ತು ಸೂಚನೆಗಳನ್ನು ತಿಳಿಸಿ.**

(a) **ರಜೆ ಸೌಲಭ್ಯಗಳು ಮತ್ತು ಸೇವೆಯಲ್ಲಿ ಇರುವಾಗ ಮತ್ತು ನಿವೃತ್ತಿ ಸಂದರ್ಭದಲ್ಲಿ ಗಳಿಕೆ ರಜಾ ನಗದೀಕರಣ ಸೌಲಭ್ಯ:**

- ಪ್ರಸ್ತುತ ಜಾರಿಯಲ್ಲಿರುವ ವಾರ್ಷಿಕ ಒಂದು ವರ್ಷದ ಬ್ಲಾಕ್ ಅವಧಿಗೆ 15 ದಿನಗಳ ಗಳಿಕೆ ರಜೆ ನಗದೀಕರಣ ಸೌಲಭ್ಯವನ್ನು ಮುಂದುವರೆಸುವುದು.
- ರಜೆ ಸೌಲಭ್ಯವನ್ನು ಪಡೆಯುವ ಉದ್ದೇಶಕ್ಕಾಗಿ ಮಾತ್ರ ಗಳಿಕೆ ರಜೆಯ ಮಿತಿಯನ್ನು ತೆಗೆದು ಹಾಕುವುದು.
- ನಿವೃತ್ತಿ ನಂತರ 300 ರಜಾ ದಿನಗಳ ಗರಿಷ್ಠ ಮಿತಿಯ ನಗದೀಕರಣ ಸೌಲಭ್ಯವನ್ನು 330ಕ್ಕೆ ಹೆಚ್ಚಿಸುವುದು.

(b). **ಬೈಸಿಕಲ್, ಮೋಟಾರು ವಾಹನ, ಗೃಹ ನಿರ್ಮಾಣ, ಗೃಹ ರಿಪೇರಿ ಮುಂಗಡ ಇತ್ಯಾದಿ;**

ಪ್ರಸ್ತುತ ದರದಲ್ಲಿರುವ ಈ ಕೆಳಗಿನ ಮುಂಗಡಗಳನ್ನು ಹೆಚ್ಚಿಸುವಂತೆ ಶಿಫಾರಸ್ಸು ಮಾಡುವುದು.

- ಬೈಸಿಕಲ್ ಖರೀದಿಸಲು ಪ್ರಸ್ತುತ ಮುಂಗಡ ಮೊತ್ತವನ್ನು ರೂ.15,000 ದಿಂದ 25,000ಕ್ಕೆ ಹೆಚ್ಚಿಸುವುದು.
- ಮೋಟಾರು ಸೈಕಲ್/ಸ್ಕೂಟರ್ ಖರೀದಿಸಲು ಪ್ರಸ್ತುತ ಮುಂಗಡ ಮೊತ್ತವನ್ನು ರೂ. 50,000/–ಗಳಿಂದ ರೂ. 1,50,000ಕ್ಕೆ ಹೆಚ್ಚಿಸುವುದು.
- ಪ್ರಸ್ತುತ ಮಾರುಕಟ್ಟೆಯಲ್ಲಿ ವಿದ್ಯುತ್ ಚಾಲಿತ ಮೋಟಾರು ಕಾರು / ದ್ವಿಚಕ್ರ ವಾಹನಗಳನ್ನು ಪರಿಚಯಿಸಲಾಗಿದ್ದು, ಇವುಗಳನ್ನು ಹೆಚ್ಚಾಗಿ ಬಳಸುವಂತೆ ಸರ್ಕಾರಗಳು ಪ್ರೋತ್ಸಾಹಿಸುತ್ತಿದ್ದು, ಇಂತಹ ವಾಹನಗಳ ದರಗಳು ಸಹಜವಾಗಿಯೇ ದುಬಾರಿಯಾಗಿರುವುದರಿಂದ ಮೋಟಾರು ಕಾರು ಖರೀದಿ ಮುಂಗಡವನ್ನು ರೂ. 3 ಲಕ್ಷದಿಂದ ರೂ. 10 ಲಕ್ಷಗಳಿಗೆ ಹೆಚ್ಚಿಸುವುದು.
- ಮನೆ ನಿರ್ಮಾಣ ಮಾಡಲು ಮತ್ತು ಮನೆ ಖರೀದಿಸಲು ಮುಂಗಡವನ್ನು ರೂ. 30 ಲಕ್ಷದಿಂದ 50 ಲಕ್ಷಗಳಿಗೆ ಹೆಚ್ಚಿಸುವುದು.
- ಕಂಪ್ಯೂಟರ್ ಖರೀದಿಸಲು ಮುಂಗಡವನ್ನು ರೂ.50,000 ದಿಂದ 1,00,000ಕ್ಕೆ ಹೆಚ್ಚಿಸುವುದು.
- ರೂ. 25,000–00 ಗಳ ಹಬ್ಬದ ಮುಂಗಡವನ್ನು ಯಾವುದೇ ಷರತ್ತುಗಳನ್ನು ವಿಧಿಸದೆ ಮಂಜೂರು ಮಾಡುವುದು.

**(c). ಅಂಧ ಮತ್ತು ಅಂಗವಿಕಲ ನೌಕರರಿಗೆ ಈಗ ನೀಡಲಾಗುತ್ತಿರುವ ಮಾಹೆಯಾನ ಮೂಲ ವೇತನದ ಶೇಕಡ 6ರಂತೆ ವಾಹನ ಭತ್ಯೆ.**

ಅಂಧ ಮತ್ತು ಅಂಗವಿಕಲ ನೌಕರರು ವಾಹನ ಸೌಕರ್ಯಕ್ಕಾಗಿ ಬಹುತೇಕವಾಗಿ ಆಟೋರಿಕ್ಷಾ ಅಥವಾ ಟ್ಯಾಕ್ಸಿಗಳನ್ನು ಅವಲಂಬಿಸಿರುತ್ತಾರೆ. ಆದುದರಿಂದ; ಅಂಧ ಮತ್ತು ಅಂಗವಿಕಲ ನೌಕರರಿಗೆ ಹಾಲಿ ನೀಡುತ್ತಿರುವ ವಾಹನ ಭತ್ಯೆಯನ್ನು ಮೂಲ ವೇತನದ ಶೇ. 6% ರಿಂದ ಶೇ. 10% ಕ್ಕೆ ಹೆಚ್ಚಳ ಮಾಡಲು ಶಿಫಾರಸ್ಸು ಮಾಡುವುದು.

**a) ಹಾಲಿ ಇರುವ 300 ದಿನಗಳ ಗಳಿಕೆ ರಜೆಗಳ ನಗಧೀಕರಣ ಸೌಲಭ್ಯದ ಮಿತಿಯನ್ನು 330ಕ್ಕೆ ಹೆಚ್ಚಿಸಿ, ರಜೆ ಪಡೆಯುವ ಉದ್ದೇಶಕ್ಕಾಗಿ ಮಾತ್ರ ಗಳಿಕೆ ರಜೆಗಳಿಗೆ ಇರುವ ಮಿತಿಯನ್ನು ತೆಗೆದುಹಾಕುವುದು.**

**b) ಮಾರುಕಟ್ಟೆಯ ವಾಸ್ತವ ದರಕ್ಕೆ ಅನುಗುಣವಾಗಿ ಎಲ್ಲಾ ವಾಹನಗಳ ಖರೀದಿ/ ರಿಪೇರಿ ಮುಂಗಡದ ಮೊತ್ತವನ್ನು ಮೇಲ್ಕಂಡಂತೆ ಹೆಚ್ಚಿಸುವುದು, ಮರುಪಾವತಿ ಕಂತುಗಳನ್ನು ಹೆಚ್ಚಿಸುವುದು, ಅನಗತ್ಯ ಷರತ್ತುಗಳನ್ನು ಕೈಬಿಟ್ಟು ಸರಳೀಕರಿಸುವುದು. ಈ ಮುಂಗಡ ಮರುಪಾವತಿಗೆ ವಿಧಿಸಿರುವ ಕನಿಷ್ಠ ವೇತನದ ಮಿತಿಯನ್ನು(Home take Salary) ಶೇ. 60% ರಿಂದ ಶೇ. 40%ಕ್ಕೆ ನಿಗದಿಗೊಳಿಸುವುದು.**

**c) ಅಂಧ ಮತ್ತು ಅಂಗವಿಕಲ ನೌಕರರಿಗೆ ಹಾಲಿ ನೀಡುತ್ತಿರುವ ವಾಹನ ಭತ್ಯೆಯನ್ನು ಮೂಲ ವೇತನದ ಶೇ. 6% ರಿಂದ ಶೇ. 10% ಕ್ಕೆ ಹೆಚ್ಚಳ ಮಾಡಲು ಶಿಫಾರಸ್ಸು ಮಾಡುವುದು.**

–*–

**25. ಸರ್ಕಾರಿ ನೌಕರರಿಗೆ ಅನ್ವಯಿಸುವ ಪ್ರಸಕ್ತ ಸಮೂಹ ವಿಮಾ ಯೋಜನೆಯನ್ನು ಇನ್ನಷ್ಟು ಸುಧಾರಣೆ ಮಾಡಲು ನಿಮ್ಮ ಸಲಹೆಗಳೇನಾದರೂ ಇದೆಯೇ ?**

ಕೇಂದ್ರ 7ನೇ ವೇತನ ಆಯೋಗವು ಕೇಂದ್ರ ಸರ್ಕಾರಿ ನೌಕರರಿಗೆ ಸಮೂಹ ವಿಮಾ ಯೋಜನೆಯ ಈ ಕೆಳಗಿನ ದರಗಳನ್ನು ಶಿಫಾರಸು ಮಾಡಿದೆ.

**ಕೋಷ್ಟಕ–32 : ಹಾಲಿ ಇರುವ ಸಮೂಹ ವಿಮಾ ಯೋಜನೆಯ ಮೊತ್ತ.**

| ನೌಕರನ ಹಂತ | ಮಾಹೆಯಾನ ಕಡಿತ ರೂ. | ವಿಮಾ ಮೊತ್ತ ರೂ. |
|---|---|---|
| 10 ಮತ್ತು ಅದಕ್ಕಿಂತ ಮೇಲ್ಪಟ್ಟು | 5000 | 50 ಲಕ್ಷಗಳು |
| 6 ರಿಂದ 9 | 2500 | 25 ಲಕ್ಷಗಳು |
| 1 ರಿಂದ 5 | 1500 | 15 ಲಕ್ಷಗಳು |

ಅದರಂತೆ, ಉಳಿತಾಯ ನಿಧಿ ಮತ್ತು ವಿಮಾ ನಿಧಿಗೆ ಪ್ರಸ್ತುತವಾಗಿರುವ ಅನುಪಾತವನ್ನು ಮಾರ್ಪಾಡು ಮಾಡುವಂತೆ, ಬಾಕಿ ಉಳಿದಿರುವ ವಿಮರ್ಶೆಯಂತೆ ಮಧ್ಯಂತರ ಕ್ರಮವನ್ನು ಕೈಗೊಳ್ಳುವಂತೆ ಆಯೋಗವು ಶಿಫಾರಸ್ಸು ಮಾಡುವುದು.

**ಕೋಷ್ಟಕ–33 : ಸಾಮೂಹಿಕ ವಿಮಾ ಯೋಜನಾ ಮೊತ್ತದ ವಿವರ.**

| ನೌಕರರ ವೃಂದ | ಹಾಲಿ ಇರುವ ವಿಮಾ ಮೊತ್ತ | | ಪರಿಷ್ಕರಿಸಬೇಕಾಗಿರುವ ವಿಮಾ ಮೊತ್ತ | |
|---|---|---|---|---|
| | ಮಾಹೆಯಾನ ಕಡಿತ ರೂ. | ವಿಮಾ ಮೊತ್ತ ರೂ. | ಮಾಹೆಯಾನ ಕಡಿತ ರೂ. | ವಿಮಾ ಮೊತ್ತ ರೂ. |
| ಎ | 480 | 4.80 ಲಕ್ಷಗಳು | 4800 | 48 ಲಕ್ಷಗಳು |
| ಬಿ | 360 | 3.60 ಲಕ್ಷಗಳು | 3600 | 36 ಲಕ್ಷಗಳು |
| ಸಿ | 240 | 2.40 ಲಕ್ಷಗಳು | 2400 | 24 ಲಕ್ಷಗಳು |
| ಡಿ | 120 | 1.20 ಲಕ್ಷಗಳು | 1200 | 12 ಲಕ್ಷಗಳು |

- **ಕೇಂದ್ರ ಏಳನೇ ವೇತನ ಆಯೋಗದ ಶಿಫಾರಸ್ಸಿನಂತೆ ಮೇಲ್ಕಂಡ ದರದಲ್ಲಿ ಸಾಮೂಹಿಕ ವಿಮಾ ಯೋಜನೆಯ ದರವನ್ನು ಪರಿಷ್ಕರಣೆ ಮಾಡುವುದು.**
- **ಈ ಯೋಜನೆಯ ಉಳಿತಾಯ ನಿಧಿ ಮತ್ತು ವಿಮಾ ನಿಧಿ ಸದ್ಯದ 70:30ರ ಅನುಪಾತವನ್ನು 75:25 ಕ್ಕೆ ಮಾರ್ಪಡಿಸುವುದು.**
- **ಉಳಿತಾಯ ನಿಧಿಯಿಂದ ಸಂಗ್ರಹಿಸಲಾಗುತ್ತಿರುವ ಮೊತ್ತದಲ್ಲಿ ಯಾವುದೇ ಭಾಗವನ್ನು ನಿವೃತ್ತಿಗಿಂತ ಮುಂಚಿತವಾಗಿ ಹಿಂಪಡೆಯಲು ಅವಕಾಶ ಇಲ್ಲದಿರುವುದರಿಂದ ಹಾಲಿ ಉಳಿತಾಯ ನಿಧಿ ಮೇಲಿನ ಬಡ್ಡಿದರಕ್ಕಿಂತ ಶೇ.2% ರಷ್ಟು ಹೆಚ್ಚಿಸುವುದು.**

–*–

**26. ಸ್ವಇಚ್ಛಾ ನಿವೃತ್ತಿಗೆ ಸಂಬಂಧಪಟ್ಟ ನಿಯಮಗಳ ಬಗ್ಗೆ ನಿಮ್ಮ ಅಭಿಪ್ರಾಯವೇನು ?**

ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 280ರ ಉಪ–ನಿಯಮ (2) ರಂತೆ ರಾಜ್ಯ ಸರ್ಕಾರಿ ನೌಕರರು ಸ್ವಇಚ್ಚಾ ನಿವೃತ್ತಿ ಪಡೆಯಲು ಅವಕಾಶವಿರುತ್ತದೆ.

- ಅಧಿಕಾರಿ/ನೌಕರರು 15 ವರ್ಷಗಳ ಸೇವಾವಧಿ ಕಡಿಮೆ ಇಲ್ಲದಂತೆ ಅಥವಾ 50 ವರ್ಷ ವಯೋಮಾನ ಪೂರೈಸಿದ ನಂತರ ಸ್ವಇಚ್ಛಾ ನಿವೃತ್ತಿಯನ್ನು ಪಡೆಯುವ ನಿಯಮಗಳಿಗೆ ತಿದ್ದುಪಡಿ ಮಾಡಿ ಈ ಅವಧಿಯನ್ನು 12 ವರ್ಷಗಳ ಸೇವಾವಧಿ ಅಥವಾ 45 ವರ್ಷಗಳ ವಯೋಮಾನ ಪೂರೈಸಿದ ನಂತರ ಸ್ವಇಚ್ಛಾ ನಿವೃತ್ತಿ ಹೊಂದುವ ಅವಕಾಶಕ್ಕೆ ಶಿಫಾರಸ್ಸು ಮಾಡುವುದು.

**ಸ್ವಇಚ್ಛಾ ನಿವೃತ್ತಿಗೆ 12 ವರ್ಷಗಳ ಸೇವಾವಧಿ ಅಥವಾ 45 ವರ್ಷಗಳ ವಯೋಮಾನಕ್ಕೆ ಶಿಫಾರಸ್ಸು ಮಾಡುವುದು.**

–*–

**27. ಪಿಂಚಣಿ ಪ್ರಯೋಜನಗಳಿಗೆ ಸಂಬಂಧಿಸಿದಂತೆ, ದಯವಿಟ್ಟು ಕೆಳಕಂಡ ಅಂಶಗಳನ್ನು ಓದಿಕೊಂಡು ತಮ್ಮ ಸೂಕ್ತ ಪ್ರತಿಕ್ರಿಯೆಯನ್ನು ಒದಗಿಸುವುದು.**

**(i) ಪ್ರಸ್ತುತ, 30 ವರ್ಷಗಳ ಅರ್ಹತಾ ಸೇವೆಯನ್ನು ಪೂರ್ಣಗೊಳಿಸಿದ ಸರ್ಕಾರಿ ನೌಕರರಿಗೆ ಮಾತ್ರ ಪೂರ್ಣ ನಿವೃತ್ತಿ ವೇತನ ಸಂದಾಯವಾಗುತ್ತಿದೆ. ನಿವೃತ್ತಿಯ ಉಪದಾನವನ್ನು ಲೆಕ್ಕ ಹಾಕುವಾಗ ಮೂಲ ವೇತನವನ್ನಷ್ಟೇ ಲೆಕ್ಕಕ್ಕೆ ತೆಗೆದುಕೊಳ್ಳಲಾಗುತ್ತದೆ. ಇದರ ಮಾರ್ಪಾಡಿಗೆ ಏನಾದರೂ ಸಲಹೆ ನೀಡುವಿರಾ? ಈ ಮಾರ್ಪಾಡಿಗೆ ಕಾರಣಗಳನ್ನು ನೀಡುವುದು.**

"ಪೂರ್ಣ ನಿವೃತ್ತಿ ವೇತನವನ್ನು ಪಡೆಯಲು ಪ್ರಸ್ತುತ 30 ವರ್ಷಗಳ ಅರ್ಹತಾ ಅವಧಿಯನ್ನು ನಿಗದಿಮಾಡಿದ್ದು, ಈ ಅವಧಿಯನ್ನು 25 ವರ್ಷಗಳಿಗೆ ನಿಗಧಿಪಡಿಸಲು ಹಾಗೂ ಪಿಂಚಣಿ ನೀಡಲು ಹೆಚ್ಚಿನ ಸರಳೀಕೃತ ಸೂತ್ರವನ್ನು ಶಿಫಾರಸು ಮಾಡುವುದು ಅವಶ್ಯಕವೆಂದು ಸಂಘವು ಅಭಿಪ್ರಾಯಪಟ್ಟಿದ್ದು ಅದು ನೌಕರರಿಗೆ ಪ್ರಯೋಜನವಾಗುವುದಲ್ಲದೆ, ಕೇಂದ್ರ ವೇತನ ಆಯೋಗ ಶಿಫಾರಸು ಮಾಡಿರುವ ಸೂತ್ರಕ್ಕೆ ಹೋಲಿಕೆಯಾಗಲಿದೆ."

**ಪೂರ್ಣ ಪ್ರಮಾಣದ ಪಿಂಚಣಿಗಾಗಿ ನೌಕರನು ಸಲ್ಲಿಸಿರುವ 25 ವರ್ಷಗಳ ಅರ್ಹತಾದಾಯಕ ಸೇವಾಧಿಯನ್ನು ಪರಿಗಣಿಸುವುದು ಹಾಗೂ  ನಿವೃತ್ತಿ ಸಮಯದ ಕಳೆದ 10 ತಿಂಗಳಲ್ಲಿ ಪಡೆಯುತ್ತಿದ್ದ ಸರಾಸರಿ ಸಂಬಳ ಅಥವಾ ಅಂತಿಮವಾಗಿ ಪಡೆದ ವೇತನದ ಶೇ. 50 ಇದರಲ್ಲಿ ಯಾವುದು ಪ್ರಯೋಜನಕಾರಿಯೋ ಅದನ್ನು ಪಿಂಚಣಿ ಎಂದು ಪರಿಗಣಿಸುವುದು.**

**(ii) ಪ್ರಸ್ತುತ ಕನಿಷ್ಠ ಪಿಂಚಣಿ ಮತ್ತು ಕುಟುಂಬ ವಿಶ್ರಾಂತಿ ವೇತನವು ಮಾಹೆಯಾನ ರೂ. 8,500/– ಆಗಿದ್ದು, ತುಟ್ಟಿ ಭತ್ಯೆಯನ್ನು ಸಹ ಸೇರಿಸಲಾಗುತ್ತದೆ. ನಿವೃತ್ತಿ ವೇತನದ ಗರಿಷ್ಠ ಮೊತ್ತವು ರೂ. 75,300/– ಆಗಿರುತ್ತದೆ. ಈ ಮೊತ್ತವು ತಕ್ಕುದಾಗಿದೆಯೆಂದು ತಾವು ಭಾವಿಸುವಿರಾ? ಇಲ್ಲವಾದಲ್ಲಿ ಕನಿಷ್ಠ ಮತ್ತು ಗರಿಷ್ಠ ಕುಟುಂಬ ಪಿಂಚಣಿಯು ಎಷ್ಟಿರಬೇಕು?**

ವಿವಿಧ ಅಂಶಗಳನ್ನು ಹಾಗೂ ಚಾಲ್ತಿ ಅಂಕಿ–ಅಂಶಗಳ ಪ್ರಕಾರ ಕನಿಷ್ಠ ಹಾಗೂ ಗರಿಷ್ಠ ಮೂಲವೇತನಕ್ಕೆ ಕನಿಷ್ಠ ಮತ್ತು ಗರಿಷ್ಠ ಪಿಂಚಣಿ ಮತ್ತು ಕುಟುಂಬ ಪಿಂಚಣಿ ಉದ್ದೇಶಕ್ಕೆ ಹಾಲಿ ಇರುವ ಶೇ. 31% ರಷ್ಟು ತುಟ್ಟಿಭತ್ಯೆಯನ್ನು ಸಂಪೂರ್ಣವಾಗಿ ವಿಲೀನಗೊಳಿಸಿ, ನಂತರ ಶೇ. 40% ರಷ್ಟು ಫಿಟ್‌ಮೆಂಟ್ ಬೆನಿಫಿಟ್ ಕಲ್ಪಿಸಿ ಪರಿಷ್ಕೃತ ಮೂಲ ವೇತನದ ಶೇ. 50% ಕನಿಷ್ಠ ಪಿಂಚಣಿ / ಕುಟುಂಬ ಪಿಂಚಣಿ ಮೊತ್ತವನ್ನು ರೂ. 16,500/– + ತುಟ್ಟಿ ಭತ್ಯೆ ಹಾಗೂ ಪರಿಷ್ಕೃತ ಗರಿಷ್ಠ ವೇತನದ ಶೇ. 50% ರಷ್ಟು ಗರಿಷ್ಠ ಮೊತ್ತಕ್ಕೆ ರೂ. 1,50,000/– + ತುಟ್ಟಿ ಭತ್ಯೆ ನಿರ್ಧರಿಸುವುದು.

**ಕನಿಷ್ಠ ಕುಟುಂಬ ಪಿಂಚಣಿಯನ್ನು ಕನಿಷ್ಠ ರೂ. 16,500 + ತುಟ್ಟಿಭತ್ಯೆ ಮತ್ತು ಗರಿಷ್ಠ ಕುಟುಂಬ ಪಿಂಚಣಿಯನ್ನು ರೂ. 1,50,000+ ತುಟ್ಟಿಭತ್ಯೆ ಎಂಬುದಾಗಿ ಶಿಫಾರಸ್ಸು ಮಾಡುವುದು ಮುಂದುವರೆದು, ಅವಲಂಬಿತ ಪೋಷಕರೂ ಸಹ ಕುಟುಂಬ ಪಿಂಚಣಿಗೆ ಅರ್ಹರೆಂದು ಶಿಫಾರಸ್ಸು ಮಾಡುವುದು.**

**(iii) ನಿವೃತ್ತಿದಾರರಿಗೆ ನೀಡುವುದು ಯುಕ್ತವೆಂದು ಭಾವಿಸುವ ಇತರೆ ಸೌಲಭ್ಯಗಳಾವುವು?**

**ಮರಣ–ನಿವೃತ್ತಿ ಉಪದಾನ :**

ಪ್ರಸ್ತುತ ಮರಣ–ನಿವೃತ್ತಿ ಉಪದಾನವನ್ನು ಮೂಲವೇತನದ ಆಧಾರದ ಮೇಲೆ ಲೆಕ್ಕ ಹಾಕಲಾಗುತ್ತಿದೆ. ಆದರೆ ಕೇಂದ್ರ ಸರ್ಕಾರದ ಮರಣ–ನಿವೃತ್ತಿ ಉಪದಾನವನ್ನು ಲೆಕ್ಕ ಹಾಕಲು ನಿವೃತ್ತಿ ಹೊಂದುವ ದಿನಾಂಕದಂದು ಇರುವ ವೇತನ ಮತ್ತು ತುಟ್ಟಿಭತ್ಯೆ ಇವೆರಡನ್ನು ಪರಿಗಣಿಸಿ ಮಿತಿಯನ್ನು ಕೇಂದ್ರದ 7ನೇ ವೇತನ ಆಯೋಗದ ಶಿಫಾರಸ್ಸಿನನ್ವಯ ರೂ. 20 ಲಕ್ಷಕ್ಕೆ ನಿಗದಿಪಡಿಸಿದ್ದು, ಈ ಮೊತ್ತವನ್ನು ಪ್ರಸ್ತುತ ಪರಿಸ್ಥಿತಿಗನುಗುಣವಾಗಿ ರೂ. 25.00 ಲಕ್ಷಗಳಿಗೆ ಹೆಚ್ಚಳ ಮಾಡುವುದು ಅವಶ್ಯವಿದೆ.

ತುಟ್ಟಿಭತ್ಯೆಯು ಹಣದುಬ್ಬರಿಂದ ನೌಕರನು ಅವನ ಮೂಲವೇತನದ ಮೇಲೆ ಕಳೆದುಕೊಂಡಿರುವ ನಿಜವಾದ ಪ್ರಮಾಣವನ್ನು ತೋರಿಸುತ್ತದೆ. ಗ್ರಾಹಕರ ಬೆಲೆ ಸೂಚ್ಯಂಕಗಳಲ್ಲಿ ಯಾವುದೆ ಏರಿಕೆ ಇಲ್ಲದಿದ್ದರೆ ತುಟ್ಟಿಭತ್ಯೆಯನ್ನು ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ವೇತನ ಪರಿಷ್ಕರಣೆ ಆದಾಗ ಮತ್ತು ತುಟ್ಟಿಭತ್ಯೆಯನ್ನು ಮೂಲವೇತನದೊಂದಿಗೆ ವಿಲೀನ ಮಾಡಿ ವೇತನವನ್ನು ನಿಗದಿಪಡಿಸಲಾಗುವುದು ಅಥವಾ ನಿರ್ದಿಷ್ಟ ಸೂಚ್ಯಂಕಕ್ಕೆ ತುಟ್ಟಿವೇತನವಾಗುತ್ತದೆ, ಸೇವೆಯಲ್ಲಿರುವ ಎಲ್ಲಾ ನೌಕರರಿಗೆ ಜಾರಿಗೆ ಬಂದ ದಿನಾಂಕದಿಂದ ಪೂರ್ಣವಾಗಿ ಲಾಭವಾಗುತ್ತದೆ.

**ಕೋಷ್ಟಕ–34 : ಸರ್ಕಾರಿ ನೌಕರನು ಸೇವೆಯಲ್ಲಿದ್ದಾಗ ತೀರಿಕೊಂಡರೆ ದೊರಕುವ ಮರಣ ಉಪದಾನವು ಈ ಕೆಳಗಿನ ದರಗಳಂತಿವೆ.**

| ಕ್ರ.ಸಂ. | ಅರ್ಹತಾ ಸೇವಾ ಅವಧಿ | ಉಪದಾನದ ದರ |
|---|---|---|
| 1 | 1 ವರ್ಷಕ್ಕಿಂತ ಕಡಿಮೆ | ಒಟ್ಟು ಉಪಲಬ್ದಿಗಳ ಎರಡರಷ್ಟು |
| 2 | 1 ವರ್ಷ ಅಥವಾ ಅದಕ್ಕಿಂತ ಹೆಚ್ಚು ಆದರೆ 5 ವರ್ಷಗಳಿಗಿಂತ ಕಡಿಮೆ | ಒಟ್ಟು ಉಪಲಬ್ದಿಗಳ ಆರರಷ್ಟು |
| 3 | 5 ವರ್ಷ ಅಥವಾ ಅದಕ್ಕಿಂತ ಹೆಚ್ಚು ಆದರೆ 20 ವರ್ಷಗಳಿಗಿಂತ ಕಡಿಮೆ | ಒಟ್ಟು ಉಪಲಬ್ದಿಗಳ ಹನ್ನೆರಡರಷ್ಟು |
| 4 | 20 ವರ್ಷಗಳು ಅಥವಾ ಹೆಚ್ಚು | ಕನಿಷ್ಠ ಒಟ್ಟು ಉಪಲಬ್ದಿಯ 30 ವರ್ಷಕ್ಕೆ ಒಳಪಟ್ಟು ಅರ್ಹತಾಸೇವೆಯ ಪ್ರತಿ ಪೂರ್ಣಗೊಂಡ 6 ತಿಂಗಳ ಅವಧಿಗಾಗಿ ಉಪಲಬ್ದಿಯ ಅರ್ಧ ಪರಂತು ಮರಣದ ಉಪದಾನದ ಯಾವ ಸಂದರ್ಭದಲ್ಲೂ ಮೀರತಕ್ಕದ್ದಲ್ಲ |

- **ಪೂರ್ಣ ಪಿಂಚಣಿಯ ಅರ್ಹತದಾಯಕ ಸೇವೆಯನ್ನು 30 ರಿಂದ 25 ವರ್ಷಗಳಿಗೆ ಇಳಿಸುವುದು.**
- **ಹಾಲಿ ಇರುವ ಉಪದಾನದ ಮಿತಿಯನ್ನು ಪ್ರಸ್ತುತ ರೂ.20 ಲಕ್ಷಗಳಿಂದ ರೂ.25 ಲಕ್ಷಗಳಿಗೆ ಶಿಫಾರಸ್ಸು ಮಾಡುವುದು.**

**(iv) ನಿವೃತ್ತಿ ವೇತನದ ಗರಿಷ್ಠ 1/3ನೇ ಭಾಗವನ್ನು ಹಾಲಿ ಪರಿವರ್ತನೆಗೊಳಿಸಬಹುದಾಗಿದ್ದು (ಪಿಂಚಣಿ ಪರಿವರ್ತನೆ), 15 ವರ್ಷಗಳ ನಂತರ ಇದರ ಪುನಃ ಸ್ಥಾಪನೆಯ ವ್ಯವಸ್ಥೆ ಇರುತ್ತದೆ. ಇದರ ಮಾರ್ಪಾಡಿಗೆ ಸಲಹೆ ಏನಾದರೂ ಇದೆಯೇ ?**

ನಿವೃತ್ತಿ ವೇತನದ ಗರಿಷ್ಠ 1/3 ಭಾಗವನ್ನು ಪರಿವರ್ತಿಸಿ ಒಟ್ಟಾರೆ ಮೊತ್ತವನ್ನು ಪಡೆಯಲು ಅರ್ಹನಾಗಿರುವ ಪಿಂಚಣಿದಾರಿಗೆ ಸಂದಾಯ ಮಾಡುವ ಮೊತ್ತವನ್ನು 12 ವರ್ಷಗಳಿಗೆ ಲೆಕ್ಕಹಾಕಿ ನೀಡುವ ಮೊತ್ತವನ್ನು 15 ವರ್ಷಗಳ ಕಾಲ ವಾಪಸ್ಸು ಪಡೆಯುವುದರಿಂದ ಪಿಂಚಣಿದಾರರು ಪಾವತಿಸುವ ಮೊತ್ತಕ್ಕೆ ಅವರೇ ಮೂರು ವರ್ಷಗಳ ಕಾಲ ಬಡ್ಡಿಯನ್ನು ತೆರಬೇಕಾದ ಪರಿಸ್ಥಿತಿ ಇದ್ದು, ಈ ವ್ಯವಸ್ಥೆಯನ್ನು ಪರಿಷ್ಕರಿಸುವುದು ಅವಶ್ಯವಿರುತ್ತದೆ.

**ಪ್ರಸ್ತುತ ಇರುವ ನಿವೃತ್ತಿ ವೇತನದ ಗರಿಷ್ಠ 1/3 ಭಾಗವನ್ನು ಪರಿವರ್ತಿಸಿ 12 ವರ್ಷಕ್ಕೆ ಲೆಕ್ಕ ಹಾಕಿ ಈ ಮೊತ್ತವನ್ನು 15 ವರ್ಷಗಳ ಅವಧಿಯಲ್ಲಿ ಹಿಂಪಡೆಯುವ ವ್ಯವಸ್ಥೆಯನ್ನು ಪರಿಷ್ಕರಿಸಿ, 12 ವರ್ಷಕ್ಕೆ ಲೆಕ್ಕ ಹಾಕಿ ಪಿಂಚಣಿದಾರರಿಗೆ ನೀಡುವ ಮೊತ್ತವನ್ನಷ್ಟೇ 12 ವರ್ಷದಲ್ಲೇ ಬಡ್ಡಿರಹಿತವಾಗಿ ಹಿಂಪಡೆಯುವ ವ್ಯವಸ್ಥೆಯನ್ನು ಜಾರಿಗೆ ತರಲು ಸರ್ಕಾರಕ್ಕೆ ಶಿಫಾರಸ್ಸು ಮಾಡುವುದು.**

**–*–**

**28. ಈಗ ಚಾಲ್ತಿಯಲ್ಲಿರುವ ನಿವೃತ್ತಿ ವೇತನದ ನಿಯಮ ಮತ್ತು ನಿಬಂಧನೆಗಳಿಂದ ಪಿಂಚಣಿದಾರರಿಗೆ ಅದರಲ್ಲೂ ತೀರಾ ವಯಸ್ಸಾದ ಪಿಂಚಣಿದಾರರಿಗೆ ನಿವೃತ್ತಿ ವೇತನವನ್ನು ಸಕಾಲದಲ್ಲಿ ಪಡೆದುಕೊಳ್ಳುವಲ್ಲಿ ಏನಾದರೂ ತೊಂದರೆಗಳಿವೆಯೇ? ಹಾಗಿದ್ದಲ್ಲಿ, ಇವುಗಳನ್ನು ಸರಳೀಕರಣಗೊಳಿಸಲು ನೀವು ಸಲಹೆ ನೀಡಲು ಬಯಸುವಿರಾ?**

ಮಾನವ ಸಂಪನ್ಮೂಲ ನಿರ್ವಹಣಾ ವ್ಯವಸ್ಥೆಯಲ್ಲಿ, ಸೇವೆಗೆ ಸೇರುವ, ವರ್ಗಾವಣೆ ಹೀಗೆ ಸೇವೆಗೆ ಸಂಬಂಧಿಸಿದ ಎಲ್ಲಾ ಘಟನೆಗಳ ಬಗ್ಗೆ ಸಂಬಂಧಿತ ದಾಖಲೆಗಳ ಸಹಿತ ಉದಾಹರಣೆಗೆ ಕುಟುಂಬ ಸದಸ್ಯರು ಮತ್ತು ನಾಮನಿರ್ದೇಶಗಳ ಮಾಹಿತಿಯನ್ನು ಕಲೆ ಹಾಕುವುದು, ನಿವೃತ್ತಿಯಾಗುವ ಸಮಯದಲ್ಲಿ ಪಿಂಚಣಿಗೆ ಸಂಬಂಧಪಟ್ಟ ದಾಖಲೆಗಳನ್ನು ಒದಗಿಸುವುದರಿಂದ ನಿವೃತ್ತಿಯಾದ ಒಂದು ತಿಂಗಳೊಳಗಾಗಿ ಯಾವುದೇ ಸಮಸ್ಯೆ ಇಲ್ಲದೆ ನಿವೃತ್ತಿ ಸೌಲಭ್ಯಗಳನ್ನು ಪಡೆಯುವ ಅವಕಾಶವನ್ನು ಕಲ್ಪಿಸುವುದು.

**ಪ್ರಸ್ತುತ ಜಾರಿಯಲ್ಲಿರುವ ಹೆಚ್.ಆರ್.ಎಂ.ಎಸ್. ತಂತ್ರಾಂಶವನ್ನು ಬಲಪಡಿಸಿ ನಿವೃತ್ತಿ ಹೊಂದುವ ನೌಕರರಿಗೆ ಪಿಂಚಣಿ ಸವಲತ್ತುಗಳನ್ನು ಹೆಚ್.ಆರ್.ಎಂ.ಎಸ್. ತಂತ್ರಾಂಶದ ಮೂಲಕವೇ ಪಡೆಯುವ ಅವಕಾಶ ಕಲ್ಪಿಸುವುದು.**

–*–

**29. ನಿವೃತ್ತಿದಾರರಿಗೆ ಕೊಡಲಾಗುವ ತುಟ್ಟಿಭತ್ಯೆಯು ಏರುತ್ತಿರುವ ಜೀವನ ನಿರ್ವಹಣಾ ವೆಚ್ಚದ ಹೆಚ್ಚಳವನ್ನು ಸರಿದೂಗಿಸಲು ಸಮರ್ಪಕವಾಗಿದೆಯೇ? ಈ ಬಗ್ಗೆ ನಿಮ್ಮ ನಿರ್ದಿಷ್ಟ ಸಲಹೆಗಳೇನು?**

ಸೇವಾನಿರತ ನೌಕರರಿಗೆ ನೀಡುವ ವಾರ್ಷಿಕ ವೇತನ ಬಡ್ತಿ ದರದಲ್ಲಿಯೇ ನಿವೃತ್ತ ನೌಕರರಿಗೂ ಸಹ ಸಮನಾಂತರ ತುಟ್ಟಿಭತ್ಯೆಯನ್ನು ನೀಡಲು ಶಿಫಾರಸ್ಸು ಮಾಡುವುದು.

–*–

**30. ಪ್ರಸ್ತುತ ನಿವೃತ್ತಿದಾರರಿಗೆ ಅವರು 80, 85, 90, 95, 100 ಹಾಗೂ ಅದಕ್ಕೂ ಮೇಲ್ಪಟ್ಟ ವರ್ಷ ವಯಸ್ಸನ್ನು ತಲುಪಿದಾಗ ಕ್ರಮವಾಗಿ ಶೇ.20, ಶೇ.30, ಶೇ.40, ಶೇ. 50 ಮತ್ತು ಶೇ.100 ರಷ್ಟು ಹೆಚ್ಚುವರಿ ನಿವೃತ್ತಿ ವೇತನ ನೀಡಲಾಗುತ್ತಿದೆ. ಸದರಿ ನಿಯಮಾವಳಿಗಳಿಗೆ ಬದಲಾವಣೆ ಅಗತ್ಯವಿದೆಯೇ?**

ಕೇಂದ್ರ ಸರ್ಕಾರವು 7ನೇ ವೇತನ ಆಯೋಗದ ವರದಿಯನ್ನಾಧರಿಸಿ ಪಿಂಚಣಿದಾರರ ವಯಸ್ಸು ಹೆಚ್ಚಾದಂತೆ ಹೆಚ್ಚುವರಿ ಪಿಂಚಣಿ ನೀಡುವ ವ್ಯವಸ್ಥೆಯನ್ನು ಜಾರಿಗೊಳಿಸಿದೆ. ಪ್ರಸ್ತುತ ಪರಿಸ್ಥಿತಿಗನುಗುಣವಾಗಿ ಪಿಂಚಣಿದಾರರಿಗೆ ವಯಸ್ಸಿನ ಅಂತರವನ್ನು ಪರಿಗಣಿಸಿ ಹೆಚ್ಚುವರಿ ಪಿಂಚಣಿಯನ್ನು ಈ ಕೆಳಕಂಡಂತೆ ನೀಡುವ ಅವಶ್ಯಕತೆ ಇರುತ್ತದೆ.

- ಹಿಮಾಚಲಪ್ರದೇಶ ಮತ್ತು ಪಂಜಾಬ್ ರಾಜ್ಯ ಸರ್ಕಾರಗಳು 65 ವರ್ಷಗಳಿಗೆ ಹೆಚ್ಚುವರಿ ಪಿಂಚಣಿಯನ್ನು ಪಾವತಿಸುತ್ತಿರುವುದಲ್ಲದೆ, ಆಂಧ್ರಪ್ರದೇಶ ಹಾಗೂ ತೆಲಂಗಾಣ ರಾಜ್ಯ ಸರ್ಕಾರಗಳು 70 ವರ್ಷಗಳಿಗೆ ಹೆಚ್ಚುವರಿ ಪಿಂಚಣಿ ಸವಲತ್ತನ್ನು ಕಲ್ಪಿಸಿವೆ.
- ರಾಜ್ಯದ ಪಿಂಚಣಿದಾರರಲ್ಲಿ 80 ವರ್ಷ ವಯೋಮಾನಕ್ಕಿಂತ ಹೆಚ್ಚಿನ ಪಿಂಚಣಿದಾರರು ಬದುಕುಳಿದಿರುವವರ ತೀರ ಕಡಿಮೆ ಸಂಖ್ಯೆಯಲ್ಲಿದ್ದಾರೆ. ಆದುದರಿಂದ;

**ಕೋಷ್ಟಕ–35 : ಪಿಂಚಣಿಯನ್ನು ಈ ಕೆಳಕಂಡಂತೆ ಮಂಜೂರು ಮಾಡುವುದು.**

| ಪಿಂಚಣಿದಾರ/ಕುಟುಂಬ ಪಿಂಚಣಿದಾರರ ವಯಸ್ಸು ಈ ಕೆಳಕಂಡ | ಹೆಚ್ಚುವರಿ ಪಿಂಚಣಿಯ ಪ್ರಮಾಣ |
|---|---|
| **70–75 ವರ್ಷಕ್ಕಿಂತ ಕಡಿಮೆ** | **ಪರಿಷ್ಕೃತ ಮೂಲ ಪಿಂಚಣಿ/ಕುಟುಂಬ ಪಿಂಚಣಿಯ 20%** |
| **75–80 ವರ್ಷಕ್ಕಿಂತ ಕಡಿಮೆ** | **ಪರಿಷ್ಕೃತ ಮೂಲ ಪಿಂಚಣಿ/ಕುಟುಂಬ ಪಿಂಚಣಿಯ 30%** |
| **80–85 ವರ್ಷಕ್ಕಿಂತ ಕಡಿಮೆ** | **ಪರಿಷ್ಕೃತ ಮೂಲ ಪಿಂಚಣಿ/ಕುಟುಂಬ ಪಿಂಚಣಿಯ 40%** |
| **85–90 ವರ್ಷಕ್ಕಿಂತ ಕಡಿಮೆ** | **ಪರಿಷ್ಕೃತ ಮೂಲ ಪಿಂಚಣಿ/ಕುಟುಂಬ ಪಿಂಚಣಿಯ 50%** |
| **90 ವರ್ಷಕ್ಕಿಂತ ಮೇಲೆ** | **ಪರಿಷ್ಕೃತ ಮೂಲ ಪಿಂಚಣಿ/ಕುಟುಂಬ ಪಿಂಚಣಿಯ 100%** |

**ಕರ್ನಾಟಕ ರಾಜ್ಯದ ನಿವೃತ್ತ ಪಿಂಚಣಿದಾರರಿಗೆ ಮೇಲ್ಕಂಡಂತೆ ವಯೋಮಾನವನ್ನಾಧರಿಸಿ ಹೆಚ್ಚುವರಿ ಪಿಂಚಣಿಯನ್ನು ಮಂಜೂರು ಮಾಡಲು ಸರ್ಕಾರಕ್ಕೆ ಶಿಫಾರಸ್ಸು ಮಾಡುವುದು.**

–*–

**31. ಈಗ ನೀಡುತ್ತಿರುವಂತೆ ಮೂಲ ವೇತನದ ಶೇ.30% ರ ಕುಟುಂಬ ಪಿಂಚಣಿಯ ಪ್ರಮಾಣ ಸಮರ್ಪಕವಾಗಿದೆಯೇ?**

ಕುಟುಂಬ ಪಿಂಚಣಿದಾರರು ಪ್ರಸ್ತುತ ಮಾರುಕಟ್ಟೆ ಬೆಲೆಯಲ್ಲಿ ನಿತ್ಯ ಜೀವನ ನಿರ್ವಹಣೆ ಮಾಡುವಲ್ಲಿ ಹಾಗೂ ಅಗತ್ಯ ಚಿಕಿತ್ಸಾ ಸವಲತ್ತುಗಳನ್ನು ಪಡೆಯಲು ಕಷ್ಟಸಾಧ್ಯವಾಗುತ್ತಿರುವ ಹಿನ್ನೆಲೆಯಲ್ಲಿ ಹಾಲಿ ಇರುವ ಶೇ. 30% ರ ಕುಟುಂಬ ಪಿಂಚಣಿಯ ಪ್ರಮಾಣವನ್ನು ಮೂಲ ವೇತನದ ಶೇ. 40% ಕ್ಕೆ ಹೆಚ್ಚಳ ಮಾಡುವುದು.

–*–

**32. ಕಾಲಕಾಲಕ್ಕೆ ತರಲಾದ ಬದಲಾವಣೆಗಳೊಂದಿಗೆ ಕೇಂದ್ರ ಸರ್ಕಾರವು ತನ್ನ ನೌಕರರಿಗೆ ಜಾರಿಗೊಳಿಸಿರುವ ಮಾದರಿಯಲ್ಲಿ ರಾಜ್ಯ ಸರ್ಕಾರವು ತನ್ನ ನೌಕರರಿಗೆ ಎನ್.ಪಿ.ಎಸ್. ಯೋಜನೆಯನ್ನು ಅನುಷ್ಟಾನಗೊಳಿಸಿದೆ. ಈ ಯೋಜನೆಯನ್ನು ಮತ್ತಷ್ಟು ಸರಳೀಕರಣಗೊಳಿಸಲು ಅಥವಾ ಸುಧಾರಣೆಗೆ ಯಾವುದೇ ಸಲಹೆಗಳಿವೆಯೇ ?**

ಕೇಂದ್ರ ಸರ್ಕಾರವು 1–4–2004 ರಿಂದ ಅನ್ವಯಗೊಳ್ಳುವಂತೆ ನೂತನ ಪಿಂಚಣಿ ಯೋಜನೆಯನ್ನು ಅನುಷ್ಠಾನಗೊಳಿಸಿದ್ದು, ರಾಜ್ಯ ಸರ್ಕಾರಿ ನೌಕರರ ಸಂಘದ ವಿರೋಧದ ನಡುವೆಯೂ ರಾಜ್ಯ ಸರ್ಕಾರವು ಈ ಯೋಜನೆಯನ್ನು 1–4–2006 ರಿಂದ ಜಾರಿಗೆ ತಂದಿದೆ. ಅಲ್ಲದೆ, ಈ ಯೋಜನೆಯು ಅನೇಕ ನ್ಯೂನತೆಗಳಿಂದ ಕೂಡಿರುವುದರಿಂದ ಕೆಲವೊಂದು ಉಪಲಬ್ಧಗಳನ್ನು ಮಂಜೂರು ಮಾಡಿದ್ದಾಗ್ಯೂ, ಎನ್.ಪಿ.ಎಸ್. ನೌಕರರಿಗೆ ಅನುಕೂಲವಾಗುತ್ತಿಲ್ಲ.

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಮನವಿಯನ್ನಾಧರಿಸಿ ಸರ್ಕಾರವು ಈ ಯೋಜನೆಯ ಸಾಧಕ–ಬಾಧಕಗಳ ಅಧ್ಯಯನ ನಡೆಸಿ ವರದಿ ಸಲ್ಲಿಸಲು ಅಧಿಕಾರಿಗಳ ಸಮಿತಿಯನ್ನು ರಚಿಸಿದೆ. ಆದರೆ, ಈ ಸಮಿತಿಯು ಇದುವರೆವಿಗೂ ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿರುವುದಿಲ್ಲ.

ಎನ್.ಪಿ.ಎಸ್. ಯೋಜನೆಯನ್ನು ರದ್ದುಪಡಿಸಿ ಹಳೇ ಪಿಂಚಣಿ ಯೋಜನೆಯನ್ನು ಜಾರಿಗೊಳಿಸಲು ಈ ಯೋಜನೆಗೆ ಒಳಪಡುವ ಕೇಂದ್ರ ಸರ್ಕಾರಿ ನೌಕರರು ಹಾಗೂ ರಾಷ್ಟ್ರದ ಬಹುತೇಕ ರಾಜ್ಯಗಳ ಸರ್ಕಾರಿ ನೌಕರರು ಆಯಾ ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರಕ್ಕೆ ಒತ್ತಾಯ ತರಲು ಅನೇಕ ಹೋರಾಟಗಳನ್ನು ನಡೆಸುತ್ತಿವೆ. ಇಂತಹ ಹೋರಾಟಗಳಿಗೆ ಮಣಿದ ಪಂಜಾಬ್, ರಾಜಸ್ಥಾನ, ಚತ್ತಿಸ್‌ಘಡ, ಜಾರ್ಖಂಡ್, ಹಿಮಾಚಲ ಪ್ರದೇಶ ರಾಜ್ಯದ ಸರ್ಕಾರಗಳು ಎನ್‌ಪಿಎಸ್ ಯೋಜನೆಯನ್ನು ರದ್ದುಪಡಿಸುವ ಘೋಷಣೆಯನ್ನು ಮಾಡಿರುತ್ತವೆ. ಪಶ್ಚಿಮ ಬಂಗಾಳ ಈವರೆವಿಗೂ ಈ ಯೋಜನೆಯನ್ನು ಜಾರಿಗೊಳಿಸಿರುವುದಿಲ್ಲ. ಹಾಗಾಗೀ ಮೇಲಿನ 6 ರಾಜ್ಯಗಳಲ್ಲಿ ಎನ್.ಪಿ.ಎಸ್. ಯೋಜನೆಯನ್ನು ರದ್ದುಪಡಿಸಲು ವಹಿಸಿರುವ ಕ್ರಮಗಳಂತೆ ಕರ್ನಾಟಕ ರಾಜ್ಯದಲ್ಲಿಯು ಸಹ ಎನ್.ಪಿ.ಎಸ್. ಯೋಜನೆಯನ್ನು ರದ್ದುಪಡಿಸಿ ಹಳೇ ಪಿಂಚಣಿ ಯೋಜನೆಯನ್ನು ಜಾರಿಗೊಳಿಸುವಂತೆ ರಾಜ್ಯ ಸರ್ಕಾರಕ್ಕೆ ಸೂಕ್ತ ಶಿಫಾರಸ್ಸು ಮಾಡುವುದು.

- ರಾಷ್ಟ್ರದ ಕೆಲವು ರಾಜ್ಯಗಳು ಈಗಾಗಲೇ ಎನ್.ಪಿ.ಎಸ್. ಯೋಜನೆಯನ್ನು ರದ್ದುಪಡಿಸಿರುವ ಮಾದರಿಯಲ್ಲಿ ರಾಜ್ಯದಲ್ಲೂ ಸಹ ಎನ್.ಪಿ.ಎಸ್ ಯೋಜನೆಯನ್ನು ರದ್ದುಗೊಳಿಸಿ ದಿನಾಂಕ: **01–4–2006** ರಿಂದ ಅನ್ವಯವಾಗುವಂತೆ ಹಳೆ ಪಿಂಚಣಿಯನ್ನು ಜಾರಿಗೊಳಿಸಲು ಸರ್ಕಾರಕ್ಕೆ ಶಿಫಾರಸ್ಸು ಮಾಡುವುದು.
- ವಯೋನಿವೃತ್ತಿ/ ಮೃತಪಟ್ಟಿರುವ ನೌಕರನ ಸೇವಾವಧಿಯಲ್ಲಿ ಕಟಾವಣೆಗೊಂಡ ಎನ್.ಪಿ.ಎಸ್. ಮೊತ್ತವನ್ನು ಅವಲಂಬಿತ ಕುಟುಂಬ ಸದಸ್ಯರಿಗೆ ಮರುಪಾವತಿಸುವುದು.
- ಈಗಾಗಲೇ ಎನ್.ಪಿ.ಎಸ್. ಯೋಜನೆಗೆ ಒಳಪಟ್ಟು ವಯೋನಿವೃತ್ತಿ/ ಮೃತಪಟ್ಟಿರುವ ನೌಕರರಿಗೆ ಹಳೆ ಪಿಂಚಣಿದಾರರ ಮಾದರಿಯಲ್ಲಿ ನಿವೃತ್ತಿ ವೇತನ ಹಾಗೂ ಸೌಲಭ್ಯಗಳನ್ನು ಜಾರಿಗೊಳಿಸುವುದು.
- ಸೇವೆಯಲ್ಲಿರುವ ಎನ್.ಪಿ.ಎಸ್. ಯೋಜನೆಗೆ ಒಳಪಡುವ ನೌಕರನಿಂದ ಇದುವರೆವಿಗೂ ಕಟಾವಣೆಗೊಂಡಿರುವ ಯೋಜನೆಯ ಒಟ್ಟು ಮೊತ್ತವನ್ನು ನೌಕರನಿಗೆ ಹಿಂದಿರುಗಿಸುವುದು ಅಥವಾ ಸಾಮಾನ್ಯ ಭವಿಷ್ಯ ನಿಧಿ ಖಾತೆ (ಜಿ.ಪಿ.ಎಫ್) ತೆರೆದು ವರ್ಗಾಯಿಸುವುದು.

–*–

**33. ಪ್ರಶ್ನಾವಳಿಯಲ್ಲಿ ಒಳಗೊಂಡಿರದ ಆದರೆ ಆಯೋಗದ ಉಲ್ಲೇಖದ ನಿಯಮಗಳಿಗೆ ಸಂಬಂಧಿಸಿದ ಇತರ ವಿಷಯಗಳ ಕುರಿತು ಮಾಡಲು ಯಾವುದೇ ಸಲಹೆಗಳನ್ನು ಹೊಂದಿದ್ದರೆ, ದಯವಿಟ್ಟು ಅದನ್ನು ಒದಗಿಸಿ.**

**ಖಾಲಿ ಹುದ್ದೆಗಳ ಭರ್ತಿ:–**

ರಾಜ್ಯ ಸರ್ಕಾರದ ವಿವಿಧ ವೃಂದಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಹಂತ ಹಂತವಾಗಿ ಭರ್ತಿ ಮಾಡಲು ಶಿಫಾರಸ್ಸು ಮಾಡುವ ಮೂಲಕ ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರ ಮೇಲಿನ ಕಾರ್ಯಭಾರ ಒತ್ತಡವನ್ನು ತಗ್ಗಿಸುವುದು. ಇದರಿಂದ ಶ್ರೀಸಾಮಾನ್ಯರಿಗೆ ಸರ್ಕಾರದ ಯೋಜನೆಗಳನ್ನು ಕಾಲಮಿತಿಯೊಳಗೆ ತಲುಪಿಸಲು ಸಹಕಾರಿಯಾಗಲಿದೆ. ಇದರಿಂದ ಸರ್ಕಾರಕ್ಕೆ ಉತ್ತಮ ಕೀರ್ತಿ ಲಭಿಸಲಿದೆ.

ಸರ್ಕಾರದ ಯೋಜನೆಗಳ ಯಶಸ್ವಿ ಅನುಷ್ಠಾನಕ್ಕೆ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವುದು ಅತ್ಯವಶ್ಯಕ.

**ಕೋಷ್ಟಕ–36 :ರಾಜ್ಯದಲ್ಲಿ ವೃಂದವಾರು ಮಂಜೂರಾದ / ಕಾರ್ಯನಿರ್ವಹಿಸುತ್ತಿರುವ /ಖಾಲಿ ಹುದ್ದೆಗಳ ವಿವರ**

| ನೌಕರರ ವೃಂದ | ಒಟ್ಟು ಮಂಜೂರಾದ ಹುದ್ದೆಗಳು | ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳು | ಒಟ್ಟು ಖಾಲಿ ಹುದ್ದೆಗಳು |
|---|---|---|---|
| ‘ಎ’ | 27,201 | 18,343 | 8,858 |
| ‘ಬಿ’ | 52,077 | 32,210 | 19,867 |
| ‘ಸಿ’ | 5,74,280 | 4,23,397 | 1,50,903 |
| ‘ಡಿ’ | 1,09,505 | 38,770 | 70,735 |
| ಒಟ್ಟು | 7,63,063 | 5,12,720 | 2,50,363 |

**ಈ ಕೆಳಗಿನ ಮುಂಗಡ ಮತ್ತು ಭತ್ಯೆಗಳನ್ನು ಪರಿಷ್ಕರಿಸಲು ಸರ್ಕಾರಕ್ಕೆ ಶಿಫಾರಸ್ಸು ಮಾಡುವುದು.**

- **ಸೋಲಾರ್ ವಾಟರ್ ಹೀಟರ್:–**
  ಸೋಲಾರ್ ವಾಟರ್ ಹೀಟರ್ ಖರೀದಿ ಮುಂಗಡವನ್ನು ಕನಿಷ್ಟ ರೂ. 50,000 ಸಾವಿರಕ್ಕೆ ಹೆಚ್ಚಿಸುವುದು.

- **ಮಕ್ಕಳ ಶೈಕ್ಷಣಿಕ ಭತ್ಯೆ:–**
  - ➢ ಕೇಂದ್ರ ಸರ್ಕಾರಿ ನೌಕರರಿಗೆ ಜಾರಿಯಲ್ಲಿರುವ ಮಕ್ಕಳ ಶೈಕ್ಷಣಿಕ ಭತ್ಯೆ ಯೋಜನೆಯನ್ನು ರಾಜ್ಯ ಸರ್ಕಾರಿ ನೌಕರರಿಗೂ ಸಹ ಜಾರಿಗೊಳಿಸಲು ಶಿಫಾರಸ್ಸು ಮಾಡುವುದು.
  - ➢ ಪ್ರಸ್ತುತ ವಿಶೇಷ ಸಂಯೋಜಿತ ಅಥವಾ ಸಾಮಾನ್ಯ ಶಾಲೆಗಳಲ್ಲಿ 1ನೇ ತರಗತಿಯಿಂದ 12ನೇ ತರಗತಿವರೆಗೆ ವ್ಯಾಸಂಗ ಮಾಡುತ್ತಿರುವ ಗರಿಷ್ಠ 18 ವರ್ಷಗಳ ವಯೋಮಿತಿ ಮೀರದ ರಾಜ್ಯ ಸರ್ಕಾರಿ ನೌಕರರ ಅವಲಂಬಿತ ಅಂಧ ಮತ್ತು ಚಲನ ವೈಕಲ್ಯತೆ ಹೊಂದಿರುವ ಮಕ್ಕಳ ಶಿಕ್ಷಣಕ್ಕಾಗಿ ನೀಡುತ್ತಿರುವ ಮಾಸಿಕ ರೂ.1000/–ಗಳನ್ನು ರೂ.2000/–ಗಳಿಗೆ ಹೆಚ್ಚಿಸುವುದರ ಜೊತೆಗೆ ವಿದ್ಯಾಭ್ಯಾಸ ಪೂರ್ಣಗೊಳ್ಳುವವರೆಗೆ ವಿಸ್ತರಿಸುವುದು.
- **ಸರ್ಕಾರಿ ಶಾಲಾ–ಕಾಲೇಜುಗಳನ್ನು ಪ್ರೋತ್ಸಾಹಿಸುವುದು :–**
  ರಾಜ್ಯ ಸರ್ಕಾರಿ ನೌಕರರು ತಮ್ಮ ಮಕ್ಕಳಿಗೆ ಸರ್ಕಾರಿ ಶಾಲಾ–ಕಾಲೇಜುಗಳಲ್ಲಿ ವ್ಯಾಸಂಗ ಮಾಡಿಸಿದಲ್ಲಿ ಪ್ರೋತ್ಸಾಹಧನವನ್ನು ನೀಡಲು ಶಿಫಾರಸ್ಸು ಮಾಡುವುದು.
- **ಶವಸಂಸ್ಕಾರ ಭತ್ಯೆ:–**
  ಪ್ರಸ್ತುತ ಇರುವ ಶವಸಂಸ್ಕಾರ ಭತ್ಯೆ ರೂ.15000–00 ಗಳನ್ನು ರೂ. 30,000–00 ಗಳಿಗೆ ಹೆಚ್ಚಳ ಮಾಡುವುದು.

(ಸಿ.ಎಸ್.ಷಡಾಕ್ಷರಿ)
ರಾಜ್ಯಾಧ್ಯಕ್ಷರು

| | |
|---|---|
| ದಿನಾಂಕ: | **10–02–2023** |
| ಹೆಸರು ಮತ್ತು ಪದನಾಮ | **ಸಿ.ಎಸ್. ಷಡಾಕ್ಷರಿ,<br>ರಾಜ್ಯಾಧ್ಯಕ್ಷರು,<br>ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ,<br>ಬೆಂಗಳೂರು.** |
| ವಿಳಾಸ. | **ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ,<br>ಕಬ್ಬನ್ ಉದ್ಯಾನವನ,<br>ಬೆಂಗಳೂರು–01** |
| ಇ–ಮೇಲ್. | **ksgea.bng@gmail.com** |
| ದೂರವಾಣಿ | **9448122188 / 9449756966<br>080–22354783/84** |